# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



## ಮಾರ್ಚ್ ೧ನೇ ವಾರ

02-03-2026 TO 07-03-2026

## ಪಶ್ಚಿಮ ಏಷ್ಯಾ ಸಂಘರ್ಷ

- ಶರಾವತಿ ಯೋಜನೆಗೆ ತಜ್ಞರ ಇತಿಶ್ರೀ
- ಭಾರತ- ಕೆನಡಾ: ಯುರೇನಿಯಂ ಒಪ್ಪಂದ
- 11ಜಿ ಆರ್ಥಿಕತೆ
- 'ಮುಖ್ಯಮಂತ್ರಿ ಸೌರ ಕೃಷಿ' ಯೋಜನೆ

# ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ

## ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ 15 ಮಂದಿ ಭಾರತೀಯರು

ದುಬೈ (ಪ್ರಜಾವಾಣಿ ವಾರ್ತೆ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ ನಡೆಸಲಾಗಿದ್ದು, ಅದರಲ್ಲಿ 15 ಮಂದಿ ಭಾರತೀಯರಿದ್ದರು ಎಂದು ತಿಳಿದುಬಂದಿದೆ. ದಾಳಿಯಿಂದ ಕನಿಷ್ಠ 4 ಮಂದಿ ಗಾಯಗೊಂಡಿದ್ದು, ತಕ್ಷಣವೇ ವೈದ್ಯಕೀಯ ಚಿಕಿತ್ಸೆ ಕಲ್ಪಿಸಲಾಗಿದೆ ಎಂದು ಒಮಾನ್‌ನ ಕಡಲ ಭದ್ರತಾ ಕೇಂದ್ರವು ತಿಳಿಸಿದೆ.

ಟ್ಯಾಂಕರ್‌ನಲ್ಲಿ 20 ಮಂದಿ ಪ್ರಯಾಣಿಸುತ್ತಿದ್ದರು. ಈ ಪೈಕಿ ಐದು ಮಂದಿ ಇರಾನ್ ನಾಗರಿಕರು. ಈ ಟ್ಯಾಂಕರ್ ಹೊರ್ಮುಜ್ ಜಲಸಂಧಿಯತ್ತ ಹೊರಟಿತ್ತು, ಮುಸಾಡಂಮ್ ಕಸಾಬ್ ಬಂದರಿನಿಂದ ಐದು ನಾಟಿಕಲ್ ಮೈಲಿ ದೂರದಲ್ಲಿದ್ದ ವೇಳೆ ಈ ದಾಳಿ ನಡೆದಿದೆ.

'ಹೊರ್ಮುಜ್ ಜಲಸಂಧಿಯ ಮೂಲಕ ಯಾವುದೇ ಸರಕು ಸಾಗಣೆಗೆ ಅವಕಾಶ ನೀಡುವುದಿಲ್ಲ' ಎಂದು ಗಲ್ಫ್ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಘರ್ಷದ ಬಳಿಕ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಹೇಳಿಕೆ ನೀಡಿದೆ. ಆ ಮೂಲಕ ಗಲ್ಫ್‌ನಲ್ಲಿ ತೈಲ ಉತ್ಪಾದಿಸುತ್ತಿರುವ ಅಮೆರಿಕ ಹಾಗೂ ಮಿತ್ರಪಡೆಗಳ ತೈಲ ವಿತರಣೆಯನ್ನು ಸ್ಥಗಿತಗೊಳಿಸಲು ಇರಾನ್ ಸಿದ್ಧತೆ ನಡೆಸಿದೆ.




ಹೊರ್ಮುಜ್ ಜಲಸಂಧಿಯು ಇರಾನ್ ಹಾಗೂ ಒಮಾನ್ ನಡುವಿನ ಕಿರಿದಾದ ಮಾರ್ಗವಾಗಿದ್ದು, ಜಾಗತಿಕ ವಹಿವಾಟಿನ ಐದನೇ ಒಂದು ಭಾಗವನ್ನು ಹೊಂದಿದೆ. ತೈಲ ಹಾಗೂ ಅನಿಲ ಟ್ಯಾಂಕರ್‌ನ ಶೇಕಡಾ 20ರಷ್ಟು ಇದೇ ಮಾರ್ಗದ ಮೂಲಕ ವಿವಿಧ ದೇಶಗಳಿಗೆ ತಲುಪುತ್ತವೆ.

ಕಿರಿದಾದ ಸ್ಥಳದಲ್ಲಿ 33 ಕಿ.ಮೀ ಅಗಲವಿರುವ ಈ ಮಾರ್ಗವು ಒಪೆಕ್ ರಾಷ್ಟ್ರಗಳಾದ (ಪೆಟ್ರೋಲ್ ರಫ್ತು ಮಾಡುವ ಸದಸ್ಯ ರಾಷ್ಟ್ರಗಳು) ಕುವೈತ್, ಬಹರೇನ್, ಕತಾರ್, ಸಂಯುಕ್ತ ಅರಬ್ ಒಕ್ಕೂಟ (ಯುಎಇ), ಇರಾಕ್ ದೇಶಕ್ಕೂ ಅರೇಬಿಯನ್ ಸಮುದ್ರದೊಂದಿಗೆ ಸಂಪರ್ಕ ಕಲ್ಪಿಸುವ ಏಕೈಕ ಸಮುದ್ರ ಮಾರ್ಗವಾಗಿದೆ. ಕೆಂಪು ಸಮುದ್ರ ಹಾಗೂ ಸೂಯೆಜ್ ಕಾಲುವೆಯ ಮೂಲಕ ಉತ್ತರ ಅಮೆರಿಕ ಹಾಗೂ ಪಶ್ಚಿಮ ಯುರೋಪ್ ರಾಷ್ಟ್ರಗಳಿಗೆ ಈ ಮಾರ್ಗವೂ ಸಂಪರ್ಕ ಕಲ್ಪಿಸುತ್ತದೆ. ಈ ಜಲಸಂಧಿಯು ಒಮಾನ್ ಹಾಗೂ ಇರಾನ್ ನಡುವೆ ಇದೆ. ಅತ್ಯಂತ ಕಿರಿದಾದ ಮಾರ್ಗದಲ್ಲಿ 33 ಕಿ.ಮೀ ಅಗಲ ಹೊಂದಿದ್ದು, ಹಡಗುಗಳು ಸಂಚರಿಸುವ ಮಾರ್ಗಗಳು ಎರಡು ಭಾಗದಲ್ಲಿ 3 ಕಿ.ಮೀನಷ್ಟೇ ಅಗಲ ಹೊಂದಿದೆ.

KPSC
PRELIMS
CUM MAINS
ADMISSIONS OPEN
MORNING, AFTERNOON
& EVENING BATCHES
WALK-IN FOR FREE
COUNSELING TODAY!
ENROLL
NOW!!
Asst. Labour Commissioner
AC(CT)
EO
DSWO
DySP
Tahsildar
CTO
TSWO
ASP(Prison)
AC(Revenue)
DySP(Excise)
IF YOU CAN DREAM IT
YOU CAN DO IT!!
TAKE THE FIRST STEP!
JOIN OUR COURSE NOW!


# ಮೈಸೂರು ರೇಷ್ಮೆ ಮಸುಕಾಗಲಿದೆಯೇ ಹೊಳಪು?

ಕ್ರೀಡಾಂಗಣ ನಿರ್ಮಾಣಕ್ಕೆ ತಿ.ನರಸೀಪುರ ಕೆಎಸ್ಐಸಿ ನೂಲು ತೆಗೆಯುವ ಕಾರ್ಖಾನೆ ಜಾಗ

ಬೇಡಿಕೆ ಮತ್ತು ಪೂರೈಕೆ

8,909 ತಿಂಗಳ ಸರಾಸರಿ ರೇಷ್ಮೆ ಸೀರೆ ತಯಾರಿಕೆ

10,690 ತಿಂಗಳ ರೇಷ್ಮೆ ಸೀರೆ ಬೇಡಿಕೆ

ಕೆಎಸ್ಐಸಿ ವಾರ್ಷಿಕ ವಹಿವಾಟು (ಕೋಟಿಗಳಲ್ಲಿ)

| ವರ್ಷ | ತೆರಿಗೆ ನಂತರದ ಲಾಭ | ವಹಿವಾಟು |
|---|---|---|
| 2020-21 | 28 | ₹126 |
| 2021-22 | 32 | ₹165 |
| 2022-23 | 47 | ₹206 |
| 2023-24 | 73 | ₹248 |
| 2024-25 | ₹101 | ₹296 |

ಕಾರ್ಖಾನೆ ಸ್ಥಗಿತಗೊಳ್ಳುವ ಆತಂಕ

ಕೆಎಸ್ಐಸಿ ಮಳಿಗೆಗಳು

ತಿ.ನರಸೀಪುರದ ಕೆಎಸ್ಐಸಿ ನೂಲು ತೆಗೆಯುವ ಕಾರ್ಖಾನೆಯ ಒಂದು ನೋಟ

'ಬುದ್ಧಿಗೇಡಿ ಕೆಲಸ ಬೇಡ'

ಜೀವವೈವಿಧ್ಯದ ತಾಣ

'ಯಾವುದೇ ತೊಂದರೆ ಇಲ್ಲ'

'ಕಾರ್ಖಾನೆ ಮುಚ್ಚುವುದಿಲ್ಲ'

ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಸಂಗ್ರಹಿಸಿರುವ ಕಲ್ಲಿದ್ದಲು

## ❖ ಅಡುಗೆ ಎಣ್ಣೆ ಆಮದಿಗೆ ತೊಂದರೆ?

**ಸಂದರ್ಭ: ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಭಾರತಕ್ಕೆ ಸೂರ್ಯಕಾಂತಿ ಎಣ್ಣೆ ಹಾಗೂ ರಸಗೊಬ್ಬರ ತಯಾರಿಕೆಯಲ್ಲಿ ಬಳಸುವ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳುವಲ್ಲಿ ಸಮಸ್ಯೆ ಸೃಷ್ಟಿ ಆಗಬಹುದು ಎಂದು ಉದ್ಯಮಗಳು ಆತಂಕ ವ್ಯಕ್ತಪಡಿಸಿವೆ.**

- ಅಲ್ಲದೆ, ಕೃಷಿ ಉತ್ಪನ್ನಗಳನ್ನು ಯುರೋಪ್ ಹಾಗೂ ಪಶ್ಚಿಮ ಏಷ್ಯಾದ ದೇಶಗಳಿಗೆ ರಫ್ತು ಮಾಡುವವರಿಗೆ ಕೂಡ ತೊಂದರೆ ಆಗುತ್ತದೆ ಎಂದು ಅವು ಹೇಳಿವೆ.
- ಪಶ್ಚಿಮ ಏಷ್ಯಾ ಮೂಲಕ ಸಾಗುವ ಹಡಗುಗಳಲ್ಲಿ ಸರಕು ರವಾನೆ ಮಾಡುವವರಿಂದ ತುರ್ತು ಬಿಕ್ಕಟ್ಟು ಶುಲ್ಕವನ್ನು ಸಂಗ್ರಹಿಸಲು ಸರಕು ಸಾಗಣೆ ಕಂಪನಿಗಳು ಶುರುಮಾಡಿವೆ. ಇದರಿಂದಾಗಿ ಆಮದು ವೆಚ್ಚ ಹೆಚ್ಚಾಗಿದೆ.
- 'ಈಗ ಪಶ್ಚಿಮ ಏಷ್ಯಾ ಭಾಗಕ್ಕೆ ರಫ್ತು ಕೂಡ ಅಮಾನತಿನಲ್ಲಿ ಇದೆ. ಸಂಘರ್ಷ ಮುಂದುವರಿದಿರುವ ಕಾರಣದಿಂದಾಗಿ ಸಮಸ್ಯೆ ಇದೆ. ಸರಕು ಸಾಗಣೆ ಕಂಪನಿಗಳು ಹೆಚ್ಚುವರಿ ವಿಮಾ ಶುಲ್ಕ ವಿಧಿಸಬಹುದು. ಇದರಿಂದಾಗಿ ಅಮದು ವೆಚ್ಚ ಕೂಡ ಜಾಸ್ತಿ ಆಗಬಹುದು' ಎಂದು ರಸಗೊಬ್ಬರ ಉದ್ಯಮ ಸಂಘಟನೆಯೊಂದರ (ಎಸ್ಎಫ್ಐಎ) ಅಧ್ಯಕ್ಷ ರಾಜೀವ್ ಚಕ್ರವರ್ತಿ ಹೇಳಿದ್ದಾರೆ.

- ಡಿಎಪಿ ಹಾಗೂ ಎಸ್‌ಎಸ್‌ಪಿ ರಸಗೊಬ್ಬರ ತಯಾರಿಕೆಯಲ್ಲಿ ಬಳಕೆಯಾಗುವ ಗಂಧಕ ಮತ್ತು ಗಂಧಕಾಮ್ಲ ಆಮದಿನ ವಿಚಾರವಾಗಿ ಚಕ್ರವರ್ತಿ ಕಳವಳ ವ್ಯಕ್ತಪಡಿಸಿದ್ದಾರೆ. ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಬಿತ್ತನೆ ಸಂದರ್ಭದಲ್ಲಿ ಈ ರಸಗೊಬ್ಬರಗಳ ಅಗತ್ಯ ಇರುತ್ತದೆ. ಭಾರತ ಆಮದು ಮಾಡಿಕೊಳ್ಳುವ ಗಂಧಕದಲ್ಲಿ ಶೇ 76ರಷ್ಟು ಕತಾರ್. ಯುಎಇ ಮತ್ತು ಒಮಾನ್‌ನಿಂದ ಬರುತ್ತದೆ.
- **ಅಡುಗೆ ಎಣ್ಣೆಗೆ ಸಮಸ್ಯೆ:** ಭಾರತವು ಪ್ರತಿವರ್ಷ ಅಂದಾಜು 1.6 ಕೋಟಿ ಟನ್ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಸೂರ್ಯಕಾಂತಿ ಎಣ್ಣೆಯ ಪಾಲು ಸರಿಸುಮಾರು ಶೇ 20ರಷ್ಟಿದೆ. ಇವನ್ನು ಮುಖ್ಯವಾಗಿ ರಷ್ಯಾ, ಉಕ್ರೇನ್ ಮತ್ತು ಅರ್ಜೆಂಟಿನಾದಿಂದ ತರಿಸಲಾಗುತ್ತದೆ. ಹಡಗುಗಳು ಕೆಂಪು ಸಮುದ್ರದ ಮೂಲಕ ಬರಲು ಅವಕಾಶ ಆಗದೆ ಇದ್ದಲ್ಲಿ, ಸಾಗಣೆ ವಿಳಂಬವಾಗುತ್ತದೆ.
- 'ಇದುವರೆಗೆ ಸಮಸ್ಯೆ ಆಗಿಲ್ಲ. ಆದರೆ ಬಿಕ್ಕಟ್ಟು ಮುಂದುವರಿದರೆ ಸೂರ್ಯಕಾಂತಿ ಎಣ್ಣೆಯ ಪೂರೈಕೆಗೆ ಅಡಚಣೆ ಎದುರಾಗಬಹುದು. ಏಕೆಂದರೆ ಹಡಗುಗಳು ಸುತ್ತುಬಳಸಿನ ಮಾರ್ಗವನ್ನು ಹಿಡಿಯಬೇಕಾಗುತ್ತದೆ' ಭಾರತೀಯ ಎಣ್ಣೆ ಗಿರಣಿಗಳ ಮಾಲೀಕರ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ.ಮೆಹ್ರಾ ಹೇಳಿದ್ದಾರೆ.
- ಭಾರತದಿಂದ ರಫ್ತಾಗುವ ಖಾದ್ಯ ತೈಲದಲ್ಲಿ ಶೇ 20ರಷ್ಟು ಪಶ್ಚಿಮ ಏಷ್ಯಾ ದೇಶಗಳಿಗೆ ಹಾಗೂ ಶೇ 15ರಷ್ಟು ಪಾಲು ಯುರೋಪಿನ ದೇಶಗಳಿಗೆ ತಲುಪುತ್ತದೆ. ಖಾದ್ಯ ತೈಲ, ಕೃಷಿ ಉತ್ಪನ್ನ ತೋಟಗಾರಿಕಾ ಬೆಳೆಗಳು ಹಾಗೂ ಪುಷ್ಪಕೃಷಿ ಉತ್ಪನ್ನಗಳ ರಫ್ತನ ಮೇಲೆಯೂ ಈ ಸಮರದಿಂದಾಗಿ ದುಷ್ಪರಿಣಾಮ ಆಗಬಹುದು.

## ❖ ಚಾಲ್ತಿ ಖಾತೆ ಕೊರತೆ ಏರಿಕೆ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕ ದಲ್ಲಿ ದೇಶದ ಚಾಲ್ತಿ ಖಾತೆ ಕೊರತೆ (ಸಿಎಡಿ) ₹1.21 ಲಕ್ಷ ಕೋಟಿ ಅಥವಾ ಜಿಡಿಪಿಯ ಶೇ 1.3ರಷ್ಟು ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.**

- ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಇದು 1 ಲಕ್ಷ ಕೋಟಿಯಷ್ಟಾಗಿತ್ತು. ವ್ಯಾಪಾರ ಕೊರತೆ ಹೆಚ್ಚಳವೇ ಚಾಲ್ತಿ ಖಾತೆ ಕೊರತೆ ಏರಿಕೆಗೆ ಕಾರಣ ಎಂದು ತಿಳಿಸಿದೆ.
- ಆದರೆ, 2024-25ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ದೇಶದ ಚಾಲ್ತಿ ಖಾತೆ ಕೊರತೆ ₹3.35 ಲಕ್ಷ ಕೋಟಿಯಷ್ಟಿತ್ತು. ಇದು ಪ್ರಸಕ್ತ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2.76 ಲಕ್ಷ ಕೋಟಿಗೆ ಇಳಿದಿದೆ.
- ಸರಕುಗಳ ವ್ಯಾಪಾರ ಕೊರತೆ ₹8.58 ಲಕ್ಷ ಕೋಟಿಯಷ್ಟಿದ್ದರೆ, ಸೇವೆಗಳ ನಿವ್ವಳ ಸ್ವೀಕೃತಿ ₹5.2 ಲಕ್ಷ ಕೋಟಿಯಷ್ಟಿದೆ ಎಂದು ತಿಳಿಸಿದೆ.
- ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವ ಭಾರತೀಯರು ತಾಯ್ನಾಡಿಗೆ 3.38 ಲಕ್ಷ ಕೋಟಿ ರವಾನಿಸಿದ್ದಾರೆ. ವಿದೇಶಿ ನೇರ ಹೂಡಿಕೆಯ ಹರಿವು 33,917 ಕೋಟಿಯಾಗಿದೆ ಎಂದು ಆರ್‌ಬಿಐ ಹೇಳಿದೆ.
- ಮೀಸಲು ಸಂಗ್ರಹ ಏರಿಕೆ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹1.77 ಲಕ್ಷ 2 ಕೋಟಿಯಷ್ಟಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 198,068 ಕೋಟಿಯಷ್ಟಿತ್ತು.

## ❖ ಪರಮಾಣು ಸಿಡಿತಲೆಗಳನ್ನು ಹೆಚ್ಚಿಸುತ್ತೇವೆ: ಫ್ರಾನ್ಸ್

**ಸಂದರ್ಭ: ದೇಶವು ಪರಮಾಣು ಸಿಡಿತಲೆಗಳ ಸಂಖ್ಯೆಯನ್ನು 300ರಿಂದ ಹೆಚ್ಚಿಸಲಿದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಸೋಮವಾರ ಹೇಳಿದ್ದಾರೆ.**

- ದೇಶದ ಗುರಿ ನಿರ್ದೇಶಿತ ಕ್ಷಿಪಣಿ ಜಲಾಂತರ್ಗಾಮಿಯನ್ನು ಹೊಂದಿರುವ ವಾಯುಷ್ಕ ಫ್ರಾನ್ಸ್‌ನ ಲೈಲೆ ಲಾಂಜ್‌ನ ಸೇನಾ ನೆಲೆಯಲ್ಲಿ ಶಸ್ತ್ರಾಗಾರದ ಸಿಡಿತಲೆಗಳನ್ನು ಹೆಚ್ಚಿಸಲು ನಾನು ತೀರ್ಮಾನಿಸಿದ್ದೇನೆ' ಎಂದು ಅವರು ಹೇಳಿದ್ದಾರೆ. ಆದಾಗ್ಯೂ, ಎಷ್ಟು ಹೆಚ್ಚಳ ವಾಗಲಿದೆ ಎಂಬ ಅಂಕಿ ಅಂಶವನ್ನು ಅವರು ನೀಡಲಿಲ್ಲ.

Dr. Rajkumar IAS Academy

- 1992ರ ನಂತರ ಫ್ರಾನ್ಸ್ ತನ್ನ ಪರಮಾಣು ಶಸ್ತ್ರಾಗಾರವನ್ನು ಹೆಚ್ಚಿಸಿರಲಿಲ್ಲ.

## ❖ "ತಂಬಾಕು: ಸರಾಸರಿ ಬೆಲೆಗೆ ಖರೀದಿಸಿ'

**ಸಂದರ್ಭ: 'ರಾಜ್ಯದ ತಂಬಾಕು ಮಾರುಕಟ್ಟೆಗಳಲ್ಲಿ ರೈತರಿಂದ ಹಿಂದಿನ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಳಿಯು ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸಬೇಕು' ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು.**

### <u>ತಂಬಾಕು ಮಂಡಳಿ</u>

- 'ತಂಬಾಕು ಉತ್ಪನ್ನಗಳಿಗೆ ವಿಧಿಸುವ ತೆರಿಗೆ ಕುರಿತು ದೂರುಗಳಿದ್ದಲ್ಲಿ ಲಿಖಿತವಾಗಿ ಸಲ್ಲಿಸಿದರೆ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತರಬಹುದು. ಆದರೆ ತೆರಿಗೆ ನೆಪದಲ್ಲಿ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.
- ಐಟಿಸಿ ಕಂಪನಿಯ ಹಿರಿಯ ಅಧಿಕಾರಿ ರವಿ, 'ತಂಬಾಕು ಉತ್ಪನ್ನ-ಗಳಿಗೆ ವಿಧಿಸುತ್ತಿದ್ದ ಜಿಎಸ್‌ಟಿಯನ್ನು ಕೇಂದ್ರವು ಶೇ 18ರಿಂದ ಶೇ 40ಕ್ಕೆ ಏರಿಸಿದೆ. ಸಿಗರೇಟ್‌ಗಳ ಮೇಲಿನ ತೆರಿಗೆ ದುಪ್ಪಟ್ಟಾಗಿದೆ. ಇದರಿಂದ ಉತ್ಪನ್ನ ಗಳಿಗೆ ಬೇಡಿಕೆ ಕುಸಿಯುತ್ತಿದ್ದು, ನಾವು ಕಡಿಮೆ ತಂಬಾಕು ಖರೀದಿಸುವುದು ಅನಿವಾರ್ಯವಾಗಿದೆ. ಆದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ' ಎಂದು ಹೇಳಿದರು.
- ತಂಬಾಕನ್ನು ಬೆಳೆ ವಿಮೆ ವ್ಯಾಪ್ತಿಗೆ ಸೇರಿಸಲು ಕೇಂದ್ರ ಸರ್ಕಾರವು ಸಮ್ಮತಿಸಿದ್ದು, ಕರ್ನಾಟಕವೂ ಇದನ್ನು ಹವಾಮಾನ ಆಧಾರಿತ ಬೆಳೆ ವಿಮೆ ಪಟ್ಟಿಗೆ ಸೇರಿಸಬೇಕು ತಂಬಾಕು ಮಂಡಳಿಯ ಅಧ್ಯಕ್ಷ ಯಶವಂತ ಕುಮಾರ್ ಅವರು ಸಭೆಯಲ್ಲಿ ಅಭಿಪ್ರಾಯಪಟ್ಟರು.
- **<u>ಖರೀದಿಸಲು ಸೂಚನೆ:</u>** ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, 'ರಾಜ್ಯದಲ್ಲಿ ಈ ವರ್ಷ 8.5 ಕೋಟಿ ಕೆ.ಜಿ. ತಂಬಾಕು ಬೆಳೆದಿದ್ದು, 4 ಕೋಟಿ ಕೆ.ಜಿ. ಈಗಾಗಲೇ ಕಡಿಮೆ ಬೆಲೆಗೆ ಹರಾಜಾಗಿದೆ. ಉಳಿದುದನ್ನು ದಿನದ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಖರೀದಿಸಬೇಕು' ಎಂದು ಐಟಿಸಿ ಕಂಪನಿ ಪ್ರತಿನಿಧಿಗಳಿಗೆ ನಿರ್ದೇಶನ ನೀಡಿದರು.
- **<u>ಎಫ್‌ಡಿಐಗೆ ಒಲವು:</u>** 'ಐಟಿಸಿ ಕಂಪನಿಯು ಏಕಸ್ವಾಮ್ಯದಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ತಂಬಾಕಿಗೆ ಸ್ಪರ್ಧಾತ್ಮಕ ದರ ಒದಗಿಸುವ ಸಲುವಾಗಿ ಎಫ್‌ಡಿಐ ಮೂಲಕ ವಿದೇಶಿ ಕಂಪನಿಗಳೂ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು' ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಒತ್ತಾಯಿಸಿದರು.
- ಈ ಬಗ್ಗೆ ಪರಿಶೀಲಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ ತಂಬಾಕು ಮಂಡಳಿ ಕಾರ್ಯ ನಿರ್ವಾಹಕ ನಿರ್ದೇಶಕಿ ಬಿ. ವಿಶ್ವಶ್ರೀ ಹಾಗೂ ತಂಬಾಕು ಮಂಡಳಿ ಅಧ್ಯಕ್ಷ ಯಶವಂತ ಕುಮಾರ್ ತಿಳಿಸಿದರು.

Dr. Rajkumar IAS/KAS Academy

# ಭಾರತ– ಕೆನಡಾ: ಯುರೇನಿಯಂ ಒಪ್ಪಂದ

## ಮೋದಿ– ಕಾರ್ನಿ ಮಾತುಕತೆ: ₹4.58 ಲಕ್ಷ ಕೋಟಿ ವ್ಯಾಪಾರದ ಗುರಿ ನಿಗದಿ

ನವದೆಹಲಿ (ಪಿಟಿಐ): ಯುರೇನಿಯಂ ಮತ್ತು ನಿರ್ಣಾಯಕ ಖನಿಜಗಳ ಪೂರೈಕೆಗೆ ಸಂಬಂಧಿಸಿದಂತೆ ಭಾರತ ಮತ್ತು ಕೆನಡಾ ಮಹತ್ವದ ಒಪ್ಪಂದಗಳಿಗೆ ಸೋಮವಾರ ಸಹಿ ಮಾಡಿವೆ. ಇದಲ್ಲದೆ ಉಭಯ ದೇಶಗಳು ಶೀಘ್ರದಲ್ಲಿಯೇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಅಂತಿಮಗೊಳಿಸುವುದಾಗಿ ತಿಳಿಸಿವೆ.

ಭಾರತ ಪ್ರವಾಸದಲ್ಲಿರುವ ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಿದ ಬಳಿಕ ಈ ಮಹತ್ವದ ಒಪ್ಪಂದಗಳಿಗೆ ಬರಲಾಗಿದೆ.

ದ್ವಿಪಕ್ಷೀಯ ವಾರ್ಷಿಕ ವ್ಯಾಪಾರವನ್ನು 2030ರ ವೇಳೆಗೆ ₹4.58 ಲಕ್ಷ ಕೋಟಿಯಷ್ಟು (50 ಶತಕೋಟಿ ಡಾಲರ್) ವಿಸ್ತರಿಸುವ ಗುರಿ ಸೇರಿದಂತೆ ಎರಡೂ ದೇಶಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಉಭಯ ನಾಯಕರು ಹೊಸ ಚೌಕಟ್ಟನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಿದ್ದಾರೆ.

ರಕ್ಷಣಾ, ನಿರ್ಣಾಯಕ ತಂತ್ರಜ್ಞಾನ, ಪರಮಾಣು ಸ್ಥಾವರಗಳು, ಶಿಕ್ಷಣ, ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಇಬ್ಬರೂ ನಾಯಕರು ಬದ್ಧತೆ ವ್ಯಕ್ತಪಡಿಸಿದರು. ಯುರೇನಿಯಂ ಪೂರೈಕೆ ಒಪ್ಪಂದದ ಅಡಿಯಲ್ಲಿ ಭಾರತದ ನಾಗರಿಕ ಪರಮಾಣು ಇಂಧನ ವಲಯವನ್ನು ಕೆನಡಾ ಬೆಂಬಲಿಸಿದೆ.

'ನಾಗರಿಕ ಪರಮಾಣು ಇಂಧನ ಕ್ಷೇತ್ರದಲ್ಲಿ ನಾವು ದೀರ್ಘಾವಧಿಯ ಯುರೇನಿಯಂ ಪೂರೈಕೆಗಾಗಿ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಸಣ್ಣ ಮತ್ತು ಸುಧಾರಿತ ರಿಯಾಕ್ಟರ್‌ಗಳ ಮೇಲೂ ನಾವು ಒಟ್ಟಿಗೆ ದುಡಿಯಲಿದ್ದೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

'ಭಾರತ– ಕೆನಡಾ ನಡುವಿನ ಈ ಎಲ್ಲ ಒಪ್ಪಂದಗಳು ಹೊಸ, ಸಮೃದ್ಧ ಸಂಬಂಧದ ಆರಂಭವನ್ನು ತೋರಿಸುತ್ತವೆ. ಇದು ಎರಡೂ ದೇಶಗಳ ನಡುವೆ ಭವಿಷ್ಯದಲ್ಲೂ ವ್ಯವಹಾರ ವೃದ್ಧಿ ಮತ್ತು ಕಾರ್ಮಿಕರಿಗೆ ಅವಕಾಶಗಳನ್ನು ಒದಗಿಸುತ್ತದೆ' ಎಂದು ಕೆನಡಾದ ಪ್ರಧಾನಿ ಕಾರ್ನಿ ಪ್ರತಿಕ್ರಿಯಿಸಿದರು.

**'ಪರಸ್ಪರ ನಂಬಿಕೆ, ಹೊಸ ಶಕ್ತಿ':** 'ಈ ಒಪ್ಪಂದಗಳು ಮತ್ತು ಬದ್ಧತೆಗಳ ಮೂಲಕ ಉಭಯ ದೇಶಗಳ ನಡುವಿನ ಸಂಬಂಧಗಳು ಪರಸ್ಪರ ನಂಬಿಕೆ, ಹೊಸ ಶಕ್ತಿ ಮತ್ತು ಸಕಾರಾತ್ಮಕತೆಯಿಂದ ತುಂಬಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.

'ಭಯೋತ್ಪಾದನೆ, ತೀವ್ರವಾದ, ಮೂಲಭೂತವಾದಗಳು ಭಾರತ ಮತ್ತು ಕೆನಡಾ ದೇಶಗಳಿಗೆ ಮಾತ್ರವಲ್ಲದೆ, ಮಾನವೀಯತೆಗೆ ಗಂಭೀರ ಸವಾಲುಗಳಾಗಿವೆ ಎಂಬುದನ್ನು ಎರಡೂ ಕಡೆಯವರು ಒಪ್ಪಿಕೊಂಡಿದ್ದೇವೆ. ಜಾಗತಿಕ ಶಾಂತಿ ಮತ್ತು ಸ್ಥಿರತೆಗಾಗಿ ಎರಡೂ ದೇಶಗಳು ನಿಕಟ ಸಹಕಾರದಿಂದ ಕಾರ್ಯ ನಿರ್ವಹಿಸಲು ಸಹಮತ ವ್ಯಕ್ತಪಡಿಸಿವೆ' ಎಂದು ಮೋದಿ ಹೇಳಿದರು.



ಕೆನಡಾ ಪ್ರಧಾನಿ ಮಾರ್ಕ್‌ಕಾರ್ನಿ ಜತೆಗೆ ಪ್ರಧಾನಿ ನರೇಂದ್ರ ಮೋದಿ 'ಹೈದರಾ ಬಾದ್ ಹೌಸ್'ನಲ್ಲಿ ಸೋಮವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಉಭಯ ದೇಶಗಳು 2030ರ ವೇಳೆಗೆ 50 ಶತಕೋಟಿ ಡಾಲರ್ ವ್ಯಾಪಾರ ತಲುಪುವ ಗುರಿ ಹೊಂದಿವೆ. ಇದಕ್ಕಾಗಿ ಆರ್ಥಿಕ ಸಹಕಾರ ವೃದ್ಧಿಸಲು ಆದ್ಯತೆ ನೀಡಿದ್ದೇವೆ. ಶೀಘ್ರದಲ್ಲಿಯೇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಅಂತಿಮಗೊಳಿಸಲು ನಿರ್ಧರಿಸಿದ್ದೇವೆ ಎಂದು ಮೋದಿ ತಿಳಿಸಿದರು. ಇದರಿಂದ ಎರಡೂ ದೇಶಗಳಲ್ಲಿ ಹೊಸ ಹೂಡಿಕೆ, ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದರು.

**ಇಂಧನ ವಲಯದಲ್ಲಿ ಮಹತ್ವದ ನಡೆ:** 'ಇಂಧನ ಕ್ಷೇತ್ರದಲ್ಲಿ ಮುಂದಿನ ಪೀಳಿಗೆಗೂ ಪಾಲುದಾರಿಕೆಯನ್ನು ನಿರ್ಮಿಸುತ್ತಿದ್ದೇವೆ. ಹೈಡ್ರೋಕಾರ್ಬನ್‌ಗಳು ಮತ್ತು ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್ ಮತ್ತು ಇಂಧನ ಸಂಗ್ರಹಣೆ ಮೇಲೆ ಕೇಂದ್ರೀಕರಿಸಿದ್ದೇವೆ' ಎಂದು ಮೋದಿ ವಿವರಿಸಿದರು.

ಶಿಕ್ಷಣ ಕ್ಷೇತ್ರದಲ್ಲೂ ಸಂಬಂಧಗಳ ವಿಸ್ತರಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಕೃತಕ ಬುದ್ಧಿಮತ್ತೆ, ಆರೋಗ್ಯ, ರಕ್ಷಣೆ, ಕೃಷಿ, ನಾವೀನ್ಯತೆಯಲ್ಲಿ ಹಲವು ವಿಶ್ವವಿದ್ಯಾಲಯಗಳ ಜತೆಗೆ ಹೊಸ ಪಾಲುದಾರಿಕೆ ಹೊಂದಲಿದ್ದೇವೆ. ಕೆನಡಾದ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್‌ಗಳನ್ನು ತೆರೆಯಲೂ ಒಪ್ಪಿಕೊಂಡಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಕೆನಡಾದಲ್ಲಿ 2023ರಲ್ಲಿ ಖಾಲಿಸ್ತಾನ ಪ್ರತ್ಯೇಕತವಾದಿಯ ಹತ್ಯೆ ಬಳಿಕ ಉಭಯ ದೇಶಗಳ ನಡುವಿನ ಸಂಬಂಧ ಹಳಿತಪ್ಪಿತ್ತು. ಅದನ್ನು ಪುನಃ ಸ್ಥಾಪಿಸಲು ನಡೆದ ನಿರಂತರ ಪ್ರಯತ್ನಗಳ ಭಾಗವಾಗಿ ಈ ಹೊಸ ಕ್ರಮಗಳು ನಡೆದಿವೆ. ಇನ್ನೊಂದೆಡೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಜತೆಗೆ ಕೆನಡಾದ ಆರ್ಥಿಕ ಸಂಬಂಧಗಳು ಹದಗೆಡುತ್ತಿವೆ. ಕೆನಡಾವು ಭಾರತ ಜತೆಗೆ ಮಾತುಕತೆ ಮೂಲಕ ವ್ಯಾಪಾರ ಸಂಬಂಧ ವಿಸ್ತರಿಸಲು ಈ ಮೂಲಕ ಯೋಜಿಸಿದೆ.

### ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪಶ್ಚಿಮ ಏಷ್ಯಾದಲ್ಲಿನ ಅನಿಶ್ಚಿತ ಭದ್ರತಾ ಪರಿಸ್ಥಿತಿ ಬಗ್ಗೆಯೂ ಪ್ರಧಾನಿ ನರೇಂದ್ರ ಮೋದಿ ಮತ್ತು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಚರ್ಚೆ ನಡೆಸಿದರು. ಪಶ್ಚಿಮ ಏಷ್ಯಾದಲ್ಲಿನ ಈಗಿನ ಪರಿಸ್ಥಿತಿ ಬಗ್ಗೆ ಇಬ್ಬರೂ ನಾಯಕರು ತೀವ್ರ ಕಳವಳ ವ್ಯಕ್ತಪಡಿಸಿದರು.

'ಭಾರತವು ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕ ಎಲ್ಲ ಸಂಘರ್ಷ, ವಿವಾದಗಳಿಗೆ ಪರಿಹಾರ ಕಂಡುಕೊಳ್ಳುವುದನ್ನು ಬೆಂಬಲಿಸುತ್ತದೆ' ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.

'ಸಂಘರ್ಷ ಪೀಡಿತ ಪ್ರದೇಶದಲ್ಲಿ ಸಿಲುಕಿರುವ ಭಾರತೀಯ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲ ದೇಶಗಳ ಜತೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ' ಎಂದು ಮೋದಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ❖ ಅತೀಕಾ ಮತ್ತೊಂದು ಮೈಲಿಗಲ್ಲು

**ಸಂದರ್ಭ: ಭಾರತದ ಉದಯೋನ್ಮುಖ ರೇಸಿಂಗ್ ಪಟು ಅತೀಕಾ ಮೀರ್ ಅವರು ಚಾಂಪಿಯನ್ಸ್ ಆಫ್ ದಿ ಫ್ಯೂಚರ್ ಅಕಾಡೆಮಿ (ಸಿಒಟಿಎಫ್ಎ) ಸರಣಿಯ ಯುರೋಪ್ ಲೆಗ್‌ನಲ್ಲಿ ಭಾನುವಾರ ಪ್ರಶಸ್ತಿ ಗೆದ್ದುಕೊಂಡರು. ಈ ಪ್ರತಿಷ್ಠಿತ ರೇಸ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ರೇಸಿಂಗ್ ಪಟು ಎಂಬ ದಾಖಲೆಯನ್ನೂ ಸ್ಥಾಪಿಸಿದರು.**

- ಅತೀಕಾ, 15 ಸುತ್ತುಗಳಿದ್ದ ಈ ರೇಸ್‌ನಲ್ಲಿ ಎರಡನೆಯವರಾಗಿ ಸ್ಪರ್ಧೆ ಮುಗಿಸಿದರು. ಆದರೆ, ಸ್ಪರ್ಧಾ ನಂತರ ದಂಡದ ಅಂಕದಿಂದಾಗಿ ತೃತೀಯ ಸ್ಥಾನಕ್ಕೆ ಸರಿಯಬೇಕಾಯಿತು.
- 11 ವರ್ಷ ವಯಸ್ಸಿನ ಅತೀಕಾ ಅವರು ಮಿನಿ ವಿಭಾಗದಿಂದ 'ಒಕೆಎನ್‌ಜೆ' (ಜೂನಿಯರ್) ವಿಭಾಗ ಪ್ರವೇಶಿಸಿದ ಬಳಿಕ ಮೊದಲ ಸ್ಪರ್ಧೆಯಲ್ಲೇ ಯಶಸ್ಸು ಸಾಧಿಸಿದ್ದಾರೆ ಶ್ರೀನಗರದ ಬಾಲಕಿ ಎಫ್1 ಅಕಾಡೆಮಿಯ 'ಡಿಸ್ಕವರ್ ಯುವರ್ ಡ್ರೈವ್' ಅಭಿಯಾನದಡಿ ತರಬೇತಿ ಪಡೆಯುತ್ತಿದ್ದಾರೆ.

## ರಾಜ್ಯದ ಆದಾಯ ಸಂಗ್ರಹದಲ್ಲಿ ಹಿನ್ನಡೆ, ಬಡ್ಡಿ ಪಾವತಿ ಏರಿಕೆ


# ₹8.14 ಲಕ್ಷ ಕೋಟಿ ಸಾಲ

• ಜಯಸಿಂಹ ಆರ್.

ಬೆಂಗಳೂರು: ಇದೇ ತಿಂಗಳ ಅಂತ್ಯದ ಹೊತ್ತಿಗೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯ ಗಡಿ ದಾಟಲಿದೆ. 2025-26ನೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರವು ಬಡ್ಡಿ ಪಾವತಿಗೆಂದೇ ಅಂದಾಜು ₹48,000 ಕೋಟಿ ವೆಚ್ಚ ಮಾಡುತ್ತಿದೆ.

2025ರ ಮಾರ್ಚ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದಾಗ, 2025-26ನೇ ಸಾಲಿನ ಬಜೆಟ್‌ನಲ್ಲಿ ₹90,428 ಕೋಟಿಯಷ್ಟು ವಿತ್ತೀಯ ಕೊರತೆಯನ್ನು ಅಂದಾಜಿಸಿದ್ದರು.

ರಾಜ್ಯದ ಒಟ್ಟು ಸಾಲವು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 25ಕ್ಕಿಂತಲೂ (ಶೇ 24.91ರಷ್ಟು) ಕಡಿಮೆ ಇದ್ದು, ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳಲಾಗಿದೆ ಎಂದು ಸಿದ್ದರಾಮಯ್ಯ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದರು. ಆದರೆ, ಅವರ ಅಂದಾಜು ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಏರುಪೇರಾಗುವ ಸೂಚನೆ ಕಾಣಿಸಿದೆ. ಅಂದಾಜಿಸಿದಂತೆಯೇ ರಾಜ್ಯದ ಒಟ್ಟು ಸಾಲ ₹8.14 ಲಕ್ಷ ಕೋಟಿಯಷ್ಟಾದರೆ, ಆರ್ಥಿಕ ಶಿಸ್ತಿನ ಮಿತಿಯನ್ನು ಮೀರಿದಂತಾಗುತ್ತದೆ.





ಇದೇ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದ ಒಟ್ಟು ಸಾಲವು ₹7.64 ಲಕ್ಷ ಕೋಟಿಯಷ್ಟಾಗಬಹುದು ಮತ್ತು ಬಡ್ಡಿ ಪಾವತಿಗೆ ₹45,600 ಕೋಟಿ ವೆಚ್ಚ ಮಾಡಬೇಕಾಗಬಹುದು ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿತ್ತು. ಆದರೆ, ವಾಣಿಜ್ಯ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹದಲ್ಲಿ ಆಗಿರುವ ಹಿನ್ನಡೆ ಹಾಗೂ ಬಹುಮುಖ್ಯವಾಗಿ ಜಿಎಸ್‌ಟಿ ಸ್ಲ್ಯಾಬ್‌ಗಳ ಪರಿಷ್ಕರಣೆಯಿಂದಾಗಿ ರಾಜ್ಯದ ವಿತ್ತೀಯ ಕೊರತೆಯು, ಬಜೆಟ್ ಅಂದಾಜಿಗಿಂತ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಪರಿಣಾಮವಾಗಿ ರಾಜ್ಯದ ಸಾಲದ ಮೊತ್ತ ಹೆಚ್ಚಾಗಲಿದೆ.

2025-26ರ ಅಂತ್ಯದ ವೇಳೆಗೆ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯಷ್ಟಾಗಲಿದೆ ಮತ್ತು ಇದು ರಾಜ್ಯದ ಜಿಎಸ್‌ಡಿಪಿಯ ಶೇ 26.5ರಷ್ಟಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿದೆ. ▶4

## ಸಾಲ ಪ್ರಮಾಣ: ದಕ್ಷಿಣದಲ್ಲಿ ಕರ್ನಾಟಕದ್ದೇ ಉತ್ತಮ ಸ್ಥಿತಿ

ರಾಜ್ಯದ ಒಟ್ಟು ಸಾಲದ ಮೊತ್ತ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ದಕ್ಷಿಣ ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ಸ್ಥಿತಿ ಉತ್ತಮವಾಗಿಯೇ ಇದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಹೋಲಿಕೆಯಲ್ಲಿ ಒಟ್ಟು ಸಾಲದ ಶೇಕಡಾವಾರು ಪ್ರಮಾಣವು ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ಮತ್ತು ತಮಿಳುನಾಡಿಗಿಂತ ಕರ್ನಾಟಕದ್ದೇ ಕಡಿಮೆ ಎಂಬುದನ್ನು ಆರ್‌ಬಿಐನ 'ರಾಜ್ಯಗಳ ಆರ್ಥಿಕತೆ: ಬಜೆಟ್‌ಗಳ ಅಧ್ಯಯನ' ವರದಿಯ ದತ್ತಾಂಶಗಳು ಹೇಳುತ್ತವೆ. ಗೋವಾ (25.7%), ಗುಜರಾತ್ (17.9%), ಉತ್ತರಾಖಂಡ (25.3%), ಒಡಿಶಾ (20.3%), ಜಾರ್ಖಂಡ್ (25.4%) ಮತ್ತು ಮಹಾರಾಷ್ಟ್ರ (19%) ಬಿಟ್ಟರೆ, ಉಳಿದೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದ ಸಾಲದ ಪ್ರಮಾಣ ಕಡಿಮೆಯೇ ಇದೆ.




### ₹8.14 ಲಕ್ಷ ಕೋಟಿ ಸಾಲ

ಒಂದನೇ ಪುಟದಿಂದ...

ಹೀಗಿದ್ದೂ ಆರ್ಥಿಕ ಶಿಸ್ತಿನ ವಿಚಾರದಲ್ಲಿ ರಾಜ್ಯವು, ದಕ್ಷಿಣ ಭಾರತದ ಇತರ ರಾಜ್ಯಗಳಿಗಿಂತ ಉತ್ತಮ ಸ್ಥಿತಿಯಲ್ಲಿಯೇ ಇರಲಿದೆ ಎಂಬುದನ್ನೂ ಆರ್‌ಬಿಐನ 'ರಾಜ್ಯಗಳ ಆರ್ಥಿಕತೆ: ಬಜೆಟ್‌ಗಳ ಅಧ್ಯಯನ' ವರದಿಯಲ್ಲಿನ ದತ್ತಾಂಶಗಳು ಹೇಳುತ್ತವೆ. ಸಿದ್ದರಾಮಯ್ಯ ಅವರು ಈ ವಾರದಲ್ಲಿಯೇ ಮಂಡಿಸಲಿರುವ ಮುಂದಿನ ಬಜೆಟ್‌ನಲ್ಲಿ ಆರ್ಥಿಕ ಶಿಸ್ತನ್ನು ಹೇಗೆ ಕಾಪಾಡಿಕೊಳ್ಳಲಿದ್ದಾರೆ ಎಂಬುದನ್ನು ನೋಡಬೇಕಿದೆ.

2028-29ಕ್ಕೆ ₹10.17 ಲಕ್ಷ ಕೋಟಿ ಸಾಲ: 2025-26ನೇ ಮಧ್ಯಮಾವಧಿ ವಿತ್ತೀಯ ಮುನ್ನಂದಾಜಿನ ಪ್ರಕಾರ 2028-29ನೇ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಒಟ್ಟು ಸಾಲವು ₹10.17 ಲಕ್ಷ ಕೋಟಿಯಷ್ಟಾಗಲಿದೆ.

ಮುಂಬರುವ ಆರ್ಥಿಕ ವರ್ಷಗಳಲ್ಲಿ ವೇತನ-ಪಿಂಚಣಿ ಮತ್ತಿತರ ಬದ್ಧ ವೆಚ್ಚಗಳಲ್ಲಿ ಏರಿಕೆಯಾಗುವ ಸಾಧ್ಯತೆ ನಿಚ್ಚಳವಾಗಿರುವ ಕಾರಣ, ರಾಜ್ಯದ ಮೇಲಿನ ಹಣಕಾಸು ಹೊರೆಯೂ ಹೆಚ್ಚಾಗಲಿದೆ. ಈ ಹೊರೆಗಳ ನಿರ್ವಹಣೆಗೆ ಸಾಲದ ಮೇಲಿನ ಅವಲಂಬನೆ ಅನಿವಾರ್ಯ ಎಂಬುದನ್ನು ಮುನ್ನಂದಾಜಿನಲ್ಲಿ ಉಲ್ಲೇಖಿಸಲಾಗಿದೆ.

---

ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಮಾಡುವ ಕೆಲವೇ ದಿನಗಳ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದರು. ಯುದ್ಧ ಆರಂಭದ ನಂತರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆ ದೂರವಾಣಿಯಲ್ಲಿ ಮಾತುಕತೆ ನಡೆಸಿದರು. ಇರಾನ್ ದಾಳಿಗೆ ತುತ್ತಾಗಿರುವ ಕೊಲ್ಲಿ ರಾಷ್ಟ್ರಗಳ ಮುಖ್ಯಸ್ಥರೊಂದಿಗೂ ಅವರು ಮಾತನಾಡಿದ್ದಾರೆ. ಆದರೆ, ಯುದ್ಧದಲ್ಲಿ ಇರಾನ್ ಸರ್ವೋಚ್ಚ ನಾಯಕ ಮತ್ತು ಅವರ ಪತ್ನಿ ಹತ್ಯೆಗೀಡಾದರೂ, ಇದುವರೆಗೂ ಅದರ ಬಗ್ಗೆ ಸಂತಾಪ ಸೂಚಿಸಿಲ್ಲ; ಹತ್ಯೆಯನ್ನು ಖಂಡಿಸಿಲ್ಲ.

**ಬದಲಾದ ಭಾರತದ ವಿದೇಶಾಂಗ ನೀತಿ; ಅಮೆರಿಕದೆಡೆಗೆ ಹೆಚ್ಚಾದ ಒಲವು**

# ಇರಾನ್‌ಗೆ ದೂರ ಇಸ್ರೇಲ್‌ಗೆ ಹತ್ತಿರ

ಪ್ರಜಾವಾಣಿ ವಾರ್ತೆ

ಅಲಿಪ್ತ ನೀತಿ'ಯನ್ನು ಅಳವಡಿಸಿಕೊಂಡಿದ್ದ ಭಾರತವು ದಶಕಗಳಿಂದಲೂ ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗೆ ಅತ್ಯಂತ ಜಾಗರೂಕತೆಯ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿತ್ತು, ತಟಸ್ಥ ಧೋರಣೆಯ ಹೊರತಾಗಿಯೂ ಪ್ಯಾಲೆಸ್ಟೀನ್ ಪರ ಸಹಾನುಭೂತಿ ಹೊಂದಿತ್ತು ಮತ್ತು ಅದನ್ನು ಸೈದ್ಧಾಂತಿಕವಾಗಿ ಬೆಂಬಲಿಸುತ್ತಿತ್ತು. ಅದರ ಸಾರ್ವಭೌಮತೆಯನ್ನು ಸಮರ್ಥಿಸಿತ್ತು ಮತ್ತು ವಸಾಹತುಶಾಹಿ ವಿರೋಧಕ್ಕೆ ನೈತಿಕ ಬೆಂಬಲ ನೀಡಿತ್ತು. ಪ್ಯಾಲೆಸ್ಟೀನ್ ಲಿಬರೇಷನ್ ಆರ್ಮಿಗೆ (ಪಿಎಲ್‌ಒ) 1975ರಲ್ಲಿ ಭಾರತವು ರಾಜತಾಂತ್ರಿಕ ಮಾನ್ಯತೆ ನೀಡಿತ್ತು. ಈ ಮೂಲಕ ಪಿಎಲ್‌ಒ ಬೆಂಬಲಿಸಿದ ಮೊದಲ ಮುಸ್ಲಿಮೇತರ ರಾಷ್ಟ್ರವಾಗಿತ್ತು.

1950ರಲ್ಲಿ ಭಾರತವು ಇಸ್ರೇಲ್ ದೇಶಕ್ಕೆ ಮಾನ್ಯತೆ ನೀಡಿತು. ಅದರ ನಂತರ ನಿಧಾನಕ್ಕೆ ಅದರೊಂದಿಗೆ ದ್ವಿಪಕ್ಷೀಯ ವ್ಯಾಪಾರ ವಹಿವಾಟುಗಳೂ ಆರಂಭವಾದವು. 1992ರಲ್ಲಿ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾವ್ ಅವರು ಎರಡು ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧಕ್ಕೆ ಅಡಿಗಲ್ಲು ಹಾಕಿದರು.

1971ರ ಬಾಂಗ್ಲಾ ವಿಮೋಚನೆ ಮತ್ತು 1999ರ ಕಾರ್ಗಿಲ್ ಯುದ್ಧಗಳಲ್ಲಿ ಇಸ್ರೇಲ್ ಭಾರತಕ್ಕೆ ಸೇನಾ ನೆರವು ನೀಡಿತ್ತು.

ದೊಡ್ಡ ಸಂಖ್ಯೆಯ ಭಾರತೀಯರು ಕೆಲಸದಲ್ಲಿರುವ ಕೊಲ್ಲಿ ರಾಷ್ಟ್ರಗಳು, ಇಂಧನ ರಫ್ತು ಮಾಡುವುದರ ಜತೆಗೆ ಚಾರಿತ್ರಿಕ ಸಂಬಂಧವೂ ಇರುವ ಇರಾನ್ ಮತ್ತು ಶಸ್ತ್ರಾಸ್ತ್ರ, ತಂತ್ರಜ್ಞಾನ ನೆರವು ನೀಡುವ ಇಸ್ರೇಲ್‌ನೊಂದಿಗಿನ ಸಂಬಂಧಗಳು ಭಾರತಕ್ಕೆ ಅತಿ ಮುಖ್ಯವಾದುವು. ಹಾಗಾಗಿಯೇ ಬಹಿರಂಗವಾಗಿ ಯಾವುದೇ ದೇಶದ ಪರ ಹೆಚ್ಚು ಒಲವು ತೋರದೇ, ಸಮನ್ವಯದಿಂದ ಮುನ್ನಡೆಯುತ್ತಿತ್ತು.

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರ ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗಿನ ಭಾರತದ ಸಂಬಂಧದಲ್ಲಿ ಬದಲಾವಣೆಗಳು ಗೋಚರಿಸತೊಡಗಿದವು. 2017ರಲ್ಲಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಮೊದಲ ಬಾರಿ ಭೇಟಿ ನೀಡಿದರು. ಭಾರತದ ಪ್ರಧಾನಿಯೊಬ್ಬರು ಇಸ್ರೇಲ್‌ಗೆ ನೀಡಿದ ಮೊದಲ ಭೇಟಿ ಅದು. ರಾಜತಾಂತ್ರಿಕ ಸಮನ್ವಯ ಕಾಯ್ದುಕೊಳ್ಳಲು ಅವರು 2018ರಲ್ಲಿ ಪ್ಯಾಲೆಸ್ಟೀನ್‌ನ ರಾಮಲ್ಲಾಹ್‌ಗೂ ಭೇಟಿ ನೀಡಿದರು. ಹಾಗೆಯೇ, ಕೊಲೆ ಪ್ರಕರಣವೊಂದರ ಸಂಬಂಧ ಅನೇಕ ದೇಶಗಳಲ್ಲಿ ಅವಕೃಪೆಗೆ ಗುರಿಯಾಗಿದ್ದ ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರಿಗೆ 2019ರಲ್ಲಿ ಭಾರತ ಆತಿಥ್ಯ ನೀಡಿತ್ತು. ಪ್ರಧಾನಿಯಾದ ಮೇಲೆ ಹಲವು ಬಾರಿ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಭೇಟಿ ನೀಡಿರುವ ಮೋದಿ ಅವರು, ಅಲ್ಲಿನ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು 'ಸೋದರ' ಎಂದೇ ಕರೆಯುತ್ತಾರೆ.

ಭಾರತದ ವಿದೇಶಾಂಗ ನೀತಿ ಬದಲಾಗಿದ್ದು, ಇದಕ್ಕೆ ಚೀನಾ ಮತ್ತು ಪಾಕಿಸ್ತಾನ ಕಾರಣ ಎನ್ನುವುದು ತಜ್ಞರ ವಿಶ್ಲೇಷಣೆ. ಚೀನಾ ವಿರೋಧಿಸಲು ಅಮೆರಿಕಕ್ಕೆ, ಪಾಕ್ ಪ್ರೇರಿತ ಭಯೋತ್ಪಾದನೆ ಎದುರಿಸಲು ಇಸ್ರೇಲ್‌ಗೆ ಭಾರತ ಹತ್ತಿರವಾಗುತ್ತಿದೆ ಎನ್ನುವ ವಿಶ್ಲೇಷಣೆ ಇದೆ. ಅಮೆರಿಕದ ಜೊತೆಗೆ ಶಸ್ತ್ರಾಸ್ತ್ರ, ತಂತ್ರಜ್ಞಾನಕ್ಕೆ ಸಂಬಂಧಿಸಿದ ವಹಿವಾಟಿನ ಜತೆಗೆ ಸಂಬಂಧವನ್ನೂ ವೃದ್ಧಿಸಿಕೊಂಡಿತು. ಇನ್ನೊಂದೆಡೆ, ಪಶ್ಚಿಮ ಏಷ್ಯಾದ ರಾಷ್ಟ್ರಗಳ ಜತೆಗೆ ಸಂಬಂಧ ಕಾಯ್ದುಕೊಳ್ಳುತ್ತಲೇ, ಇಸ್ರೇಲ್ ಜತೆಗೆ ಆಪ್ತವಾಗತೊಡಗಿತು. ಅಮೆರಿಕ ಮತ್ತು ಇಸ್ರೇಲ್‌ನ ಆಪ್ತತೆಯೂ ಇರಾನ್‌ನಂಥ ರಾಷ್ಟ್ರಗಳ ಜತೆಗೆ ಭಾರತ ಒಂದು ಅಂತರ ಕಾಯ್ದುಕೊಳ್ಳಲು ಕಾರಣವಾಗಿದೆ ಎನ್ನಲಾಗುತ್ತಿದೆ. 2018ರಲ್ಲಿ ಅಮೆರಿಕದ ಕಾರಣಕ್ಕೆ ಭಾರತವು ಇರಾನ್‌ನಿಂದ ಇಂಧನ ಆಮದು ಮಾಡಿಕೊಳ್ಳುವುದನ್ನು ಗಮನಾರ್ಹವಾಗಿ ಕಡಿಮೆ ಮಾಡಿದೆ. ಪ್ರಸ್ತುತ, ಪಶ್ಚಿಮ ಏಷ್ಯಾದ ಹಲವು ದೇಶಗಳ ಜತೆಗಿನ ಭಾರತದ ಸಂಬಂಧವು ಕೇವಲ ವ್ಯವಹಾರಕ್ಕೆ ಸೀಮಿತವಾಗಿದೆ.



ಭಾರತದ ವಿದೇಶಾಂಗ ನೀತಿಯಲ್ಲಿನ ಬದಲಾವಣೆಯನ್ನು ಕೆಲವರು ಮೂರು ಮುಖ್ಯ ಅಂಶಗಳ ಮೂಲಕ ಗುರುತಿಸುತ್ತಾರೆ. ಒಂದನೆಯದಾಗಿ, ಜಾತ್ಯತೀತ, ಸಮಾಜವಾದಿ ರಾಷ್ಟ್ರವಾಗಿರುವ ಭಾರತವು ಸಾಂಪ್ರದಾಯಿಕ ರಾಜಮನೆತನಗಳ ಆಡಳಿತದ ಯುಎಇ ಜತೆಗೆ ಹಿಂದೆ ಅಂತರ ಕಾಯ್ದುಕೊಂಡಿತ್ತು, ಈಗ ಹೆಚ್ಚು ಸ್ನೇಹ ಸಂಬಂಧ ಹೊಂದಿದೆ. ಎರಡನೆಯದು, ಸಾಮ್ರಾಜ್ಯಶಾಹಿ ಧೋರಣೆಯ ಅಮೆರಿಕದೊಂದಿಗೆ ಹಿಂದಿಗಿಂತಲೂ ಈಗ ಉತ್ತಮವಾದ, ಹಲವು ಆಯಾಮಗಳ ಸಂಬಂಧ ಹೊಂದಿದೆ. ಮೂರನೆಯದಾಗಿ, ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ನಡುವೆ ತಟಸ್ಥ ಧೋರಣೆ ಕೈಬಿಟ್ಟು, ಇಸ್ರೇಲ್ ಪರವಾಗಿ ಬಹಿರಂಗವಾಗಿಯೇ ಗುರುತಿಸಿಕೊಳ್ಳುತ್ತಿದೆ. ವಿದೇಶಾಂಗ ನೀತಿಯಲ್ಲಿನ ದೇಶದ ಸೂಕ್ಷ್ಮ ಬದಲಾವಣೆಯ ಜತೆಗೆ ಮೋದಿ ಅವರ ವೈಯಕ್ತಿಕ ನಿಲುವುಗಳೂ ಇವುಗಳ ಹಿಂದಿವೆ ಎನ್ನಲಾಗುತ್ತಿದೆ.

ಆಧಾರ: ರಾಯಿಟರ್ಸ್, ವಾಣಿಜ್ಯ ಸಚಿವಾಲಯದ ವೆಬ್‌ಸೈಟ್, ಸೌತ್ ಏಷ್ಯಾ ಜರ್ನಲ್, ಫಾರಿನ್ ಪಾಲಿಸಿ.ಕಾಮ್, ಸೆಂಟರ್ ಫಾರ್ ಸ್ಟ್ರಾಟಜಿಕ್ ಆ್ಯಂಡ್ ಇಂಟರ್‌ನ್ಯಾಷನಲ್ ಸ್ಟಡೀಸ್, ಮಾಧ್ಯಮ ವರದಿಗಳು



ಇರಾನ್ ಪರವಾಗಿ ಮಾತನಾಡಿಲ್ಲ. ಬದಲಾಗುತ್ತಿರುವ ಜಾಗತಿಕ ರಾಜಕಾರಣದಲ್ಲಿ ಭಾರತ ಯಾರ ಪರ ಎನ್ನುವುದನ್ನೂ, ಪಶ್ಚಿಮ ಏಷ್ಯಾದ ಹಲವು ರಾಷ್ಟ್ರಗಳ ಕುರಿತ ದೇಶದ ವಿದೇಶಾಂಗ ನೀತಿ ಬದಲಾಗುತ್ತಿರುವುದನ್ನೂ ಇದು ಸಂಕೇತಿಸುತ್ತಿದೆ




## ಇರಾನ್ ಸಂಬಂಧ: ಉತ್ತುಂಗದಿಂದ ಪ್ರಪಾತಕ್ಕೆ

**ಐತಿಹಾಸಿಕವಾಗಿ** ಪುರಾತನ ಭಾರತ ಮತ್ತು ಇರಾನ್ (ಹಿಂದಿನ ಪರ್ಷಿಯಾ) ನಡುವೆ ಸಾವಿರಾರು ವರ್ಷಗಳ ಹಿಂದಿನಿಂದಲೇ ಸಂಬಂಧ ಇದೆ. ರಾಜತಾಂತ್ರಿಕ ಸಂಬಂಧ ಆರಂಭವಾಗಿದ್ದು, 20ನೇ ಶತಮಾನದ ಮಧ್ಯಭಾಗದಲ್ಲಿ. 1950ರಲ್ಲಿ ಭಾರತ ಮತ್ತು ಇರಾನ್ 'ಸ್ನೇಹ ಒಪ್ಪಂದ'ಕ್ಕೆ ಸಹಿ ಹಾಕಿದವು. 76 ವರ್ಷಗಳ ಅವಧಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಹಲವು ಮಗ್ಗುಲು ಬದಲಾಯಿಸಿದೆ.

ಸ್ನೇಹ ಒಪ್ಪಂದ ರೂಪುಗೊಂಡಾಗ ಇರಾನ್‌ನಲ್ಲಿ ಷಾ ರಾಜವಂಶಸ್ಥರ ಆಳ್ವಿಕೆ ಇತ್ತು. ಅಲ್ಲಿನ ರಾಜ ಅಮೆರಿಕದ ಪರವಾಗಿದ್ದರು. ಅಮೆರಿಕ ಪಾಕಿಸ್ತಾನದೊಂದಿಗೆ ಹೆಚ್ಚು ಒಡನಾಟ ಹೊಂದಿತ್ತು. ಹೀಗಾಗಿ ಭಾರತ–ಇರಾನ್ ಸಂಬಂಧ ಹೆಸರಿಗಷ್ಟೇ ಇತ್ತು. 1979ರಲ್ಲಿ ನಡೆದ ಕ್ರಾಂತಿಯಲ್ಲಿ ರಾಜರ ಆಡಳಿತ ಪತನಗೊಂಡು ಅಯಾತೊಲ್ಲಾ ರುಹೊಲ್ಲಾಹ್ ಖಮೇನಿ ನೇತೃತ್ವದ 'ಧರ್ಮಾಧಾರಿತ' ಸರ್ಕಾರದ ಆಡಳಿತ ಶುರುವಾದ ಮೇಲೆ ಭಾರತ ಮಾತ್ರವಲ್ಲದೇ ಪಶ್ಚಿಮ ಏಷ್ಯಾದೊಂದಿಗಿನ ಅದರ ಸಂಬಂಧ ಸುಧಾರಣೆಯತ್ತ ಹೆಜ್ಜೆ ಹಾಕಿತು. ಭಾರತದ ಅಲಿಪ್ತ ನೀತಿಗೆ ಅದು ಬೆಂಬಲವನ್ನೂ ವ್ಯಕ್ತಪಡಿಸಿತು.


ಅಮೆರಿಕದೊಂದಿಗೆ ಪಾಕಿಸ್ತಾನ ಉತ್ತಮ ಸಂಬಂಧ ಹೊಂದಿದ್ದ ಕಾರಣಕ್ಕೆ ಇರಾನ್ ಪಾಕಿಸ್ತಾನದಿಂದ ದೂರ ಉಳಿದಿತ್ತು. ಇದರಿಂದ ಭಾರತಕ್ಕೆ ಅನುಕೂಲವಾಯಿತು. ವಿಶ್ವಸಂಸ್ಥೆ, ಮುಸ್ಲಿಂ ರಾಷ್ಟ್ರಗಳ ಒಕ್ಕೂಟ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಕಾಶ್ಮೀರ ವಿಚಾರವನ್ನು ಪ್ರಸ್ತಾಪಿಸಿ, ಭಾರತದ ವಿರುದ್ಧ ನಿರ್ಣಯ ಕೈಗೊಳ್ಳುವ ಪಾಕಿಸ್ತಾನದ ಹಲವು ಪ್ರಯತ್ನಗಳನ್ನು ಇರಾನ್ ವಿಫಲಗೊಳಿಸಿತ್ತು. ತೈಲ ಸಂಪದ್ಭರಿತ ರಾಷ್ಟ್ರವಾದ ಇರಾನ್‌ನಿಂದ ಭಾರತ ಮೊದಲಿನಿಂದಲೂ ಕಚ್ಚಾ ತೈಲ ಖರೀದಿಸುತ್ತಿತ್ತು. 1980ರ ದಶಕದಲ್ಲಿ ನಡೆದ ಇರಾನ್–ಇರಾಕ್ ಯುದ್ಧದ ಕಾರಣದಿಂದ ಭಾರತವು ತೈಲಕ್ಕಾಗಿ ಬೇರೆ ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿಸಬೇಕಾಯಿತು. ಶೀತಲ ಸಮರ ಅಂತ್ಯಗೊಂಡ ನಂತರ ಭಾರತ ಮತ್ತು ಇರಾನ್ ಇನ್ನಷ್ಟು ಹತ್ತಿರವಾದವು.

**ನಾಯಕರ ಭೇಟಿ-ಒಪ್ಪಂದ:** 1993ರಲ್ಲಿ ಪ್ರಧಾನಿ ಪಿ.ವಿ. ನರಸಿಂಹರಾವ್ ಟೆಹರಾನ್‌ಗೆ ಭೇಟಿ ನೀಡಿದ್ದರು. ಎರಡು ವರ್ಷಗಳ ನಂತರ ಇರಾನ್ ಅಧ್ಯಕ್ಷ ಅಕ್ಬರ್ ಹಶೆಮಿ ರಫ್ಸಂಜಾನಿ ಭೇಟಿ ಭಾರತಕ್ಕೆ ನೀಡಿದ್ದರು. ಈ ಸಂದರ್ಭದಲ್ಲಿ ಹಲವು ವ್ಯಾಪಾರ ಒಪ್ಪಂದಗಳಿಗೆ ಎರಡೂ ರಾಷ್ಟ್ರಗಳು ಸಹಿ ಹಾಕಿದ್ದವು. 2001ರಲ್ಲಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಇರಾನ್‌ಗೆ ಭೇಟಿ ನೀಡಿದ್ದರೆ, ಎರಡು ವರ್ಷಗಳ ತರುವಾಯ ಅಲ್ಲಿನ ಅಧ್ಯಕ್ಷ ಮೊಹಮ್ಮದ್ ಖಟಮಿ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಎರಡೂ ಸಂದರ್ಭಗಳಲ್ಲಿ ಉಭಯ ನಾಯಕರು ಸುಸ್ಥಿರ, ಸುರಕ್ಷಿತ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಪರಸ್ಪರ ಸಹಕಾರ ನೀಡುವ ಘೋಷಣೆಗಳಿಗೆ ಸಹಿ ಹಾಕಿದ್ದರು. ಬಂದರು, ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡುವ ಭರವಸೆಯನ್ನೂ ಭಾರತ ನೀಡಿತ್ತು. 2000ದ ದಶಕದಲ್ಲಿ ಭಾರತವು ಗರಿಷ್ಠ ಪ್ರಮಾಣದಲ್ಲಿ ತೈಲ ಆಮದು ಮಾಡಿತ್ತು.

### ಅತೃಪ್ತಿ ತಂದಿದ್ದ ಹೇಳಿಕೆ

2017ರಿಂದ 2024ರ ನಡುವೆ ಭಾರತದಲ್ಲಿ ನಡೆದ ಕೆಲವು ಬೆಳವಣಿಗೆಗಳ ಕುರಿತಾಗಿ ಇರಾನ್ ಪರಮೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರು ನೀಡಿದ್ದ ಹೇಳಿಕೆಗಳು ಆಡಳಿತಾರೂಢ ಎನ್‌ಡಿಎ ಸರ್ಕಾರದ ಅಸಮಾಧಾನಕ್ಕೆ ಕಾರಣವಾಗಿದ್ದವು.

ಕಾಶ್ಮೀರ ವಿಚಾರ, 370ನೇ ವಿಧಿ ರದ್ದು, 2020ರಲ್ಲಿ ದೆಹಲಿಯಲ್ಲಿ ನಡೆದ ಹಿಂಸಾಚಾರ, ಪೌರತ್ವ ತಿದ್ದುಪಡಿ ಕಾಯ್ದೆಯ ವಿಚಾರವಾಗಿ ಖಮೇನಿ ಅವರು ಕೇಂದ್ರ ಸರ್ಕಾರದ ನಿಲುವಿಗೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಸಂದರ್ಭದಲ್ಲಿ ಭಾರತವು ಇರಾನಿನ ರಾಯಭಾರಿಯನ್ನು ಕರೆದು ತನ್ನ ಆಕ್ಷೇಪ ದಾಖಲಿಸಿತ್ತು.




**ವಿರುದ್ಧ ಮತ:** ಇರಾನ್ ಅಣ್ವಸ್ತ್ರ ಅಭಿವೃದ್ಧಿ ಮಾಡುವುದರ ವಿರುದ್ಧವಾಗಿದ್ದ ಅಮೆರಿಕವು 2005ರಲ್ಲಿ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಸಭೆಯಲ್ಲಿ ಇರಾನ್ ವಿರುದ್ಧ ನಿರ್ಣಯ ಅಂಗೀಕಾರವಾಗುವಂತೆ ನೋಡಿಕೊಂಡಿತ್ತು. ಆ ಸಮಯದಲ್ಲಿ ಅಮೆರಿಕದೊಂದಿಗೆ ಉತ್ತಮ ದ್ವಿಪಕ್ಷೀಯ ಬಾಂಧವ್ಯ ಬೆಳೆಸುವ ನಿಟ್ಟಿನಲ್ಲಿ ದೃಷ್ಟಿ ನೆಟ್ಟಿದ್ದ ಅಂದಿನ ಯುಪಿಎ ಸರ್ಕಾರ, ಇರಾನ್ ವಿರುದ್ಧದ ನಿರ್ಣಯವನ್ನು ಬೆಂಬಲಿಸಿತ್ತು. ಅದೇ ವರ್ಷ ಪ್ರಧಾನಿ ಮನಮೋಹನ್ ಸಿಂಗ್ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಎರಡೂ ದೇಶಗಳು ನಾಗರಿಕ ಪರಮಾಣು ಸಹಕಾರ ಒಪ್ಪಂದದ ಘೋಷಣೆ ಮಾಡಿದವು. ಹಾಗಿದ್ದರೂ, ಉಭಯ ದೇಶಗಳ ನಡುವಿನ ತೈಲ ವ್ಯಾಪಾರ ಮುಂದುವರಿದಿತ್ತು.

2010–13ರ ನಡುವೆ ಬರಾಕ್ ಒಬಾಮ ನೇತೃತ್ವದ ಅಮೆರಿಕ ಆಡಳಿತ ಇರಾನ್ ಮೇಲೆ ನಿರ್ಬಂಧಗಳನ್ನು ಹೇರಿತ್ತು. ಪರಮಾಣು ಒಪ್ಪಂದ ಎಂದು ಕರೆಯಲಾಗುವ 'ಜಂಟಿ ಸಮಗ್ರ ಕ್ರಿಯಾ ಯೋಜನೆ ಒಪ್ಪಂದ'ಕ್ಕೆ ಇರಾನ್ ಸಹಿ ಹಾಕಿದ ನಂತರ ಒಬಾಮ ಆಡಳಿತವು ನಿರ್ಬಂಧಗಳನ್ನು ವಾಪಸ್ ಪಡೆಯಿತು.

**ಅಮೆರಿಕದ ಒತ್ತಡ:** 2014ರಲ್ಲಿ ಅಧಿಕಾರಕ್ಕೆ ಬಂದ, ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಇಸ್ರೇಲ್ ಜೊತೆಗಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಹೆಚ್ಚು ಗಮನ ನೀಡಲು ಆರಂಭಿಸಿದರೂ, ಇರಾನ್ ಜೊತೆಗಿನ ಬಾಂಧವ್ಯವನ್ನು ಮುಂದುವರಿಸಿತ್ತು. 2016ರಲ್ಲಿ ಪ್ರಧಾನಿ ಮೋದಿ ಅವರು ಇರಾನ್‌ಗೆ ಭೇಟಿ ನೀಡಿದ್ದರು. ಅಲ್ಲಿನ ಛಬಹಾರ್ ಬಂದರನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಭಾರತ ಮುಂದಾಯಿತು.

2018–19ರವರೆಗೂ ಭಾರತವು ಇರಾನ್‌ನಿಂದ ಗಣನೀಯ ಪ್ರಮಾಣದಲ್ಲಿ ತೈಲ ಖರೀದಿಸುತ್ತಲೇ ಇತ್ತು. ಆದರೆ, ಡೊನಾಲ್ಡ್ ಟ್ರಂಪ್ ಅವರು ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಒಬಾಮ ಸರ್ಕಾರದ ಅವಧಿಯಲ್ಲಿ ಸಹಿ ಹಾಕಲಾಗಿದ್ದ ಇರಾನ್‌ನೊಂದಿಗಿನ ಅಣು ಒಪ್ಪಂದವನ್ನು ರದ್ದುಪಡಿಸಿ, ಅದರ ಮೇಲೆ ನಿರ್ಬಂಧ ಹೇರಿದರು. ಅಲ್ಲದೇ, ಅಲ್ಲಿಂದ ಯಾವುದೇ ರಾಷ್ಟ್ರ ತೈಲ ಖರೀದಿಸದಂತೆ ಒತ್ತಡ ಹೇರಿದರು. ಸ್ವಲ್ಪ ಸಮಯ ಭಾರತವು ಡಾಲರ್ ಬದಲಿಗೆ ರೂಪಾಯಿ ಕರೆನ್ಸಿಯಲ್ಲೇ ಹಣ ಪಾವತಿ ಮಾಡಿ ತೈಲ ಖರೀದಿಸುತ್ತಿತ್ತು. ಅಮೆರಿಕದ ಒತ್ತಡ ಜಾಸ್ತಿಯಾದ ಬಳಿಕ ಅಲ್ಲಿಂದ ತೈಲ ಖರೀದಿ ಬಹುತೇಕ ನಿಲ್ಲಿಸಿತು. ಇದರಿಂದ ಎರಡು ದೇಶಗಳ ನಡುವಿನ ಸರಕು ವ್ಯಾಪಾರ ಕಡಿಮೆ ಆಯಿತು.

ಆದಾಗ್ಯೂ, 2024ರ ಮೇ 13ರಂದು ಛಬಹಾರ್ ಬಂದರು ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ಎರಡೂ ರಾಷ್ಟ್ರಗಳು 10 ವರ್ಷಗಳ ಗುತ್ತಿಗೆಗೆ ಸಹಿ ಹಾಕಿದ್ದವು. ಇರಾನ್ ಮೇಲೆ ಅಮೆರಿಕ ಹೇರಿರುವ ನಿರ್ಬಂಧ ಅದರ ಕಾರ್ಯಾಚರಣೆಯ ಮೇಲೂ ಪರಿಣಾಮ ಬೀರಿದೆ.

---

**ಶೇ 24.91ರ ಮಿತಿಯಲ್ಲಿಯೇ ಹೊಣೆಗಾರಿಕೆ • ಆರ್‌ಬಿಐ ಪರಿಗಣನೆ ಸರಿ ಇಲ್ಲ**

# ಸಾಲ ಹೆಚ್ಚಾಗಿಲ್ಲ: ಆರ್ಥಿಕ ಇಲಾಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದ ವಾಸ್ತವಿಕ ಒಟ್ಟು ಸಾಲದ ಮೊತ್ತಕ್ಕಿಂತ ₹60,500 ಕೋಟಿಯಷ್ಟನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೆಚ್ಚಾಗಿ ಲೆಕ್ಕಾಚಾರ ಮಾಡಿದೆ. ಆದರೆ ಈ ಮೊತ್ತವು ನಮ್ಮ ಹೊಣೆಗಾರಿಕೆಯ ವ್ಯಾಪ್ತಿಗೆ ಬರುವುದೇ ಇಲ್ಲ' ಎಂದು ಆರ್ಥಿಕ ಇಲಾಖೆ ಪ್ರತಿಪಾದಿಸಿದೆ.

ಆರ್‌ಬಿಐನ ವರದಿಯಲ್ಲಿನ ದತ್ತಾಂಶಗಳನ್ನು ಆಧರಿಸಿ ಪ್ರಕಟಿಸಲಾಗಿದ್ದ ಸುದ್ದಿಯಲ್ಲಿ, 'ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ (ಮಾರ್ಚ್ ಅಂತ್ಯ) ರಾಜ್ಯದ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯಷ್ಟಾಗಲಿದೆ' ಎಂದು ವಿವರಿಸಲಾಗಿತ್ತು. ಈ ಬಗ್ಗೆ ರಾಜ್ಯದ ಆರ್ಥಿಕ ಇಲಾಖೆಯು ಸ್ಪಷ್ಟನೆ ನೀಡಿದೆ.

2025–26ನೇ ಸಾಲಿನ ಬಜೆಟ್ ಅಂದಾಜಿನ ಪ್ರಕಾರ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಒಟ್ಟು ಸಾಲ ₹7.64 ಲಕ್ಷ ಕೋಟಿಯಷ್ಟಾಗಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 24.91ರಷ್ಟಾಗುತ್ತದೆ. ಆದರೆ ರಾಜ್ಯದ ಒಟ್ಟು ಸಾಲವನ್ನು ಲೆಕ್ಕ ಮಾಡುವಾಗ, ನಮ್ಮ ವ್ಯಾಪ್ತಿಗೆ ಬರದೇ ಇರುವ ಹೊಣೆಗಾರಿಕೆಗಳನ್ನೂ ಆರ್‌ಬಿಐ ಪರಿಗಣಿಸಿದೆ ಎಂದು ಇಲಾಖೆಯು ಹೇಳಿದೆ.

ಜಿಎಸ್‌ಟಿ ಪರಿಹಾರ ಸೆಸ್‌ಗಾಗಿ ಕೇಂದ್ರ ಸರ್ಕಾರದ ಭದ್ರತೆಯೊಂದಿಗೆ ಎತ್ತಲಾದ ₹20,412 ಕೋಟಿಯನ್ನು ಆರ್‌ಬಿಐ, ರಾಜ್ಯದ ಹೊಣೆಗಾರಿಕೆ ಎಂದು ಪರಿಗಣಿಸಿದೆ. ವಾಸ್ತವದಲ್ಲಿ ಕೇಂದ್ರ ಸರ್ಕಾರವೇ ಈ ಸಾಲವನ್ನು ತೀರಿಸುತ್ತದೆ. ಹೀಗಾಗಿ ಇದನ್ನು ರಾಜ್ಯದ ಒಟ್ಟು ಸಾಲಕ್ಕೆ ಸೇರಿಸಬಾರದು ಎಂದು ವಿವರಿಸಿದೆ.

ರಾಜ್ಯವು ವಿವಿಧ ಮೂಲಗಳಿಂದ ಸಂಗ್ರಹಿಸುವ ಸೆಸ್ ಮತ್ತು ಲೆವಿಗಳನ್ನು ಸಾರ್ವಜನಿಕ ಖಾತೆಯಲ್ಲಿ ಜಮಾ ಮಾಡಲಾಗುತ್ತದೆ ಮತ್ತು ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಬಳಸುತ್ತದೆ. ಸಾರ್ವಜನಿಕ ಖಾತೆಯಲ್ಲಿ ಇಂತಹ ₹23,810 ಕೋಟಿ ಇದೆ. ಆರ್‌ಬಿಐ ಇದನ್ನೂ ರಾಜ್ಯದ ಹೊಣೆಗಾರಿಕೆ ಎಂದು ಪರಿಗಣಿಸಿದೆ ಎಂದಿದೆ.

ರಿಸರ್ವ್ ಬ್ಯಾಂಕ್‌ನ ಶಿಫಾರಸಿನಂತೆ 'ಕನ್‌ಸಾಲಿಡೇಟೆಡ್ ಸಿಂಕಿಂಗ್ ಫಂಡ್' ಮತ್ತು 'ಗ್ಯಾರಂಟಿ ರಿಡಂಪ್ಷನ್ ಫಂಡ್'ನಲ್ಲಿ ರಾಜ್ಯ ಸರ್ಕಾರವು ₹16,300 ಕೋಟಿ ಹೂಡಿಕೆ ಮಾಡಿದೆ. ಇದನ್ನೂ ರಾಜ್ಯದ ಹೊಣೆಗಾರಿಕೆ ಎಂದು ಆರ್‌ಬಿಐ ಪರಿಗಣಿಸಿದೆ. ಈ ಮೂರೂ ಮೊತ್ತಗಳು ಸೇರಿ ರಾಜ್ಯದ ಒಟ್ಟು ಸಾಲದ ಮೊತ್ತದಲ್ಲಿ ₹60,500 ಕೋಟಿಯಷ್ಟು ಹೆಚ್ಚಳವಾದಂತಾಗಿದೆ. ಆದರೆ ಅದು ರಾಜ್ಯದ ಸಾಲವಲ್ಲ ಎಂದು ಇಲಾಖೆಯು ವಿವರಿಸಿದೆ.

ಬಜೆಟ್ ಅಂದಾಜಿನಂತೆ ರಾಜ್ಯದ ಸಾಲವು ₹7.64 ಲಕ್ಷ ಕೋಟಿಯಷ್ಟೇ ಇರಲಿದ್ದು, ಸಾಲದ ಪ್ರಮಾಣವು ಜಿಎಸ್‌ಡಿಪಿಯ ಶೇ 25ರಷ್ಟನ್ನು ಮೀರಬಾರದು ಎಂಬ ಆರ್ಥಿಕ ಶಿಸ್ತಿನ ಮಿತಿಯಲ್ಲಿಯೇ ಇದೆ ಎಂದು ಪ್ರತಿಪಾದಿಸಿದೆ.

## ಕೇಂದ್ರ ಸರ್ಕಾರದ ಅಬಕಾರಿ, ಜಿಎಸ್‌ಟಿ ದರ ಏರಿಕೆ ಗೊಂದಲ; ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ

# ತಂಬಾಕು ಬೆಳೆಗಾರರ ಬದುಕಿಗೆ ಬೆಂಕಿ

• ಆರ್.ಜಿತೇಂದ್ರ

ವಿಶ್ವ ದರ್ಜೆಯ ತಂಬಾಕು ಬೆಳೆದರೂ ಸಮರ್ಪಕ ಬೆಲೆ ಸಿಗುತ್ತಿಲ್ಲ. ಉತ್ತಮ ದರಕ್ಕೆ ಆಗ್ರಹಿಸಿ ಬೀದಿಗೆ ಇಳಿಯುವುದೂ ತಪ್ಪಿಲ್ಲ. ಈ ವರ್ಷವಂತೂ ಬೆಳೆದ ಉತ್ಪನ್ನವನ್ನು ಕಂಪನಿಗಳು ಖರೀದಿಸುವ ಖಾತ್ರಿಯೂ ಇಲ್ಲ.

ಇದು ರಾಜ್ಯದ ತಂಬಾಕು ಬೆಳೆಗಾರರ ಸದ್ಯದ ಪರಿಸ್ಥಿತಿ. ಈ ವರ್ಷ ಸಂಕ್ರಾಂತಿಯ ಬಳಿಕ ಏಕಾಏಕಿ ತಂಬಾಕು ಹರಾಜು ಬಂದ್ ಆಗಿದ್ದರಿಂದ ಬೆಳೆಗಾರರ ಉಸಿರೇ ನಿಂತಿತ್ತು. ಹದಿನೈದು ದಿನ ಮಾರುಕಟ್ಟೆಗಳು ಬಾಗಿಲು ಮುಚ್ಚಿದ್ದವು. ಸದ್ಯ ಹರಾಜು ಶುರುವಾಗಿದ್ದರೂ ಹಿಂದಿನಷ್ಟು ದರ ಇಲ್ಲ. ಸರ್ಕಾರದ ನಿರ್ಧಾರಗಳು ಹಾಗೂ ಸದ್ಯದ ಜಾಗತಿಕ ಸನ್ನಿವೇಶಗಳು ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿವೆ. ಇನ್ನೂ 3.6 ಕೋಟಿ ಕೆ.ಜಿ.ಗಳಷ್ಟು ಉತ್ಪನ್ನ ಹರಾಜಾಗಬೇಕಿದೆ.

ತಂಬಾಕು ಬೆಳೆಯುವ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕುಗಳು ಗುಣಮಟ್ಟದ ಹೊಗೆಸೊಪ್ಪು ಉತ್ಪಾದನೆಗೆ ಹೆಸರುವಾಸಿ. ಮೈಸೂರು- ಹಾಸನ ಜಿಲ್ಲೆಯಲ್ಲಿ ಹೆಚ್ಚು ಉತ್ಪಾದನೆಯಾಗುತ್ತಿದ್ದು, ಚಾಮರಾಜನಗರ, ಮಡಿಕೇರಿ, ಶಿವಮೊಗ್ಗ ಜಿಲ್ಲೆಗಳ ಅಲ್ಲಲ್ಲಿ ರೈತರು ಈ ಬೆಳೆ ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ವರ್ಜೀನಿಯಾ (ಎಫ್‌ಸಿವಿ) ಮಾದರಿಯ ತಂಬಾಕನ್ನು ಬೆಳೆಯಲಾಗುತ್ತಿದೆ.

**ಬಿಕ್ಕಟ್ಟು ಶುರುವಾಗಿದ್ದು ಎಲ್ಲಿಂದ?:** 'ಕೇಂದ್ರ ಸರ್ಕಾರ ತಂಬಾಕು ಉತ್ಪನ್ನಗಳ ಮೇಲೆ ಶೇ 18ರಷ್ಟು ಹೆಚ್ಚುವರಿ ಅಬಕಾರಿ ಸುಂಕ ಹೇರಲು ಹೊರಟಿದ್ದೇ ಸದ್ಯದ ಮಾರುಕಟ್ಟೆ ಗೊಂದಲಗಳಿಗೆ ಕಾರಣ' ಎನ್ನುತ್ತಾರೆ ಉದ್ದಿಮೆ ವಲಯದ ಪ್ರತಿನಿಧಿಗಳು.

ಕಳೆದ ವರ್ಷ ಡಿ. 31ರಂದು ಗೆಜೆಟ್ ಅಧಿಸೂಚನೆ ಹೊರಡಿಸಿದ್ದ ಕೇಂದ್ರವು 2026ರ ಫೆಬ್ರುವರಿ 1ರಿಂದ ಕಚ್ಚಾ ತಂಬಾಕಿನ ಮೇಲೆ ಶೇ 18ರಷ್ಟು ಸುಂಕ ವಿಧಿಸುವುದಾಗಿ ಪ್ರಕಟಿಸಿತ್ತು. ಇದು ವರ್ತಕ ಸಮುದಾಯವನ್ನು ಕೆರಳಿಸಿದ್ದು, ಜ.24ರಿಂದ ಫೆ. 5ರವರೆಗೆ ಹರಾಜು ಮಾರುಕಟ್ಟೆಗಳು ಸಂಪೂರ್ಣ ಬಂದ್ ಆಗಿದ್ದವು.

2025ರ ಅ.8ರಂದು ರಾಜ್ಯದ ತಂಬಾಕು ಮಾರುಕಟ್ಟೆಗಳು ಬಾಗಿಲು ತೆರೆದಿದ್ದು, 2026ರ ಜ. 10ರವರೆಗೆ ಒಟ್ಟು 3.88 ಕೋಟಿ ಕೆ.ಜಿ.ಯಷ್ಟು ತಂಬಾಕು ಹರಾಜಾಗಿತ್ತು, ರೈತರಿಗೆ ಪ್ರತಿ ಕೆ.ಜಿ.ಗೆ ಸರಾಸರಿ ₹289 ದರ ಸಿಕ್ಕಿತ್ತು, ತಂಬಾಕು ಕ್ಷೇತ್ರದ ದೈತ್ಯ ಕಂಪನಿ ಐಟಿಸಿ ಒಟ್ಟು ಉತ್ಪನ್ನದಲ್ಲಿ ಶೇ 49.92ರಷ್ಟು ಖರೀದಿ ನಡೆಸಿತ್ತು. ಆದರೆ ಅಬಕಾರಿ ಸುಂಕದ ಕಾರಣಕ್ಕೆ ಐಟಿಸಿ ತನ್ನ ಖರೀದಿ ಪ್ರಮಾಣ ತಗ್ಗಿಸಿತು. ಫೆಬ್ರುವರಿಯಲ್ಲಿ ಹರಾಜಾದ ಒಟ್ಟು ಉತ್ಪನ್ನದಲ್ಲಿ ಈ ಕಂಪನಿಯು ಶೇ 26ರಷ್ಟು ಮಾತ್ರ ಖರೀದಿ ನಡೆಸಿತು. ಈ ಎಲ್ಲ ಗೊಂದಲಗಳಿಂದಾಗಿ ದರವು ಪ್ರತಿ ಕೆ.ಜಿ.ಗೆ ₹30ರಿಂದ ₹50ರವರೆಗೆ ಕುಸಿತ ಕಂಡಿತು.

ಫೆ. 1ರಂದು ಸರ್ಕಾರ ಶೇ 18ರಷ್ಟು ಹೆಚ್ಚುವರಿ ಸುಂಕದ ಆದೇಶವನ್ನು ಹಿಂಪಡೆದಿದ್ದರೂ ತಂಬಾಕು ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 28ರಿಂದ ಶೇ 40ಕ್ಕೆ ಏರಿಸಿದೆ. ಹೀಗಾಗಿ ಪ್ರಮುಖ ಕಂಪನಿಗಳು ಕಾದು ನೋಡುವ ತಂತ್ರ ಅನುಸರಿಸುತ್ತಿವೆ.

'ಜಿಎಸ್‌ಟಿ ಏರಿಸಿದ ಕಾರಣಕ್ಕೆ ಪ್ರತಿ ಸಿಗರೇಟಿನ ಬೆಲೆ ₹6–₹7 ರಷ್ಟು ಹೆಚ್ಚಿದೆ. ಹೀಗಾಗಿ ಬೇಡಿಕೆಯು ಶೇ 20ರಷ್ಟು ಕುಸಿದಿದೆ. ಸದ್ಯ ಸಿಗರೇಟ್ ಉತ್ಪಾದನೆ ಕಡಿಮೆ ಮಾಡಿದ್ದು, ತಂಬಾಕು ಖರೀದಿಯನ್ನೂ ಕಡಿಮೆ ಮಾಡಿದ್ದೇವೆ' ಎಂದು ಕಂಪನಿಯೊಂದರ ಅಧಿಕಾರಿ ಹೇಳುತ್ತಾರೆ.

ಗುಣಮಟ್ಟ ಆಧರಿಸಿ ತಂಬಾಕನ್ನು ವಿಂಗಡಿಸಿದ ಬಳಿಕವೇ ಹರಾಜು ನಡೆಸಲಾಗುತ್ತದೆ. ರಾಜ್ಯದಲ್ಲಿ ಈ ವರ್ಷ ಉತ್ಪಾದನೆಯಾಗಿರುವ 8.79 ಕೋಟಿ ಕೆ.ಜಿ. ಉತ್ಪನ್ನದ ಪೈಕಿ ಶೇ 32 ರಷ್ಟು, ಅಂದರೆ 2.85 ಕೋಟಿ ಕೆ.ಜಿ.ಯಷ್ಟು ತಂಬಾಕು ಮೊದಲ ದರ್ಜೆಯದ್ದು, ಶೇ 45ರಷ್ಟು ತಂಬಾಕು (3.94 ಕೋಟಿ ಕೆ.ಜಿ) ದ್ವಿತೀಯ ದರ್ಜೆಯದ್ದು, ಉಳಿದ 1.99 ಕೋಟಿ ತಂಬಾಕು ಕಡಿಮೆ ದರ್ಜೆಯದ್ದು ಎಂದು ಅಂದಾಜಿಸಲಾಗಿದೆ.



ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿಯಲ್ಲಿರುವ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬುಧವಾರ ರೈತರೊಬ್ಬರು ತಂಬಾಕು ತಂದಿದ್ದರು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

**ಜಾಗತಿಕ ನಂಟು:** ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಉತ್ಪಾದನೆಯಾಗುವ ತಂಬಾಕಿನ ಪೈಕಿ ಶೇ 30ರಷ್ಟು ಉತ್ಪನ್ನ ಸ್ಥಳೀಯವಾಗಿ ಬಳಕೆಯಾದರೆ, ಶೇ 70ರಷ್ಟು ರಫ್ತಾಗುತ್ತಿದೆ.

'ಜಾಗತಿಕವಾಗಿ ಬ್ರೆಜಿಲ್, ಜಿಂಬಾಬ್ವೆ ತಂಬಾಕು ಹೆಚ್ಚು ಉತ್ಪಾದಿಸುತ್ತಿವೆ. ಈ ಎರಡೂ ದೇಶಗಳ ಮಾರುಕಟ್ಟೆ ಮುಕ್ತಾಯದ ಬಳಿಕ ಕರ್ನಾಟಕದಲ್ಲಿ ತಂಬಾಕು ಹರಾಜು ಆರಂಭವಾಗುತ್ತದೆ. ಹೀಗಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಕೊರತೆ ತುಂಬುತ್ತದೆ. ಇದೇ ಕಾರಣಕ್ಕೆ ರಾಜ್ಯದ ತಂಬಾಕಿಗೆ ಅನೇಕ ಬಾರಿ ಉತ್ತಮ ಬೆಲೆ ಸಿಕ್ಕಿದೆ. ಆದರೆ, ಈ ಬಾರಿ ಆ ದೇಶಗಳಲ್ಲಿ ಉತ್ಪಾದನೆ ಹೆಚ್ಚಿದ್ದು, ಕರ್ನಾಟಕದ ತಂಬಾಕಿನ ದರದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿದೆ' ಎನ್ನುತ್ತಾರೆ ತಂಬಾಕು ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕಿ ಬಿ.ವಿಶ್ವಶ್ರೀ.

'ವಿವಿಧ ದೇಶಗಳ ಯುದ್ಧದ ಕಾರಣಕ್ಕೆ ತಂಬಾಕಿನ ರಫ್ತು ಕೂಡ ಕಡಿಮೆಯಾಗುತ್ತಿದೆ. ಸದ್ಯ ಇಲ್ಲಿಂದ ಕಂಟೇನರ್‌ಗಳನ್ನು ಕಳುಹಿಸದಂತೆ ವಿದೇಶಗಳ ವರ್ತಕರು ಮನವಿ ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಬೇಡಿಕೆ ಹಾಗೂ ದರ ಇನ್ನಷ್ಟು ಕುಸಿಯಬಹುದು' ಎಂಬುದು ಅಧಿಕಾರಿಗಳ ಆತಂಕ.

**ತಾರತಮ್ಯ ಧೋರಣೆಯ ಆರೋಪ:** 'ರಾಜ್ಯದಲ್ಲಿ ಈ ಸಾಲಿಗೆ 10 ಕೋಟಿ ಕೆ.ಜಿ.ಗಳಷ್ಟು ತಂಬಾಕು ಬೆಳೆಯುವ ಗುರಿ ನೀಡಿದ್ದರೂ 8.8 ಕೋಟಿ ಕೆ.ಜಿ.ಯಷ್ಟು ಮಾತ್ರ ಉತ್ಪಾದನೆ ಸಾಧ್ಯವಾಗಿದೆ. ಆದರೂ ಕಂಪನಿಗಳು ಉತ್ತಮ ಬೆಲೆಗೆ ಖರೀದಿಸಲು ಹಿಂದೇಟು ಹಾಕುತ್ತಿವೆ. ಆಂಧ್ರಪ್ರದೇಶದಲ್ಲಿ ವಾರ್ಷಿಕ 16 ಕೋಟಿ ಕೆ.ಜಿ.ಯಷ್ಟು ಉತ್ಪನ್ನ ಬೆಳೆಯುವ ಮಿತಿ ಇದ್ದರೂ 24 ಕೋಟಿ ಕೆ.ಜಿ.ಯಷ್ಟು ಉತ್ಪಾದನೆಯಾಗಿದೆ. ಇಲ್ಲಿ ಕಡಿಮೆ ಬೆಳೆದರೂ ಬೆಲೆಯಿಲ್ಲ. ಅಲ್ಲಿ ಗುರಿಗಿಂತ ಹೆಚ್ಚು ಉತ್ಪಾದನೆ ಮಾಡಿದರೂ ಉತ್ತಮ ಬೆಲೆ' ಎಂಬುದು ರೈತರ ಆರೋಪ.

**ಸಾಗುವಳಿ ವೆಚ್ಚ ಹೆಚ್ಚಳ:** ತಂಬಾಕು ಮಂಡಳಿಯು ನಡೆಸಿದ ಅಧ್ಯಯನದಂತೆ ಸದ್ಯ ಹೊಗೆಸೊಪ್ಪು ಬೆಳೆಯಲು ಪ್ರತಿ ಹೆಕ್ಟೇರ್‌ಗೆ ಅಂದಾಜು ಸರಾಸರಿ ₹2.79 ಲಕ್ಷ ವೆಚ್ಚವಾಗುತ್ತಿದ್ದು, 1,500 ಕೆ.ಜಿ.ಯಷ್ಟು ಇಳುವರಿ ಸಿಗುತ್ತಿದೆ. ಪ್ರತಿ ಕೆ.ಜಿ.ಗೆ ರೈತರಿಗೆ ಸರಾಸರಿ ₹280ರವರೆಗೆ ಬೆಲೆ ಸಿಗುತ್ತಿದೆ.


'ಸಾಗುವಳಿ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2022-23ರಲ್ಲಿ ಪ್ರತಿ ಕೆ.ಜಿ. ತಂಬಾಕು ಬೆಳೆಯಲು ₹139 ಖರ್ಚಾಗುತ್ತಿದ್ದರೆ, 2024-25ನೇ ಸಾಲಿನಲ್ಲಿ ಇದು ₹186ಕ್ಕೆ ಹೆಚ್ಚಿದೆ. 2022ರಲ್ಲಿ ರೈತರಿಗೆ ಹೆಕ್ಟೇರ್‌ಗೆ ₹1.34 ಲಕ್ಷ ನಿವ್ವಳ ಲಾಭ ಸಿಗುತ್ತಿದ್ದರೆ, ಪ್ರಸ್ತುತ ಅದು ₹1.06 ಲಕ್ಷಕ್ಕೆ ಇಳಿದಿದೆ. ವರ್ಷದಿಂದ ವರ್ಷಕ್ಕೆ ರೈತರ ಆದಾಯ ಮಾತ್ರ ಕುಸಿಯುತ್ತಲೇ ಇದೆ' ಎನ್ನುತ್ತವೆ ಮಂಡಳಿಯ ಅಂಕಿಅಂಶಗಳು.



ಮುಕ್ತ ಖರೀದಿಗೆ ತಂಬಾಕು ಲಭ್ಯ ಇದ್ದರೆ ರೈತರಿಗೆ ಸ್ಪರ್ಧಾತ್ಮಕ ದರ ಸಿಗಲಿದೆ ಎನ್ನುವುದು ಎಲ್ಲರ ಅಭಿಪ್ರಾಯ. ಬೆಳೆಗಾರರ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ

**ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್**
ಮೈಸೂರು–ಕೊಡಗು ಸಂಸದ

### ರಾಜ್ಯದಲ್ಲಿ ತಂಬಾಕು ಉತ್ಪಾದನೆ
(ಕೋಟಿ ಕೆ.ಜಿ.ಗಳಲ್ಲಿ)
(ಆವರಣದಲ್ಲಿರುವುದು ಕೆ.ಜಿ.ಗೆ ಸರಾಸರಿ ದರ)



| ವರ್ಷ | ಉತ್ಪಾದನೆ | ಸರಾಸರಿ ದರ |
|---|---|---|
| 2020-21 | 8.84 | (₹119.87) |
| 2021-22 | 6.81 | (₹163.11) |
| 2022-23 | 5.99 | (₹228) |
| 2023-24 | 8.84 | (₹257.46) |
| 2024-25 | 8.48 | (₹257.62) |
| 2025-26 | 8.79 | (₹280) |

### 'ಏಕಸ್ವಾಮ್ಯ ತಪ್ಪಲಿ'

ರಾಜ್ಯದಲ್ಲಿ ಸದ್ಯ ಐಟಿಸಿ, ಜಿಪಿಐ, ಎಐಎ, ಪಿಎಸ್‌ಎಸ್‌ಎಚ್, ಪಿಟಿಪಿ, ಡೆಕ್ಕನ್ ಸೇರಿ 8 ಬೃಹತ್ ಕಂಪನಿಗಳು ಹಾಗೂ 51 ಸಣ್ಣ ಕಂಪನಿಗಳು ಆನ್‌ಲೈನ್ ಹರಾಜಿನ ಮೂಲಕ ತಂಬಾಕು ಖರೀದಿಸುತ್ತಿವೆ. ಇದರಲ್ಲಿ ಐಟಿಸಿ ಸಿಂಹಪಾಲು ಹೊಂದಿದ್ದು, ಒಟ್ಟು ಉತ್ಪನ್ನದ ಅರ್ಧದಷ್ಟನ್ನು ಇದೊಂದೇ ಖರೀದಿಸುತ್ತಿದೆ.

'ಬೃಹತ್ ಕಂಪನಿಗಳು ಖರೀದಿಯಲ್ಲಿ ಏಕಸ್ವಾಮ್ಯ ಸಾಧಿಸುತ್ತಿದ್ದು, ಬೆಲೆಯನ್ನು ನಿಯಂತ್ರಿಸುತ್ತಿವೆ. ಅವು ಏಕಾಏಕಿ ಹಿಂದೆ ಸರಿದ ಸಂದರ್ಭ ಬೆಲೆ ಕುಸಿದು ರೈತರಿಗೆ ನಷ್ಟವಾಗುತ್ತದೆ. ಹೀಗಾಗಿ ಏಕಸ್ವಾಮ್ಯ ತಪ್ಪಿಸಲು ವಿದೇಶಿ ಕಂಪನಿಗಳಿಗೂ ಹರಾಜಿನಲ್ಲಿ ಪಾಲ್ಗೊಳ್ಳಲು ಮಂಡಳಿಯು ಮುಕ್ತ ಅವಕಾಶ ನೀಡಬೇಕು' ಎಂದು ಒತ್ತಾಯಿಸುತ್ತಾರೆ ಪಿರಿಯಾಪಟ್ಟಣ ಶಾಸಕರೂ ಆದ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್.

'ತಂಬಾಕು ಮಂಡಳಿಯ ಅಂಕಿಸಂಖ್ಯೆಗೂ ವಾಸ್ತವ ವೆಚ್ಚಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕಂಪನಿಯವರು ಕೊಡುವ ಬೀಜಗಳನ್ನು ಮಡಿ ಮಾಡಿ, ಬೆಳೆದ ಪೈರುಗಳನ್ನು ಹೊಲದಲ್ಲಿ ನಾಟಿ ಮಾಡುವುದರಿಂದ, ಹಣ್ಣಾದ ಎಲೆಗಳನ್ನು ಕೊಯ್ದು, ಬೇಯಿಸಿ, ಒಣಗಿಸಿ, ವಿಂಗಡಿಸಿ ಮಾರುಕಟ್ಟೆಗೆ ತಲುಪಿಸುವವರೆಗೆ ಕೆ.ಜಿ.ಗೆ ಕಡಿಮೆ ಎಂದರೂ ₹270-280 ಖರ್ಚಾಗುತ್ತಿದೆ' ಎನ್ನುತ್ತಾರೆ ರೈತ ಮುಖಂಡರು.

'ತಂಬಾಕಿಗೆ ಸ್ಪರ್ಧಾತ್ಮಕ ದರ ನೀಡಬೇಕು. ಬೆಳೆಗಾರರಿಗೆ ನಿಗದಿತ ಪರಿಹಾರ ಘೋಷಿಸಿದರೆ, ನಾವು ಬೇರೆ ಉತ್ಪನ್ನ ಬೆಳೆದುಕೊಳ್ಳುತ್ತೇವೆ' ಎಂಬುದು ರೈತರ ನಿರಾಸೆಯ ನುಡಿ.



**66,987** ಹೆಕ್ಟೇರ್
ತಂಬಾಕು ನಾಟಿಯಾದ ಪ್ರದೇಶ

**45,000**
ನೋಂದಾಯಿತ ಬೆಳೆಗಾರರು

**58,000**
ಒಟ್ಟು ಬ್ಯಾರನ್‌ಗಳ ಸಂಖ್ಯೆ

**10** ಕೋಟಿ ಕೆ.ಜಿ
2025-26ನೇ ಸಾಲಿನ ವಾರ್ಷಿಕ ಉತ್ಪಾದನೆ ಗುರಿ

**8.79** ಕೋಟಿ ಕೆ.ಜಿ
ಈ ವರ್ಷ ಉತ್ಪಾದನೆಯಾದ ತಂಬಾಕು



# ಪಶ್ಚಿಮ ಏಷ್ಯಾ ಸಂಘರ್ಷ ವಿಸ್ತರಣೆ

## ಟ್ರಂಪ್ ಭಾರಿ ಬೆಲೆ ತೆರಬೇಕಾಗುತ್ತದೆ: ಅಮೆರಿಕಕ್ಕೆ ಇರಾನ್ ಎಚ್ಚರಿಕೆ

ದುಬೈ/ಟೆಹರಾನ್ (ಎಪಿ/ಎಫ್‌ಪಿ): ಅಮೆರಿಕ -ಇಸ್ರೇಲ್ ಮತ್ತು ಇರಾನ್ ನಡುವೆ ಆರು ದಿನಗಳಿಂದ ನಡೆಯುತ್ತಿರುವ ಯುದ್ಧವು ಪಶ್ಚಿಮ ಏಷ್ಯಾದ ಗಡಿಯಾಚೆಗೂ ವಿಸ್ತರಿಸಿದೆ.

ಭಾರತದಲ್ಲಿ ಸೇನಾ ಸಮರಾಭ್ಯಾಸ ಮುಗಿಸಿಕೊಂಡು ವಾಪಸಾಗುತ್ತಿದ್ದ ಇರಾನ್‌ನ ಯುದ್ಧ ನೌಕೆಯ ಮೇಲೆ ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಅಮೆರಿಕ ಬುಧವಾರ ದಾಳಿ ನಡೆಸಿತ್ತು. ಅಜರ್‌ಬೈಜಾನ್‌ನ ವಿಮಾನ ನಿಲ್ದಾಣ ಮತ್ತು ಶಾಲೆ ಸಮೀಪ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಕತಾರ್, ಬಹರೇನ್ ಸೇರಿ ಕೊಲ್ಲಿ ರಾಷ್ಟ್ರಗಳಲ್ಲಿ ಇರಾನ್ ಹೊಸ ದಾಳಿಗಳನ್ನು ಗುರುವಾರ ನಡೆಸಿದೆ. ಟೆಹರಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದ್ದು, ಭಾರಿ ಸ್ಫೋಟಗಳು ವರದಿಯಾಗಿವೆ.

ಕೊಲ್ಲಿ ರಾಷ್ಟ್ರಗಳನ್ನು ಮೀರಿ, ಪಶ್ಚಿಮ ಏಷ್ಯಾ ಯುದ್ಧವು ವಿಸ್ತರಿಸಿದ ಬೆನ್ನಲ್ಲೇ, ಆಸ್ಟ್ರೇಲಿಯಾ ಎರಡು ಸೇನಾ ವಿಮಾನಗಳನ್ನು ಸನ್ನದ್ಧವಾಗಿರಿಸಿದೆ. 'ತನ್ನ ನೆಲದ ಮೇಲೆ ದಾಳಿ ನಡೆದರೆ ಸಶಸ್ತ್ರ ಪಡೆ ಯುದ್ಧದಲ್ಲಿ ಭಾಗವಹಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ' ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷವು ನ್ಯಾಟೊ ಸದಸ್ಯ ರಾಷ್ಟ್ರವಾದ ಟರ್ಕಿಯನ್ನೂ ಸಮರ ಕಣದೊಳಕ್ಕೆ ತಂದಿದೆ. ಟರ್ಕಿ ವಾಯುನೆಲೆ ಮೇಲೆ ಇರಾನ್ ಪ್ರಯೋಗಿಸಿದ್ದ ಕ್ಷಿಪಣಿಯನ್ನು ನ್ಯಾಟೊ ಮಿತ್ರರಾಷ್ಟ್ರದ ಪಡೆ ಹೊಡೆದುರುಳಿಸಿದೆ.

13

### ಭಾರತದ ಸಂತಾಪ



ನವದೆಹಲಿ (ಪಿಟಿಐ): ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರ ಸಾವಿಗೆ ಭಾರತ ಗುರುವಾರ ಸಂತಾಪ ಸೂಚಿಸಿದೆ.

ಖಮೇನಿ ಅವರು ಮೃತಪಟ್ಟು 5 ದಿನಗಳು ಗತಿಸಿದ ಬಳಿಕ, ಭಾರತ ಸಂತಾಪ ವ್ಯಕ್ತಪಡಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಫೆಬ್ರುವರಿ 28ರಂದು ಖಮೇನಿ ಹತರಾಗಿದ್ದಾರೆ.

13




ಇಸ್ರೇಲ್ ನಡೆಸಿದ ಬಾಂಬ್ ದಾಳಿಯಿಂದ ಟೆಹರಾನ್‌ನಲ್ಲಿ ಗುರುವಾರ ದಟ್ಟ ಹೊಗೆ ಎದ್ದಿತ್ತು – ಎಎಫ್‌ಪಿ ಚಿತ್ರ

### ಇರಾನ್ ಶಸ್ತ್ರಾಸ್ತ್ರ ಕೇಳಿಲ್ಲ: ರಷ್ಯಾ



ಮಾಸ್ಕೊ: 'ಶಸ್ತ್ರಾಸ್ತ್ರ ಪೂರೈಸುವಂತೆ ಇರಾನ್ ಮನವಿ ಮಾಡಿಲ್ಲ' ಎಂದು ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಗುರುವಾರ ಸ್ಪಷ್ಟಪಡಿಸಿದೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ವೈಮಾನಿಕ ದಾಳಿಯನ್ನು ಖಂಡಿಸಿರುವ ರಷ್ಯಾ, ತಕ್ಷಣವೇ ಕದನ ವಿರಾಮ ಘೋಷಿಸುವಂತೆ ಒತ್ತಾಯಿಸಿದೆ.

ಬುಶೇರ್‌ನಲ್ಲಿ ಎರಡು ಪರಮಾಣು ಘಟಕ ನಿರ್ಮಾಣಕ್ಕೆ ರಷ್ಯಾ ಕಳೆದ ವರ್ಷ ಇರಾನ್ ಜತೆಗೆ 20 ವರ್ಷಗಳ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿತ್ತು. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಬಳಸಲು ರಷ್ಯಾಕ್ಕೆ ಶಾಹಿದ್ ಡ್ರೋನ್‌ಗಳನ್ನು ಇರಾನ್ ಪೂರೈಸಿದೆ.

'ಶಸ್ತ್ರಾಸ್ತ್ರ ಪೂರೈಸುವಂತೆ ಇರಾನ್‌ನಿಂದ ಇದುವರೆಗೆ ಯಾವುದೇ ಮನವಿ ಬಂದಿಲ್ಲ. ನಮ್ಮ ಸ್ಥಿರ ನಿಲುವು ಎಲ್ಲರಿಗೂ ತಿಳಿದಿದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಕ್ರೆಮ್ಲಿನ್ ವಕ್ತಾರ ದಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

### ಅಮೆರಿಕದ ನೌಕೆ ಮೇಲೆ ದಾಳಿ?



ಟೆಹರಾನ್ (ಎಎಫ್‌ಪಿ): 'ಪರ್ಷಿಯನ್ ಕೊಲ್ಲಿಯ ಉತ್ತರ ಭಾಗದಲ್ಲಿ ಅಮೆರಿಕದ ತೈಲ ಸಾಗಾಟದ ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ನೌಕೆ ಹೊತ್ತಿ ಉರಿಯಿತು' ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಪ್ರಕಟಣೆ ಉಲ್ಲೇಖಿಸಿ ಇರಾನಿನ ಸರ್ಕಾರಿ ಸುದ್ದಿವಾಹಿನಿ ವರದಿ ಮಾಡಿದೆ.

ಈ ದಾಳಿಯ ಕುರಿತು ಇರಾನ್‌ನ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ. ಆದರೆ, ತೈಲ ಸಾಗಾಟದ ಹಡಗುಗಳು ಸಾಗುವ ಪ್ರಮುಖ ಜಲಮಾರ್ಗವಾದ ಹೊರ್ಮುಜ್ ಜಲಸಂಧಿ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುವುದಾಗಿ ರೆವಲ್ಯೂಷನರಿ ಗಾರ್ಡ್ಸ್ ಹೇಳಿದೆ.

### ಇರಾನ್‌ನ ಮತ್ತೊಂದು ನೌಕೆಗೆ ದಾಳಿ ಭೀತಿ

ಗಾಲೆ (ಶ್ರೀಲಂಕಾ) (ಎಎಫ್‌ಪಿ): ಇರಾನ್‌ನ ಮತ್ತೊಂದು ಯುದ್ಧ ನೌಕೆಯು ಗುರುವಾರ ಶ್ರೀಲಂಕಾದ ಜಲಗಡಿಯೊಳಗೆ ಪ್ರವೇಶಿಸಿದ್ದು, ಅದಕ್ಕೂ ಅಮೆರಿಕದ ದಾಳಿ ಭೀತಿ ಉಂಟಾಗಿದೆ.

100ಕ್ಕೂ ಅಧಿಕ ಸಿಬ್ಬಂದಿ ಇರುವ ನೌಕೆ ಶ್ರೀಲಂಕಾ ಕರಾವಳಿಯಲ್ಲಿ ಸಂಚರಿಸುತ್ತಿದೆ. 'ನೌಕೆಯಲ್ಲಿರುವವರ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಪ್ರಾದೇಶಿಕ ಶಾಂತಿಯ ದೃಷ್ಟಿಯಿಂದ ಈ ವಿಚಾರದಲ್ಲಿ ಮಧ್ಯಪ್ರವೇಶಿಸುತ್ತೇವೆ' ಎಂದು ಶ್ರೀಲಂಕಾದ ಸಚಿವರೊಬ್ಬರು ಅಲ್ಲಿನ ಸಂಸತ್ತಿಗೆ ತಿಳಿಸಿದ್ದಾರೆ.

**ಅಮೆರಿಕ ರಾಯಭಾರ ಕಚೇರಿ ಸ್ಥಗಿತ (ಟೆಹರಾನ್ ವರದಿ):** ಇರಾನ್‌ನಿಂದ ಸತತ ಕ್ಷಿಪಣಿ ದಾಳಿ ಬೆನ್ನಲ್ಲೇ, ಕುವೈತ್‌ನಲ್ಲಿರುವ ರಾಯಭಾರ ಕಚೇರಿಯನ್ನು ಅಮೆರಿಕ ಸ್ಥಗಿತಗೊಳಿಸಿದೆ.

**ಇರಾನ್‌ನ ಮುಂದಿನ ನಾಯಕನನ್ನು ಆಯ್ಕೆ ಮಾಡುವಲ್ಲಿ ಅಮೆರಿಕ ಪಾತ್ರ ವಹಿಸುತ್ತದೆ. ಆಯತೊಲ್ಲಾ ಖಮೇನಿ ಮಗನನ್ನು ಉತ್ತರಾಧಿಕಾರಿಯಾಗಿ ಮಾಡಲು ಒಪ್ಪಲ್ಲ**

**ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

### ಬೆಂಗಳೂರು ವಿಮಾನ ನಿಲ್ದಾಣಕ್ಕೆ ಸತತ ನಾಲ್ಕನೇ ವರ್ಷವೂ ಸಂದ ಪ್ರಶಸ್ತಿ

# ಉತ್ತಮ ವಿಮಾನ ನಿಲ್ದಾಣದ ಗರಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 2025ರ ಏರ್‌ಪೋರ್ಟ್ ಕೌನ್ಸಿಲ್ ಇಂಟರ್‌ನ್ಯಾಷನಲ್ ನೀಡುವ ಏರ್‌ಪೋರ್ಟ್ ಸರ್ವಿಸ್ ಕ್ವಾಲಿಟಿ ಪ್ರಶಸ್ತಿಯಲ್ಲಿ 'ವಿಶ್ವದ ಅತ್ಯುತ್ತಮ ವಿಮಾನ ನಿಲ್ದಾಣ' ಎಂಬ ಗೌರವ ಪಡೆದುಕೊಂಡಿದೆ. ಬೆಂಗಳೂರು ವಿಮಾನ ನಿಲ್ದಾಣ ಸತತ ನಾಲ್ಕನೇ ವರ್ಷವೂ ಈ ಪ್ರಶಸ್ತಿಗೆ ಪಾತ್ರವಾಗಿದೆ.

ಪ್ರಯಾಣಿಕರಿಂದ ಪಡೆಯುವ ನೇರ ಪ್ರತಿಕ್ರಿಯೆಗಳ ಆಧರಿಸಿ ಪ್ರಶಸ್ತಿ ನೀಡಲಾಗುತ್ತದೆ. ವಿಮಾನ ನಿಲ್ದಾಣದಲ್ಲಿ ದೊರೆಯುವ ಸೇವೆ, ಸೌಕರ್ಯ, ಸ್ವಚ್ಛತೆ, ಪ್ರಯಾಣಿಕರಿಗೆ ಇರುವ ಅನುಕೂಲತೆ ಮತ್ತು ಸೌಲಭ್ಯಗಳನ್ನು ಗಮನದಲ್ಲಿಟ್ಟು ಮೌಲ್ಯಮಾಪನ ಮಾಡಲಾಗುತ್ತದೆ.




ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

ವಿಮಾನ ನಿಲ್ದಾಣದ ಟರ್ಮಿನಲ್–1 ಮತ್ತು ಟರ್ಮಿನಲ್-2ರಲ್ಲಿ ಬಂದಿಳಿಯುವ ಪ್ರಯಾಣಿಕರಿಗೆ ನೀಡುವ ಸೇವೆಗಳು ಉತ್ತಮ ಗುಣಮಟ್ಟದ್ದಾಗಿವೆ ಎಂದು ಪ್ರಯಾಣಿಕರ ಪ್ರತಿಕ್ರಿಯೆ ತಿಳಿಸಿದೆ.

ಇಮಿಗ್ರೇಷನ್ ಪ್ರಕ್ರಿಯೆ ಸಮಯ ಕಡಿಮೆಯಾಗಿರುವುದು, ಸರಕು-(ಬ್ಯಾಗೇಜ್) ಪಡೆಯುವ ವ್ಯವಸ್ಥೆ ಸುಧಾರಿಸಿರುವುದು, ವಿಮಾನ ನಿಲ್ದಾಣದೊಳಗಿನ ಮಾರ್ಗಸೂಚಿಗಳು (ಸೈನ್ ಬೋರ್ಡ್), ನಿರೀಕ್ಷಣಾ ಪ್ರದೇಶಗಳ ಸೌಕರ್ಯ ಮತ್ತು ಡಿಜಿಟಲ್ ಸೇವೆಗಳು ಸುಧಾರಿಸಿರುವುದಿಂದ ಪ್ರಶಸ್ತಿ ಲಭಿಸಿದೆ ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತಿಳಿಸಿದೆ.

2025ರಲ್ಲಿ 2024ರಿಗಿಂತ ಕೆಲವು ಸೇವೆಗಳಲ್ಲೂ ಸುಧಾರಣೆ ಕಂಡುಬಂದಿದೆ. ವೈ-ಫೈ ಸೌಲಭ್ಯ, ಸರಕು ಪಡೆಯುವ ಸ್ಥಳದ ಡಿಸ್‌ಪ್ಲೇ ವ್ಯವಸ್ಥೆ, ಟ್ರಾಲಿ, ನಿರೀಕ್ಷಣಾ ಪ್ರದೇಶಗಳ ಆರಾಮದಾಯಕತೆ, ಟರ್ಮಿನಲ್ ಒಳಗಿನ ನಡೆದು ಹೋಗುವ ದೂರ, ಬ್ಯಾಗೇಜ್ ಪಡೆಯುವ ಸಮಯ, ವಿಮಾನದಿಂದ ಇಳಿಯುವ ಸಮಯ ಹಾಗೂ ಇಮಿಗ್ರೇಷನ್ ಪ್ರಕ್ರಿಯೆ ಸಮಯ ಕಡಿಮೆಯಾಗಿದೆ. ಈ ಅಂಶವನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ.

'ಪ್ರಯಾಣಿಕರಿಗೆ ವೇಗವಾದ, ಸುಗಮ ಮತ್ತು ಅನುಕೂಲಕರ ಅನುಭವ ನೀಡುವುದು ನಮ್ಮ ಮುಖ್ಯ ಉದ್ದೇಶ. ವಿಮಾನದಿಂದ ಇಳಿಯುವ ಕ್ಷಣದಿಂದ ಹೊರಗೆ ಬರುವವರೆಗಿನ ಪ್ರಕ್ರಿಯೆ ಸುಗಮವಾಗಿರಲು ನಾವು ವ್ಯವಸ್ಥೆ ಮಾಡಿದ್ದೇವೆ. ನಾಲ್ಕನೇ ವರ್ಷವೂ ಈ ಪ್ರಶಸ್ತಿ ದೊರೆತಿರುವುದು ನಮ್ಮ ತಂಡದ ಒಟ್ಟಾರೆ ಪ್ರಯತ್ನದ ಫಲವಾಗಿದೆ' ಎಂದು ವಿಮಾನ ನಿಲ್ದಾಣ ಲಿಮಿಟೆಡ್ ಮುಖ್ಯ ಕಾರ್ಯಾಚರಣೆ ಅಧಿಕಾರಿ ಗಿರೀಶ್ ನಾಯರ್ ತಿಳಿಸಿದ್ದಾರೆ.

# ಶರಾವತಿ ಯೋಜನೆಗೆ ತಜ್ಞರ ಇತಿಶ್ರೀ

## ಪಂಪ್ಡ್ ಸ್ಟೋರೇಜ್ ಯೋಜನೆಗೆ ಅನುಮತಿ ಬೇಡ
## ಕೇಂದ್ರ ಸಮಿತಿ ಶಿಫಾರಸು

• ಮಂಜುನಾಥ ಹೆಬ್ಬಾರ್

ನವದೆಹಲಿ: '₹10 ಸಾವಿರ ಕೋಟಿ ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವನೆ ತಾಂತ್ರಿಕ ಅರ್ಹತೆ, ಪರಿಸರ ಸುಸ್ಥಿರತೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ' ಎಂದು ಅಭಿಪ್ರಾಯಪಟ್ಟಿರುವ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದ ತಜ್ಞರ ತಂಡವು, 'ಈ ಯೋಜನೆಗೆ ಅನುಮತಿ ನೀಡುವುದು ಬೇಡ' ಎಂದು ಶಿಫಾರಸು ಮಾಡಿದೆ. ಇದರಿಂದಾಗಿ, ಯೋಜನೆ ವಿರೋಧಿಸಿ ಬೀದಿಗಿಳಿದಿದ್ದ ಸ್ಥಳೀಯ ಜನರು ಹಾಗೂ ಪರಿಸರವಾದಿಗಳ ಹೋರಾಟಕ್ಕೆ ದೊಡ್ಡ ಜಯ ಸಿಕ್ಕಂತಾಗಿದೆ.

ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾದ ಡಾ.ಎಚ್.ಎಸ್.ಸಿಂಗ್, ಪ್ರೊ.ರಾಮನ್ ಸುಕುಮಾರನ್ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಹಾನಿರ್ದೇಶಕ ಶಿವಕುಮಾರ್ ಅವರನ್ನು ಒಳಗೊಂಡ ತಜ್ಞರ ಸಮಿತಿಯು ಡಿಸೆಂಬರ್ 27ರಿಂದ 30ರವರೆಗೆ ಯೋಜನಾ ಪ್ರದೇಶದಲ್ಲಿ ಸುತ್ತಾಡಿ ಸ್ಥಳೀಯರಿಂದ ಅಭಿಪ್ರಾಯ ಸಂಗ್ರಹಿಸಿ ಹಾಗೂ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿ ಪರಿಸರ ಸಚಿವಾಲಯಕ್ಕೆ 42 ಪುಟಗಳ ವರದಿ ಸಲ್ಲಿಸಿದೆ. ಪರಿಸರ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಗುರುವಾರ ಈ ವರದಿ ಪಡೆದಿದ್ದಾರೆ.

'ಯೋಜನೆಯ ಪರಿಸರ ಮತ್ತು ಆರ್ಥಿಕ ಕಾರ್ಯಸಾಧ್ಯತೆಯು ಪ್ರಶ್ನಾರ್ಹವಾಗಿದೆ. ಯೋಜನೆಯ ಅನುಷ್ಠಾನದಿಂದ ದೇಶದ ಪರಿಸರ ಸಮಗ್ರತೆಗೆ ಅಪಾರ ಪ್ರಮಾಣದ ಹಾನಿಯಾಗುವ ಸಾಧ್ಯತೆಯಿದೆ. ಜತೆಗೆ, ರಾಷ್ಟ್ರೀಯ ಆರ್ಥಿಕತೆಯ ದೀರ್ಘಕಾಲೀನ ಸುಸ್ಥಿರತೆಗೆ ಗಂಭೀರ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

'ಪಂಪ್ಡ್ ಸ್ಟೋರೇಜ್ ಯೋಜನೆಯಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ಭಾರಿ ಲಾಭವೇನೂ ಆಗುವುದಿಲ್ಲ. ಯೋಜನೆಯಿಂದಾಗಿ ತಾತ್ಕಾಲಿಕ ಲಾಭವಷ್ಟೇ ಆಗುತ್ತದೆ. ಆದರೆ, ಯೋಜನೆಯಿಂದ ಆಗುವ ಪ್ರತಿಕೂಲ ಪರಿಣಾಮ ಘೋರವಾದುದು. ಪರಿಸರ ಸೂಕ್ಷ್ಮವಾದ ಹಾಗೂ ಸಂರಕ್ಷಿತ ಪ್ರದೇಶದಲ್ಲಿ ಅನುಷ್ಠಾನಗೊಳ್ಳಲಿರುವ ಯೋಜನೆಯಿಂದಾಗಿ ಹುಲಿಗಳು ಹಾಗೂ ಸಿಂಹ ಬಾಲದ ಸಿಂಗಳೀಕಗಳ ಮೇಲಾಗುವ ಪರಿಣಾಮ ಅಪಾರವಾದುದು. ಪ್ರಸ್ತಾವಿತ ಚಟುವಟಿಕೆಗಳು ಆವಾಸಸ್ಥಾನ ವಿಘಟನೆ, ವನ್ಯಜೀವಿಗಳಿಗೆ ಅಡಚಣೆ, ಅರಣ್ಯ ಮತ್ತು ನದಿ ಪರಿಸರ ವ್ಯವಸ್ಥೆಗಳ ಮೇಲೆ ಭಾರಿ ಒತ್ತಡ ಹೇರಲಿದೆ. ಅನೇಕ ಯೋಜನೆಗಳಿಂದಾಗಿ ಉತ್ತರ ಕನ್ನಡ ಜಿಲ್ಲೆ ಈಗಾಗಲೇ ನಲುಗಿದೆ. ಜಿಲ್ಲೆಯ ಮೇಲೆ ಮತ್ತೊಂದು ಯೋಜನೆಯನ್ನು ಹೇರಿದರೆ ಪರಿಸರ ಸಮಗ್ರತೆಯ ದೀರ್ಘಕಾಲೀನ ಅವನತಿಗೆ ಕಾರಣವಾಗಲಿದೆ' ಎಂದು ಸಮಿತಿ ಪ್ರತಿಪಾದಿಸಿದೆ.

'ಅಸ್ತಿತ್ವದಲ್ಲಿರುವ ವಿದ್ಯುತ್ ಪ್ರಸರಣ ಮಾರ್ಗಗಳನ್ನೇ ವಿದ್ಯುತ್ ಸರಬರಾಜಿಗೆ ಬಳಸಿಕೊಳ್ಳಲಾಗುವುದು ಎಂದು ಮೂಲ ಪ್ರಸ್ತಾವದಲ್ಲಿ ತಿಳಿಸಲಾಗಿದೆ. ಇದೊಂದು ಸತ್ಯ ಮರೆಮಾಚುವ ಹೇಳಿಕೆ. ಗೇರುಸೊಪ್ಪ ಹಾಗೂ ತಾಳಗುಪ್ಪದ ನಡುವೆ ಇರುವ 220 ಕೆ.ವಿ. ವಿದ್ಯುತ್ ಮಾರ್ಗವು 2000 ಮೆಗಾವಾಟ್ ವಿದ್ಯುತ್ ಸರಬರಾಜು ಮಾಡಲು ಅಸಮರ್ಥವಾಗಿದೆ. ಇದಕ್ಕೆ ಹೆಚ್ಚುವರಿ 400 ಕೆ.ವಿ ಮಾರ್ಗದ ಅಗತ್ಯ ಇದೆ. ಈ ವಿಷಯವನ್ನು ಮುಚ್ಚಿಡಲಾಗಿದೆ. ಪ್ರಸರಣ ಮಾರ್ಗದ ನಿರ್ಮಾಣದಿಂದ ಇನ್ನಷ್ಟು ಹಾನಿ ಆಗುತ್ತದೆ' ಎಂದು ತಜ್ಞರ ಸಮಿತಿ ಬೆಳಕು ಚೆಲ್ಲಿದೆ.

ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವ ಬಗ್ಗೆ 2025ರ ಜೂನ್ 26ರಂದು ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ ಚರ್ಚಿಸಲಾಗಿತ್ತು. 13 ಷರತ್ತುಗಳನ್ನು ವಿಧಿಸಿ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಆಗಸ್ಟ್ 19ರಂದು ನಡೆದ ಸ್ಥಾಯಿ ಸಮಿತಿಯ 85ನೇ ಸಭೆಯಲ್ಲಿ ಪ್ರಸ್ತಾವವನ್ನು ಮರು ಪರಿಶೀಲಿಸಲಾಗಿತ್ತು. ಪಶ್ಚಿಮ ಘಟ್ಟದಲ್ಲಿ ಜಾರಿಗೊಳ್ಳಲಿರುವ ಯೋಜನೆ ಬಗ್ಗೆ ಕೆಲವು ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಹೀಗಾಗಿ, ತಜ್ಞರ ಸಮಿತಿ ರಚಿಸಿ ಸ್ವತಂತ್ರ ಹಾಗೂ ಸ್ಥಳ ಪರಿಶೀಲನಾ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿತ್ತು. ಈ ವರದಿಯನ್ನು ಸ್ಥಾಯಿ ಸಮಿತಿಗೆ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಈ ವರದಿಯು ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚೆಗೆ ಬರಲಿದೆ.

### ಯೋಜನೆಯಿಂದ ಆಗುವ ಅನಾಹುತಗಳು

- ಅಗಾಧ ಪ್ರಮಾಣದ ಕಾಡುಗಳ ನಾಶ
- ವನ್ಯಜೀವಿಗಳ ಆವಾಸಸ್ಥಾನ ಹಾಗೂ ಕೆಲವು ಅಪರೂಪದ ಮತ್ತು ಸ್ಥಳೀಯ ಪ್ರಭೇದಗಳ ನಷ್ಟ
- ದೀರ್ಘಕಾಲದಲ್ಲಿ ನದಿಗಳ ಅವನತಿ
- ವನ್ಯಜೀವಿಗಳಿಗೆ ನಿರಂತರ ತೊಂದರೆ
- ಪಶ್ಚಿಮ ಘಟ್ಟದ ಇನ್ನೊಂದು ಬದಿಯಲ್ಲಿ ನಿರ್ಮಾಣ ಕಾರ್ಯಗಳಿಗೆ ಕಾಂಕ್ರೀಟ್ ಉತ್ಪಾದಿಸಲು ಗಣಿಗಾರಿಕೆ ಚಟುವಟಿಕೆಗಳು
- ಕೆಪಿಸಿಎಲ್ ಹೇಳಿಕೆ ನಿಜವಾಗಿದ್ದರೆ, 500 ಮೆಗಾವಾಟ್‌ಗಿಂತ ಹೆಚ್ಚಿನ ನಿವ್ವಳ ವಿದ್ಯುತ್ ನಷ್ಟ. ಕೆಪಿಸಿಎಲ್ ಒದಗಿಸಿದ ಅಂಕಿಅಂಶಗಳಿಗಿಂತ ನೈಜ ನಷ್ಟವು ಹೆಚ್ಚಾಗಿರಲಿದೆ ಎಂಬುದು ತಜ್ಞರ ಅಭಿಪ್ರಾಯ
- ಭೂಗತ ಬಂಡೆಗಳನ್ನು ಸ್ಫೋಟಿಸಲು ಭಾರವಾದ ಯಂತ್ರಗಳನ್ನು ಬಳಸುವುದರಿಂದ ಭೂಕುಸಿತ ಹೆಚ್ಚಳ
- ಯೋಜನೆ ಜಾರಿಯಿಂದಾಗಿ ರೈತರ ವಾಣಿಜ್ಯಿಕ ಹಾಗೂ ಇತರ ಬೆಳೆಗಳ ನಾಶ
- ವನ್ಯಜೀವಿಗಳ ಪ್ರಮುಖ ಆವಾಸಸ್ಥಾನವಾಗಿರುವ ದಟ್ಟ ಅರಣ್ಯಗಳಿಗೆ ಸ್ಥಳಾಂತರಗೊಂಡ ಕುಟುಂಬಗಳಿಂದ ಅತಿಕ್ರಮಣ ಸಾಧ್ಯತೆ. ಈ ಹಿಂದೆ ಶರಾವತಿ ಅಣೆಕಟ್ಟೆ ನಿರ್ಮಾಣದ ಸಂದರ್ಭದಲ್ಲಿ ಅನೇಕ ಸಂತ್ರಸ್ತ ಕುಟುಂಬಗಳು ದಟ್ಟ ಅರಣ್ಯದಲ್ಲಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆ ಕಣ್ಣಮುಂದಿದೆ

(ಸಮಿತಿಯ ವರದಿಯಲ್ಲಿ ಉಲ್ಲೇಖವಾಗಿರುವ ಅಂಶಗಳು)




ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಗೂಗಲ್ ನಕ್ಷೆ



**ಕೇಂದ್ರ ಸರ್ಕಾರದ ಸಮಿತಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಸೋಂದಾ ಸ್ವರ್ಣವಲ್ಲಿ ಶ್ರೀಗಳು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಭೀಮಣ್ಣ ನಾಯ್ಕ್, ಶಿವರಾಮ ಹೆಬ್ಬಾರ, ಶಾಂತಾರಾಮ ಸಿದ್ದಿ, ವೃಕ್ಷ ಲಕ್ಷ ಆಂದೋಲನ, ಎರಡೂ ಜಿಲ್ಲೆಗಳ ಜನರು, ಧಾರ್ಮಿಕ ಮುಖಂಡರು, ಪರಿಸರವಾದಿಗಳು ಹಾಗೂ ಜೀವಶಾಸ್ತ್ರಜ್ಞರು ಸೇರಿದಂತೆ ಸಾವಿರಾರು ಜನರ ಹೋರಾಟಕ್ಕೆ ಜಯ ಸಿಕ್ಕಿದೆ**

**ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾವಾದಿ

Publication Date
06/03/2026

Presented by



ಅಮೆರಿಕ ಜಾಗತಿಕವಾಗಿ ಬೃಹತ್ ದೇಶ. ಇಸ್ರೇಲ್ ಅತ್ಯಂತ ಪ್ರಬಲ ದೇಶ. ಇವೆರಡರ ಜಂಟಿ ದಾಳಿಯನ್ನು ಇರಾನ್ ಹೆಚ್ಚು ದಿನ ತಡೆಯಲಾರದು ಎಂದು ವಿಶ್ಲೇಷಿಸಲಾಗಿತ್ತು. ಯುದ್ಧದ ಮೊದಲ ದಿನವೇ ತನ್ನ ಸರ್ವೋಚ್ಚ ನಾಯಕನನ್ನು ಮತ್ತು ಹಿರಿಯ ಅಧಿಕಾರಿಗಳನ್ನು ಕಳೆದುಕೊಂಡರೂ ಇರಾನ್ ದೈತ್ಯಶಕ್ತಿಗಳ ಎದುರು ಮಣಿದಿಲ್ಲ. ತನ್ನ ಭೂಪ್ರದೇಶ, ಜನರ ರಕ್ಷಣೆಗೆ ಪ್ರಯತ್ನ ನಡೆಸುತ್ತಲೇ ಅಮೆರಿಕ, ಇಸ್ರೇಲ್ ವಿರುದ್ಧ ಮಾತ್ರವಲ್ಲದೇ ತನ್ನ ನೆರೆಯ ಮುಸ್ಲಿಂ ರಾಷ್ಟ್ರಗಳ ವಿರುದ್ಧವೂ ಹೋರಾಡುತ್ತಿದೆ. ಇರಾನ್ ಇದುವರೆಗೆ ಸಾವಿರಕ್ಕೂ ಹೆಚ್ಚು ಡ್ರೋನ್‌ಗಳು, 650ಕ್ಕೂ ಹೆಚ್ಚು ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಪ್ರಯೋಗ ಮಾಡಿದೆ ಎನ್ನುವ ವರದಿಗಳಿವೆ

## ಇರಾನ್ ಸೇನಾ ಸಾಮರ್ಥ್ಯವೇನು?




**11.70** ಲಕ್ಷ– ಒಟ್ಟು ಸೇನಾ ಸಿಬ್ಬಂದಿ

- **6.10** ಲಕ್ಷ ಸಕ್ರಿಯ ಸಿಬ್ಬಂದಿ
- **3.50** ಲಕ್ಷ ಮೀಸಲು ಸಿಬ್ಬಂದಿ
- **2.10** ಲಕ್ಷ ಅರೆ ಸೇನಾ ಸಿಬ್ಬಂದಿ

- ಇರಾನ್‌ನಲ್ಲಿ ಎರಡು ಸೇನೆಗಳಿವೆ. ಒಂದು ಸಾಂಪ್ರಾದಾಯಿಕ ಸೇನೆ ಆರ್ಟೆಶ್, ಇನ್ನೊಂದು ಇಸ್ಲಾಮಿಕ್ ರೆವೆಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ). ಐಆರ್‌ಜಿಸಿ ದೇಶದ ಪರಮೋಚ್ಚ ನಾಯಕನ ಅಧೀನದಲ್ಲಿ ಬರುತ್ತದೆ. ಕ್ಷಿಪಣಿ, ಡ್ರೋನ್, ಗಡಿಯಾಚೆಗಿನ ನಿಗಾದ ಹೊಣೆಯನ್ನು ಇದು ಹೊತ್ತುಕೊಂಡಿದೆ. ಇದರ ಅಡಿಯಲ್ಲಿ ಬಸಿಜ್ ಎನ್ನುವ ಆಂತರಿಕ ಸ್ವಯಂ ಸೇವಕರ ಜಾಲ ಬರುತ್ತದೆ. ನೈತಿಕ ಪೊಲೀಸ್‌ಗಿರಿಯನ್ನು ಇದು ನಿರ್ವಹಿಸುತ್ತದೆ
- ಸೇನೆಗಳನ್ನು ಪ್ರತ್ಯೇಕ ಘಟಕಗಳನ್ನಾಗಿ ಮಾಡಲಾಗಿದ್ದು, ಯುದ್ಧದ ಸಮಯದಲ್ಲಿ ಆಯಾ ಘಟಕಗಳೇ ನಿರ್ಧಾರ ಕೈಗೊಳ್ಳುವ ಅಧಿಕಾರ ಹೊಂದಿವೆ
- ಗ್ಲೋಬಲ್ ಫೈರ್‌ಪವರ್‌ನ ಪ್ರಕಾರ, ಸೇನಾ ಶಕ್ತಿಯಲ್ಲಿ ಜಗತ್ತಿನ **145** ದೇಶಗಳ ಪೈಕಿ ಇರಾನ್‌ಗೆ **16**ನೇ ಸ್ಥಾನ

- ಇರಾನ್‌ನ ಕ್ಷಿಪಣಿಗಳ ಬಹುತೇಕ ತಂತ್ರಜ್ಞಾನ ಉತ್ತರ ಕೊರಿಯಾ, ಚೀನಾ ಮತ್ತು ರಷ್ಯಾದ್ದು
- ಮೂರು ಹಂತದ ವಾಯು ರಕ್ಷಣಾ ವ್ಯವಸ್ಥೆಯನ್ನು ಇರಾನ್ ಹೊಂದಿದೆ. ಈ ವ್ಯವಸ್ಥೆಯ ತಂತ್ರಜ್ಞಾನ ಕೂಡ ಉತ್ತರ ಕೊರಿಯಾ, ಚೀನಾ ಮತ್ತು ರಷ್ಯಾದಿಂದ ಪಡೆದಿದ್ದು

**551** ಯುದ್ಧವಿಮಾನಗಳು

**2,675** ಸೇನಾ ಟ್ಯಾಂಕುಗಳು

**107** ಯುದ್ಧ ನೌಕೆಗಳು

**80,000** ಡ್ರೋನ್‌ಗಳ ಸಂಖ್ಯೆ

**2,000*** ಮಧ್ಯಮ ವ್ಯಾಪ್ತಿಯ ಗುರಿ ನಿರ್ದೇಶಿತ ಕ್ಷಿಪಣಿಗಳ ಅಂದಾಜು ಸಂಖ್ಯೆ

**6,000-8,000*** ಕಡಿಮೆ ವ್ಯಾಪ್ತಿಯ ಗುರಿ ನಿರ್ದೇಶಿತ ಕ್ಷಿಪಣಿಗಳ ಅಂದಾಜು ಸಂಖ್ಯೆ

**650**ಕ್ಕೂ ಹೆಚ್ಚು ಈವರೆಗೆ ಇರಾನ್ ದಾಳಿಗೆ ಬಳಸಿದ ಕ್ಷಿಪಣಿಗಳು

**1,300**ಕ್ಕೂ ಹೆಚ್ಚು ದಾಳಿಗೆ ಬಳಸಿದ ಡ್ರೋನ್‌ಗಳ ಸಂಖ್ಯೆ



* ಯುದ್ಧ ಆರಂಭಕ್ಕೂ ಮೊದಲು

# ಅಮೆರಿಕದ ಅಂಕೆಗೆ ಸಿಗದ ಇರಾನ್

ಪ್ರಜಾವಾಣಿ ವಾರ್ತೆ

ಕೇವಲ 9.3 ಕೋಟಿ ಜನಸಂಖ್ಯೆ ಹೊಂದಿರುವ ಪುಟ್ಟ ರಾಷ್ಟ್ರ ಇರಾನ್. ಈ ತೈಲ ಸಮೃದ್ಧ ರಾಷ್ಟ್ರದ ಮೇಲೆ ಬಹಳ ಹಿಂದಿನಿಂದಲೂ ಜಗತ್ತಿನ 'ದೊಡ್ಡಣ್ಣ' ಎಂದೇ ಹೆಸರಾಗಿರುವ ಅಮೆರಿಕ, ತಂತ್ರಜ್ಞಾನ, ಶಸ್ತ್ರಾಸ್ತ್ರಗಳ ಸಾಮರ್ಥ್ಯದಲ್ಲಿ ಭಾರಿ ಪ್ರಗತಿ ಸಾಧಿಸಿರುವ ಇಸ್ರೇಲ್ ಕಣ್ಣು ನೆಟ್ಟಿದ್ದವು. ಅಷ್ಟೇ ಅಲ್ಲದೇ ನೆರೆಯ ಅರಬ್ ರಾಷ್ಟ್ರಗಳು ಕೂಡ ಇರಾನ್ ಅನ್ನು ಗುರಿ ಮಾಡುವ ಸಲುವಾಗಿ ದಶಕಗಳಿಂದ ಸಿದ್ಧತೆ ನಡೆಸಿದ್ದವು. ಅಮೆರಿಕದ ಸೇನಾನೆಲೆಗಳಿಗೆ ಸ್ಥಳ ಒದಗಿಸುವುದರ ಜತೆಗೆ ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನೂ ಖರೀದಿ ಮಾಡಿದ್ದವು.

ಅಮೆರಿಕ–ಇಸ್ರೇಲ್ ಫೆ.28ರಂದು ಇರಾನ್ ವಿರುದ್ಧ ದಿಢೀರ್ ದಾಳಿ ಆರಂಭಿಸಿದ್ದರೂ ಅದು ತೀರಾ ಅನಿರೀಕ್ಷಿತವೇನಲ್ಲ. ಮೊದಲ ದಿನವೇ ಇರಾನ್ ತನ್ನ ಸರ್ವೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರನ್ನು ಕಳೆದುಕೊಂಡಿತು. ನಂತರದ ದಿನಗಳಲ್ಲಿ ಹಲವು ಹಿರಿಯ ಅಧಿಕಾರಿಗಳು ಹತರಾದರು. ಇರಾನ್ ಬಹುಬೇಗ ಶರಣಾಗಲಿದೆ ಎಂದು ವಿರೋಧಿ ಕೂಟ ಭಾವಿಸಿತ್ತು. ಆದರೆ, ಅವರ ಲೆಕ್ಕಾಚಾರ ತಲೆಕೆಳಗಾಗಿದೆ, ಇರಾನ್ ಮಾಡು ಇಲ್ಲವೇ ಮಡಿ ಎನ್ನುವಂತೆ ತೀವ್ರವಾದ ಹೋರಾಟದಲ್ಲಿ ತೊಡಗಿದೆ.

ಇರಾನ್ ಮೇಲೆ ದಾಳಿ ಮಾಡುವಾಗ ಎಲ್ಲ ಅಂತರರಾಷ್ಟ್ರೀಯ ಕಾನೂನು, ನೈತಿಕತೆ ಮೀರಿ ಶಾಲೆ, ಆಸ್ಪತ್ರೆ, ಜನವಸತಿ ಪ್ರದೇಶಗಳ ಮೇಲೆ ಅಮೆರಿಕ–ಇಸ್ರೇಲ್ ದಾಳಿ ನಡೆಸಿವೆ. ಭಾರತದಲ್ಲಿ ನೌಕಾ ಸಮರಾಭ್ಯಾಸ ನಡೆಸಿ ಹೊರಟಿದ್ದ ಇರಾನ್‌ನ ಯುದ್ಧನೌಕೆಯನ್ನು ಶ್ರೀಲಂಕಾದ ಕರಾವಳಿಯಲ್ಲಿ ಅಂತರರಾಷ್ಟ್ರೀಯ ಜಲ ಮಾರ್ಗದಲ್ಲಿ ಹೊಡೆದುರುಳಿಸಲಾಗಿದೆ. ಯುದ್ಧದಿಂದಾಗಿ ಇರಾನ್‌ನಲ್ಲಿ ಇದುವರೆಗೆ ಸುಮಾರು 1,000ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ ಎನ್ನಲಾಗುತ್ತಿದ್ದು, ಗಾಯಾಳುಗಳ ಸಂಖ್ಯೆಯೂ ದೊಡ್ಡದಿದೆ. ಆದರೆ, ಇರಾನ್, ತನ್ನ ನೆರೆಯ ಯುಎಇ, ಕುವೈತ್, ಸೌದಿ ಅರೇಬಿಯಾ, ಬಹರೇನ್, ಕತಾರ್, ಇರಾಕ್ ಮುಂತಾದ ಪಶ್ಚಿಮ ಏಷ್ಯಾದ ಮುಸ್ಲಿಂ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುತ್ತಿದೆ. ಜತೆಗೆ, ಟೆಲ್ ಅವೀವ್ ಸೇರಿದಂತೆ ಇಸ್ರೇಲ್‌ನ ಹಲವು ಪ್ರದೇಶಗಳ ಮೇಲೆಯೂ ದಾಳಿ ನಡೆಸಿದೆ. ಈ ದೇಶಗಳ ಇಂಧನ ನೆಲೆಗಳು, ಹೋಟೆಲ್‌ಗಳು, ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದೆ. ನ್ಯಾಟೊ ಸದಸ್ಯ ರಾಷ್ಟ್ರ ಟರ್ಕಿಯ ಮೇಲೂ ಕ್ಷಿಪಣಿ ಪ್ರಯೋಗ ಮಾಡಿದೆ.

ಇರಾನ್ ದಾಳಿಯಿಂದ ನೆರೆಯ ರಾಷ್ಟ್ರಗಳ ತೈಲ ಮೂಲಸೌಕರ್ಯಗಳಿಗೆ ಹಾನಿಯಾಗಿದ್ದು, ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಅಮೆರಿಕ ಸೈನಿಕರ ಜತೆಗೆ ನಾಗರಿಕರೂ ಸಾವಿಗೀಡಾಗಿದ್ದಾರೆ. ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿದೆ. ಶಾಲೆಗಳನ್ನು ಸ್ಥಳಾಂತರಿಸಲಾಗಿದೆ. ಮನೆ ಬಿಟ್ಟು ಹೊರಬರದಂತೆ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಯುದ್ಧದ ಸಂದರ್ಭದಲ್ಲಿ ಯಾವ ರೀತಿಯ ಪ್ರತಿರೋಧ ತೋರಬೇಕು ಎನ್ನುವುದರ ಬಗ್ಗೆ ಇರಾನ್ ವರ್ಷಗಟ್ಟಲೇ ನಡೆಸಿದ ಚಿಂತನೆ, ಮಾಡಿದ ತಾಲೀಮು ಇದರ ಹಿಂದಿದೆ. ವಿವಿಧ ಯುದ್ಧಗಳ ಸಂದರ್ಭದಲ್ಲಿ ಅಮೆರಿಕ ಯಾವ ದೇಶಗಳ ವಿರುದ್ಧ ಯಾವ ರೀತಿ ಸೋಲು ಕಂಡಿತ್ತು ಎನ್ನುವುದನ್ನು ಅಧ್ಯಯನ ಮಾಡಿ ಯುದ್ಧತಂತ್ರ ರೂಪಿಸಿರುವುದಾಗಿ ಇರಾನ್ ಹೇಳಿದೆ.

ಆಧಾರ: ರಾಯಿಟರ್ಸ್, ಎಪಿ, ಸಿಎನ್‌ಎನ್, ಗ್ಲೋಬಲ್ ಫೈರ್‌ಪವರ್.ಕಾಂ, ಸಿಎನ್‌ಬಿಸಿ.ಕಾಂ

## ಹೊರ್ಮುಜ್: ಸಂಚಾರಕ್ಕೆ ಅನುಮತಿ

ಯುದ್ಧ ಆರಂಭವಾದ ನಂತರ ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರಕ್ಕೆ ಇರಾನ್ ಅವಕಾಶ ನೀಡುತ್ತಿರಲಿಲ್ಲ. ಜಗತ್ತಿನ ಶೇ 20ರಷ್ಟು ಇಂಧನವು ಇದೇ ಮಾರ್ಗದ ಮೂಲಕ ವಿವಿಧ ದೇಶಗಳನ್ನು ಮುಟ್ಟುತ್ತಿತ್ತು. ಹೀಗಾಗಿ ಹಲವು ದೇಶಗಳಲ್ಲಿ ಇಂಧನ ಕೊರತೆ ಉಂಟಾಗಬಹುದು ಎನ್ನುವ ಆತಂಕ ಮೂಡಿತ್ತು. ಬುಧವಾರ ಈ ಬಗ್ಗೆ ಇರಾನ್‌ನ ರೆವೆಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಹೇಳಿಕೆ ನೀಡಿದ್ದು, ಜಲಸಂಧಿಯು ತನ್ನ ನಿಯಂತ್ರಣದಲ್ಲಿದೆ ಎಂದಿದೆ. ಅಮೆರಿಕ, ಇಸ್ರೇಲ್ ಮತ್ತು ಯುರೋಪ್ ಅನ್ನು ಹೊರತುಪಡಿಸಿ ಉಳಿದ ದೇಶಗಳ ಹಡುಗಗಳು ಹೊರ್ಮುಜ್ ಮೂಲಕ ಸಾಗಬಹುದು ಎಂದು ಐಆರ್‌ಜಿಸಿ ಹೇಳಿದೆ.



## ಕದನ ವಿರಾಮಕ್ಕಾಗಿ ತಂತ್ರ?

ತನ್ನ ಅಸ್ತಿತ್ವಕ್ಕೆ ಧಕ್ಕೆ ಬರುವ ಪರಿಸ್ಥಿತಿ ಉಂಟಾದರೆ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪ್ರಯೋಗಿಸಿ ಪಶ್ಚಿಮ ಏಷ್ಯಾದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡುವುದು ಇರಾನ್‌ನ ಒಂದು ತಂತ್ರ ಎಂದೂ ಕೆಲವರು ವಿಶ್ಲೇಷಿಸುತ್ತಿದ್ದಾರೆ. ಈ ಮೂಲಕ ನೆರೆಯ ರಾಷ್ಟ್ರಗಳಲ್ಲಿ ಭಯ ಉಂಟುಮಾಡಿ, ಅವು ಅಮೆರಿಕದ ಮೇಲೆ ಕದನ ವಿರಾಮಕ್ಕೆ ಮುಂದಾಗುವಂತೆ ಒತ್ತಡ ಹೇರಲಿ ಎನ್ನುವುದು ಅದರ ಉದ್ದೇಶ. ಆದರೆ, ಇರಾನ್‌ನ ತಂತ್ರವು ಅದಕ್ಕೇ ಮುಳುವಾಗುವ ಸಾಧ್ಯತೆಗಳೂ ಇವೆ ಎನ್ನಲಾಗುತ್ತಿದೆ. ಇರಾನ್ ಮತ್ತು ಅಮೆರಿಕದಲ್ಲಿ ಸಾಕಷ್ಟು ಸಾವು–ನೋವು ವರದಿಯಾಗುತ್ತಿದ್ದು, ಅದೂ ಕದನ ವಿರಾಮದ ಒತ್ತಡ ಉಂಟಾಗಲು ಕಾರಣವಾಗಬಹುದು ಎನ್ನಲಾಗುತ್ತಿದೆ.

## ಅಗ್ಗದ ಡ್ರೋನ್‌ನಿಂದ ಇರಾನ್ ದಾಳಿ

ಇರಾನ್ ಸೇನೆಯು ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಪ್ರಬಲ ಕ್ಷಿಪಣಿಗಳಲ್ಲದೆ, ಡ್ರೋನ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಬಳಸುತ್ತಿದೆ. ಅಂದಾಜಿನ ಪ್ರಕಾರ ಇರಾನ್ ಬಳಿ 80 ಸಾವಿರ ಡ್ರೋನ್‌ಗಳಿವೆ. ಅದರಲ್ಲಿ ಇಲ್ಲಿಯವರೆಗೆ 1,300 ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಿದೆ ಎಂದು ಹೇಳಲಾಗುತ್ತಿದೆ.

ಶಾಹೇದ್ -136 ಹೆಸರಿನ ಈ ಡ್ರೋನ್‌ಗಳು ಕಡಿಮೆ ವೆಚ್ಚದಲ್ಲಿ ತಯಾರಿಸುವಂತಹವು. 20 ಸಾವಿರ ಡಾಲರ್‌ನಿಂದ 50 ಸಾವಿರ ಡಾಲರ್ ವೆಚ್ಚದಲ್ಲಿ ಇದನ್ನು ತಯಾರಿಸಬಹುದು ಎಂದು ಅಂದಾಜಿಸಲಾಗಿದೆ. ಇತ್ತೀಚೆಗೆ ಇರಾನ್ ಭೂಗತ ಸ್ಥಳದಲ್ಲಿ ಇರಿಸಲಾಗಿದ್ದ ಡ್ರೋನ್‌ಗಳ ವಿಡಿಯೊವನ್ನು ಹಂಚಿಕೊಂಡಿತ್ತು. ವೈರಿ ರಾಷ್ಟ್ರದ ವಾಯು ರಕ್ಷಣಾ ವ್ಯವಸ್ಥೆಯು ತಡೆಯದೇ ಇದ್ದರೆ ಈ ಡ್ರೋನ್‌ಗಳು ದೊಡ್ಡ ಪ್ರಮಾಣದ ಹಾನಿ ಮಾಡಬಲ್ಲವು.

ಅಮೆರಿಕ ಮತ್ತು ಇಸ್ರೇಲ್‌ನ ವಾಯು ರಕ್ಷಣಾ ವ್ಯವಸ್ಥೆಯು ದುಬಾರಿಯಾಗಿದ್ದು, ಈ ಅಗ್ಗದ ಡ್ರೋನ್‌ಗಳನ್ನು ಆಗಸದಲ್ಲೇ ತಡೆದು ಧ್ವಂಸ ಮಾಡಲು ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಇಸ್ರೇಲ್ ಐರನ್ ಡೋಮ್ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸುತ್ತಿದ್ದು, ಅಮೆರಿಕ ಪ್ಯಾಟ್ರಿಯಟ್ ಕ್ಷಿಪಣಿ ವ್ಯವಸ್ಥೆಯನ್ನು ನಿಯೋಜಿಸಿದೆ.

Publication Date
06/03/2026

Presented by ಪ್ರಜಾವಾಣಿ

# ಕಚ್ಚಾ ತೈಲಕ್ಕೆ ಅಮೆರಿಕದ ವಿಮೆ?

## ಹಡಗುಗಳಿಗೆ ವಿಮೆ ವಿಚಾರ • ಅಮೆರಿಕದ ಜೊತೆ ಮಾತುಕತೆ ನಡೆಸಿದ ಕೇಂದ್ರ ಸರ್ಕಾರ

**ನವದೆಹಲಿ (ಪಿಟಿಐ):** ಪಶ್ಚಿಮ ಏಷ್ಯಾದಿಂದ ಕಚ್ಚಾ ತೈಲವನ್ನು ಸುರಕ್ಷಿತವಾಗಿ ತರಿಸಿಕೊಳ್ಳುವ ಉದ್ದೇಶದಿಂದ ಹಡಗುಗಳಿಗೆ ವಿಮಾ ರಕ್ಷೆ ಒದಗಿಸುವಂತೆ ಅಮೆರಿಕದ ಜೊತೆ ಭಾರತ ಮಾತುಕತೆ ನಡೆಸಿದೆ.



ಭಾರತದ ಬಳಿ 25 ದಿನಗಳಿಗೆ ಆಗುವಷ್ಟು ಕಚ್ಚಾ ತೈಲದ ಸಂಗ್ರಹ ಇದೆ. ಅಷ್ಟೇ ದಿನಗಳಿಗೆ ಆಗುವಷ್ಟು ಸಂಸ್ಕರಿತ ತೈಲದ ಸಂಗ್ರಹ ಕೂಡ ಇದೆ. ಆದರೆ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರಕ್ಕೆ ಅಡ್ಡಿ ಸೃಷ್ಟಿಸಿದೆ. ಜಲಸಂಧಿಯ ಮೂಲಕ ಸಂಚರಿಸಲು ಹಡಗುಗಳಿಗೆ ಅವಕಾಶ ಕೊಡುವುದಿಲ್ಲ ಎಂದು ಇರಾನ್ ಎಚ್ಚರಿಸಿದೆ.

ತನಗೆ ಬೇಕಿರುವ ಕಚ್ಚಾ ತೈಲದಲ್ಲಿ ಶೇ 88ರಷ್ಟನ್ನು ಭಾರತವು ಆಮದು ಮಾಡಿಕೊಳ್ಳುತ್ತದೆ. ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಅಗತ್ಯದ ಶೇ 50ರಷ್ಟು ಕೂಡ ಆಮದಾಗುತ್ತದೆ. ಹೆಚ್ಚಿನ ಪಾಲು ಕಚ್ಚಾ ತೈಲ ಹಾಗೂ ಎಲ್‌ಎನ್‌ಜಿ ಹೊರ್ಮುಜ್ ಜಲಸಂಧಿಯ ಮೂಲಕ ಭಾರತಕ್ಕೆ ಬರುತ್ತದೆ.

'ಈಗ ನಮ್ಮಲ್ಲಿನ ಸಂಗ್ರಹವು ಉತ್ತಮ ಮಟ್ಟದಲ್ಲಿ ಇದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಲ್ಲದೆ, ಹೊರ್ಮುಜ್ ಜಲಸಂಧಿಯನ್ನು ಬಳಸುವ ಅಗತ್ಯ ಇಲ್ಲದ ದೇಶಗಳಿಂದಲೂ ಭಾರತಕ್ಕೆ ಕಚ್ಚಾ ತೈಲ ಬರುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವಾಲಯವು ಕಚ್ಚಾ ತೈಲ, ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ತರಿಸಿಕೊಳ್ಳಲು ಪ್ರಮುಖ ಉತ್ಪಾದಕರು ಹಾಗೂ ವರ್ತಕರ ಜೊತೆ ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

'ಹೊರ್ಮುಜ್ ಜಲಸಂಧಿಯನ್ನು ದಾಟುವ ಹಡಗುಗಳಿಗೆ ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ನಿಗಮದಿಂದ (ಐಡಿಎಫ್‌ಸಿ) ವಿಮಾ ರಕ್ಷೆ ಕೊಡಿಸಲು ನಾವು ಅಮೆರಿಕದ ಅಧಿಕಾರಿಗಳ ಜೊತೆ ಮಾತುಕತೆ ನಡೆಸುತ್ತಿದ್ದೇವೆ' ಎಂದು ಕೇಂದ್ರದ ಮೂಲಗಳು ಹೇಳಿವೆ.

ಈ ಪ್ರದೇಶದ ಮೂಲಕ ಸಾಗುವ ಹಡಗುಗಳಿಗೆ ಹಣಕಾಸಿನ ರಕ್ಷೆ ಒದಗಿಸುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಐಡಿಎಫ್‌ಸಿಗೆ ಆದೇಶಿಸಿದ್ದಾರೆ.

ಆದರೆ ಐಡಿಎಫ್‌ಸಿ ಆ ಕೆಲಸ ಮಾಡುವುದಕ್ಕೂ ಮೊದಲು ಲಕ್ಷಾಂತರ ಕೋಟಿ ಡಾಲರ್ ಮೌಲ್ಯದ ನಿಧಿಯೊಂದನ್ನು ರೂಪಿಸಬೇಕಾಗುತ್ತದೆ. ಹಡಗುಗಳ ಮೂಲಕ ಸರಕು ತರಿಸಿಕೊಳ್ಳುವ ಒಪ್ಪಂದ ಮಾಡಿಕೊಳ್ಳುವವರೇ ವಿಮಾ ಪ್ರೀಮಿಯಂ ಮೊತ್ತ ಭರಿಸಬೇಕಾಗುತ್ತದೆ ಎಂದು ಕೇಂದ್ರದ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ರಷ್ಯಾ ಸೇರಿದಂತೆ ಲಭ್ಯವಿರುವ ಎಲ್ಲ ಮೂಲಗಳಿಂದ ಕಚ್ಚಾ ತೈಲವನ್ನು ಖರೀದಿಸಲು ಭಾರತ ಮುಂದಾಗಿದೆ ಎಂದು ಗೊತ್ತಾಗಿದೆ. ಅಲ್ಲದೆ, ಅಮೆರಿಕದಿಂದ ಎಲ್‌ಪಿಜಿ ಆಮದು ಕೂಡ ಜಾಸ್ತಿ ಆಗಿದೆ.

## ಸಮರದಿಂದಾಗಿ ಕಂಪನಿಗಳ ಲಾಭದ ಮೇಲೆ ಪರಿಣಾಮ: ಕೋಟಕ್ ವರದಿ

**ಮುಂಬೈ (ಪಿಟಿಐ):** ಪಶ್ಚಿಮ ಏಷ್ಯಾದಲ್ಲಿ ಶುರುವಾಗಿರುವ ಸಂಘರ್ಷವು ಕೆಲವು ವಾರಗಳಿಗಿಂತ ಹೆಚ್ಚು ಅವಧಿಗೆ ಮುಂದುವರಿದರೆ ದೇಶದ ಕಂಪನಿಗಳ ಲಾಭವು ತಗ್ಗುವ ಅಪಾಯ ಇದೆ ಎಂದು ಕೋಟಕ್ ಇನ್‌ಸ್ಟಿಟ್ಯೂಷನಲ್ ಈಕ್ವಿಟಿಸ್ ವರದಿ ತಿಳಿಸಿದೆ.

ಸಂಘರ್ಷದ ಪರಿಣಾಮವಾಗಿ ತೈಲ ಮತ್ತು ಅನಿಲ ಬೆಲೆ ಹೆಚ್ಚಳವಾಗಿ, ದೇಶದ ಆರ್ಥಿಕತೆ ಮತ್ತು ಮಾರುಕಟ್ಟೆಯ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿನ ಸಮರವು ಹೂಡಿಕೆದಾರರ ಮೇಲೆ ಈಗಾಗಲೇ ಪರಿಣಾಮ ಬೀರಲು ಆರಂಭಿಸಿದೆ. ಅದರಲ್ಲೂ ಮುಖ್ಯವಾಗಿ ವಿದೇಶಿ ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಅವರು ಇಂಧನ ಪೂರೈಕೆಯಲ್ಲಿನ ಸಮಸ್ಯೆ ಹಾಗೂ ಅರ್ಥವ್ಯವಸ್ಥೆಯ ಸ್ಥಿರತೆಯ ವಿಚಾರವಾಗಿ ಹೆಚ್ಚು ಸೂಕ್ಷ್ಮವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ಎಂದು ವರದಿ ಹೇಳಿದೆ.

ಭಾರತವು ತನಗೆ ಬೇಕಿರುವ ಕಚ್ಚಾ ತೈಲದ ಬಹುಪಾಲನ್ನು ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ತೈಲದ ಬೆಲೆಯಲ್ಲಿನ ಏರಿಕೆಯು ದೇಶದ ಅರ್ಥವ್ಯವಸ್ಥೆಯ ಮೇಲೆ ಭಾರಿ ಪರಿಣಾಮ ಬೀರುತ್ತದೆ.


ಕಚ್ಚಾ ತೈಲದ ಬೆಲೆ ಹೆಚ್ಚಳವಾದಲ್ಲಿ ವಿವಿಧ ವಲಯಗಳಲ್ಲಿ ತಯಾರಿಕಾ ವೆಚ್ಚ ಜಾಸ್ತಿ ಆಗುತ್ತದೆ, ಹಣದುಬ್ಬರ ಪ್ರಮಾಣ ಹೆಚ್ಚುತ್ತದೆ. ಅಲ್ಲದೆ, ಆಮದು ವೆಚ್ಚ ಕೂಡ ಜಾಸ್ತಿ ಆಗಿ ದೇಶದ ಕಂಪನಿಗಳ ಲಾಭದ ಪ್ರಮಾಣದ ಮೇಲೆ ಪರಿಣಾಮ ಆಗುತ್ತದೆ ಎಂದು ವರದಿ ಹೇಳಿದೆ.

ದೇಶದ ಹೂಡಿಕೆದಾರರು ಷೇರುಪೇಟೆಯಲ್ಲಿ ಸ್ಥಿರವಾಗಿ ಹೂಡಿಕೆ ಮಾಡುತ್ತಿರುವುದು ಹಾಗೂ ಭಾರತದ ಮಧ್ಯಮ ಅವಧಿಯ ಬೆಳವಣಿಗೆಯ ಸಾಧ್ಯತೆಯು ಮಾರುಕಟ್ಟೆಗೆ ಪೂರಕವಾಗಿ ಇವೆ. ಆದರೆ ಜಾಗತಿಕ ಮಟ್ಟದಲ್ಲಿನ ಬೆಳವಣಿಗೆಗಳ ಮೇಲೆ ಅಲ್ಪಾವಧಿಯಲ್ಲಿ ಗಮನ ಇರಿಸಬೇಕಾಗಿದೆ ಎಂದು ಅದು ಹೇಳಿದೆ.

Publication Date
06/03/2026

Presented by

- **ಎಲ್‌ಎನ್‌ಜಿ ಮೇಲಿನ ಸೆಸ್ ಅನ್ನು ಶೇ 14.34ನಿಂದ ಶೇ 5ಕ್ಕೆ ಇಳಿಸಲಾಗಿದೆ.**
- **₹7.64 ಲಕ್ಷ ಕೋಟಿ 2026ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಸಾಲ**
- **₹8.24 ಲಕ್ಷ ಕೋಟಿ 2027ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಸಾಲ**



ಬಜೆಟ್ ಗಾತ್ರ

₹4.48 ಲಕ್ಷ ಕೋಟಿ 2026–27ನೇ ಸಾಲಿನ ಬಜೆಟ್ ಗಾತ್ರ | ₹4.09 ಲಕ್ಷ ಕೋಟಿ 2025–26ನೇ ಸಾಲಿನ ಬಜೆಟ್ ಗಾತ್ರ | ₹74,682 ಕೋಟಿ 2026–27ನೇ ಸಾಲಿನಲ್ಲಿ ಬಂಡವಾಳ ವೆಚ್ಚ | ₹71,336 ಕೋಟಿ 2025–26ನೇ ಸಾಲಿನಲ್ಲಿ ಬಂಡವಾಳ ವೆಚ್ಚ | ₹3.38 ಲಕ್ಷ ಕೋಟಿ 2026–27ನೇ ಸಾಲಿನಲ್ಲಿ ರಾಜಸ್ವ ವೆಚ್ಚ | ₹3.11 ಲಕ್ಷ ಕೋಟಿ 2025–26ನೇ ಸಾಲಿನಲ್ಲಿ ರಾಜಸ್ವ ವೆಚ್ಚ

# ಗ್ಯಾರಂಟಿ ನಿರಾತಂಕ: ಅಭಿವೃದ್ಧಿಗೂ ಅಂಕ

₹4,291 ಕೋಟಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ

₹100 ಕೋಟಿ ಜೈನ ಸಿಖ್ ಬೌದ್ಧರ ಅಭಿವೃದ್ಧಿಗೆ



ಕಲೆ: ಸಂತೋಷ್ ಸಸಿಹಿತ್ಲು

## 32 ಸಾವಿರ ಹುದ್ದೆಗೆ ನೇಮಕ

ವಿವಿಧ ಇಲಾಖೆಗಳ ಗುರಿಗಳನ್ನು ಬಜೆಟ್‌ನಲ್ಲಿ ನಿಗದಿಪಡಿಸುವಾಗ 32 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಾಗಿ ಪ್ರಸ್ತಾಪಿಸಲಾಗಿದೆ. ರಾಜ್ಯದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳ ಪೈಕಿ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ 30 ದಿನದೊಳಗೆ ಚಾಲನೆ ನೀಡಲು ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈಗ ಪ್ರಸ್ತಾಪಿಸಿರುವ ನೇಮಕಾತಿಗೆ ಕಾಲಮಿತಿ ನಿಗದಿಪಡಿಸಿಲ್ಲ.

## ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ

16 ವರ್ಷದೊಳಗಿನ ಮಕ್ಕಳಿಗೆ ಜಾಲತಾಣದ ಬಳಕೆಯನ್ನು ನಿಷೇಧಿಸಲಾಗುವುದು ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗುವುದು ಎಂದೂ ಉಲ್ಲೇಖಿಸಲಾಗಿದೆ.

₹5,500 ಕೋಟಿ ಇತರೆ

₹1.25 ಲಕ್ಷ ಕೋಟಿ ವಾಣಿಜ್ಯ ತೆರಿಗೆ

₹15,500 ಕೋಟಿ ಮೋಟಾರು ವಾಹನ ತೆರಿಗೆ

₹29,000 ಕೋಟಿ ನೋಂದಣಿ ಮತ್ತು ಮುದ್ರಾಂಕ

₹45,000 ಕೋಟಿ ರಾಜ್ಯ ಅಬಕಾರಿ

₹2.20 ಲಕ್ಷ ಕೋಟಿ ರಾಜ್ಯದ ಸ್ವಂತ ತೆರಿಗೆ ಸಂಗ್ರಹ ಗುರಿ

## 11ಜಿ ಆರ್ಥಿಕತೆ' ಎಂದರೆ

1. ಗ್ಯಾರಂಟಿ ಎಕಾನಮಿ: ಕಲ್ಯಾಣ – ಸಮಾನತೆ
2. ಗುಡ್ ಗವರ್ನೆನ್ಸ್: ಜನಸ್ನೇಹಿ ಆಡಳಿತ
3. ಗುಡ್ ಪಬ್ಲಿಕ್ ಎಜುಕೇಷನ್: ಸರ್ವರಿಗೂ ಶಿಕ್ಷಣ
4. ಗುಡ್ ಹೆಲ್ತ್ ಟು ಆಲ್: ಸಮಗ್ರ ಆರೋಗ್ಯ
5. ಗ್ರಾಸ್‌ರೂಟ್ ಎಕಾನಮಿ: ಕೃಷಿ, ಗ್ರಾಮೀಣಾಭಿವೃದ್ಧಿ
6. ಗಿಗ್ ಎಕಾನಮಿ: ಕಾರ್ಮಿಕ ಕಲ್ಯಾಣ
7. ಜಿಯೊಗ್ರಾಫಿಕಲ್ ಈಕ್ವಾಲಿಟಿ: ಪ್ರಾದೇಶಿಕ ಅಸಮಾನತೆಯ ನಿವಾರಣೆ
8. ಗ್ಲೋಬಲ್ ಟ್ರೇಡ್ ಎಕಾನಮಿ: ವ್ಯಾಪಾರ ಮತ್ತು ಕೈಗಾರಿಕಾಭಿವೃದ್ಧಿ
9. ಗ್ಲೋಬ್ ಟ್ರೋಟಿಂಗ್ ಎಕಾನಮಿ: ಪ್ರವಾಸೋದ್ಯಮ ಆರ್ಥಿಕತೆ
10. ಗ್ರೀನ್ ಎಕಾನಮಿ: ಪರಿಸರ ಪೂರಕ ಆರ್ಥಿಕ ಚಟುವಟಿಕೆ
11. ಗ್ರೋವಿಂಗ್ ಅರ್ಬನ್ ಎಕಾನಮಿ: ನಗರ ಕೇಂದ್ರಿತ ಸುಸ್ಥಿರ ಆರ್ಥಿಕತೆ

## ಗಣಿಗಾರಿಕೆ: ₹16,000 ಕೋಟಿ ಸಂಗ್ರಹ ಗುರಿ

- ₹2,000 ಕೋಟಿ, ಕ್ವಾರಿ ಹೊಂದ ಮತ್ತು ಅಕ್ರಮ ಗಣಿಗಳಿಂದ ದಂಡ ಸಂಗ್ರಹ ಗುರಿ
- ₹3,000 ಕೋಟಿ, ಗಣಿಗಾರಿಕೆ ತೆರಿಗೆ ಸಂಗ್ರಹ ಗುರಿ
- ₹11,000 ಕೋಟಿ, ಗಣಿಗಾರಿಕೆ ಸ್ವಾಮ್ಯ ಶುಲ್ಕದಿಂದ ಸಂಗ್ರಹ ಗುರಿ

ಆದಾಯದ ಕೊರತೆ, ಹೆಚ್ಚುತ್ತಿರುವ ಸಾಲ, ತಾಳಮೇಳವಿಲ್ಲದ ಅನುದಾನ ಹಂಚಿಕೆ... ಸಿದ್ದರಾಮಯ್ಯ ಅವರ ಲೆಕ್ಕಾಚಾರ ಹಳಿತಪ್ಪಿದೆ ಎಂಬುದಕ್ಕೆ ಬಜೆಟ್ ಪುಸ್ತಕವೇ ಸಾಕ್ಷಿ. ನಿರೀಕ್ಷೆಗಳನ್ನು ಸೃಷ್ಟಿಸಿ, ಅತೀವ ನಿರಾಸೆ ಉಂಟುಮಾಡಿದ್ದಾರೆ. ಈ ಬಜೆಟ್ ಕರ್ಣಕಠೋರ ಮತ್ತು ರಾಜ್ಯಕ್ಕೆ ಭಾರ. ಮುಖ್ಯಮಂತ್ರಿ ಅವರು ಕೇಂದ್ರದ ನಿಂದನೆಯನ್ನು ಈಗಲೂ ಮುಂದುವರಿಸಿದ್ದಾರೆ
**ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನರ ಮೇಲೆ ಸಾಲದ ಹೊರೆ ಹೇರಿದ್ದಾರೆ. ಈ ಸರ್ಕಾರವು ಒಟ್ಟು ₹4.39 ಲಕ್ಷ ಕೋಟಿ ಸಾಲ ಮಾಡಿದೆ. ಈ ಹಣಕ್ಕೆ ಬಡ್ಡಿ ಪಾವತಿಸಲೂ ಆಗದ ಪರಿಸ್ಥಿತಿ ಇದೆ. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಕೊಡುತ್ತೇವೆ ಎಂದು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯನವರ ಸರ್ಕಾರವು ಈಗ, 'ಸರ್ವರಿಗೂ ತೆರಿಗೆ, ಸರ್ವರಿಗೂ ಸಾಲ' ಎನ್ನುತ್ತಿದೆ. ಯಾವ ಯೋಜನೆಯೂ ಇಲ್ಲದ ಖಾಲಿ ಚೊಂಬಿನ ಬಜೆಟ್ ಇದು
**ಆರ್. ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

• ವೈ.ಗ. ಜಗದೀಶ್

ಗ್ಯಾರಂಟಿಗಳ ಭಾರವಿದ್ದರೂ ಅದರ ಹಂಗು ತೊರೆಯದೇ, ಯಾವುದೇ ಜನಪ್ರಿಯ ಘೋಷಣೆಗಳ ಮೊರೆ ಹೋಗದೇ ಕರ್ನಾಟಕವನ್ನು ಮಾದರಿ ರಾಜ್ಯವಾಗಿಸುವ ಪ್ರಮೇಯಗಳನ್ನು ಬಜೆಟ್‌ನಲ್ಲಿ ಮುಂದಿಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಡನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಿರುದಾರಿಗಳ ಹುಡುಕಿ, ಅದಕ್ಕೆ ಬೇಕಾದ ಕುಸುರಿ ಕೆಲಸವನ್ನು ಬಜೆಟ್ ಪುಸ್ತಕದ ಪ್ರತಿ ಪುಟದಲ್ಲಿ ನೇಯುವ ಯತ್ನ ಮಾಡಿದ್ದಾರೆ.

ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ ತಮ್ಮದೇ ದಾಖಲೆಯ 17ನೇ ಬಜೆಟ್ ಅನ್ನು ಶುಕ್ರವಾರ ವಿಧಾನಸಭೆಯಲ್ಲಿ ಮಂಡಿಸಿದರು. ವಿಧಾನಸಭೆ ಚುನಾವಣೆಗೆ ಮುನ್ನ ಘೋಷಿಸಿದ್ದ 'ಗ್ಯಾರಂಟಿ'ಗಳ ಅನುಷ್ಠಾನಕ್ಕೆ ಹಿಂದಿನ ಮೂರು ಬಜೆಟ್‌ನಲ್ಲಿ ಅವರು ಕಸರತ್ತು ಮಾಡಿದ್ದರು. ಈ ಬಾರಿ, ಅದಕ್ಕಿಂತ ಭಿನ್ನದಾರಿಯಲ್ಲಿ ಸಾಗಿರುವ ಮುಖ್ಯಮಂತ್ರಿ, ಅಭಿವೃದ್ಧಿಯ ಗುಂಗಿಗೆ ಆಡಳಿತಾಂಗದ ಬಲವನ್ನು ಒಳಗು ಮಾಡುವ ಮೂಲಕ ತಮ್ಮ ಮೊದಲ ಅವಧಿಯಲ್ಲಿನ ಹಳಿಗೆ ಮರಳಿದ್ದಾರೆ.

ಜಿಎಸ್‌ಟಿ ಸ್ಲ್ಯಾಬ್ ಪರಿಷ್ಕರಣೆಯಿಂದ ಸಂಪನ್ಮೂಲ ಕೊರತೆ, ಕೇಂದ್ರದ ಪಾಲಿನಲ್ಲಿ ಕಡಿತ, ಕೇಂದ್ರ ಪುರಸ್ಕೃತ ಯೋಜನೆ ಹಾಗೂ ಸಹಾಯಾನುದಾನದಲ್ಲಿ ಇಳಿಕೆಯ ಮಧ್ಯೆಯೇ ಬಜೆಟ್ ಗಾತ್ರ ಹಿಂದಿನ ಸಾಲಿಗಿಂತ ಕಡಿಮೆಯಾಗಬಹುದು ಎಂಬ ಲೆಕ್ಕಾಚಾರಗಳಿದ್ದವು. ಕರ್ನಾಟಕದ ಬಜೆಟ್ ಗಾತ್ರವನ್ನು ಹಿಂದಿನ ವರ್ಷ ₹4.09 ಲಕ್ಷ ಕೋಟಿಗೆ ಮುಟ್ಟಿಸಿದ್ದ ಸಿದ್ದರಾಮಯ್ಯ, ಈ ಸಾಲಿನಲ್ಲಿ ₹4.48 ಲಕ್ಷ ಕೋಟಿಗೆ ಹೆಚ್ಚಿಸಿದ್ದಾರೆ. ಸಾಲದ ಪ್ರಮಾಣ ನಿರೀಕ್ಷೆಯಂತೆ ಹೆಚ್ಚಾಗಿದ್ದರೂ ಆರ್ಥಿಕ ಶಿಸ್ತಿನ ಮಿತಿಯನ್ನು ಮೀರದಿರುವ 'ಜಾಣತನ'ವನ್ನು ತೋರಿದ್ದಾರೆ.

'ಪ್ರಗತಿಶೀಲ ರಾಜ್ಯದ ಜನರ ತೆರಿಗೆ ಹಣಕ್ಕೆ ಪ್ರಮುಖ ಟ್ರಸ್ಟಿಯಾದ ನಾನು ಸರ್ವರ ಏಳಿಗೆಯನ್ನು ಬಯಸಿ ಆಯವ್ಯಯವನ್ನು ಮಂಡಿಸುತ್ತಿದ್ದೇನೆ' ಎಂದು ತಮ್ಮ ಬಜೆಟ್ ಭಾಷಣ ಆರಂಭಿಸಿದ ಅವರು, ಏಳು ಕೋಟಿ ಕನ್ನಡಿಗರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ. ಜನಕೇಂದ್ರಿತ ಆರ್ಥಿಕ ತತ್ವಗಳ ಮೂಲಬಿಂದು ಇದೇ ಆಗಿದೆ' ಎಂದು ಪ್ರತಿಪಾದಿಸಿದರು. ಅದಕ್ಕಾಗಿಯೇ ಈ ಸರ್ತಿ 11 ಜಿ ಎಂಬ ಪರಿಕಲ್ಪನೆಯನ್ನು ಪ್ರಸ್ತಾಪಿಸಲಾಗಿದ್ದು, ಅದೇ ಬಜೆಟ್‌ನ ಹೂರಣವಾಗಿದೆ. ▶11

## ಮದ್ಯ ದುಬಾರಿ..?

ಮದ್ಯದ ದರ ಏರಿಕೆಯಾಗುವ ಎಲ್ಲ ಸೂಚನೆಗಳೂ ಬಜೆಟ್ ವಿವರಗಳಲ್ಲಿ ಇವೆ. ಈಗ ಬಿಯರ್, ವೈನ್, ವಿಸ್ಕಿ... ಹೀಗೆ ಮದ್ಯದ ಸ್ವರೂಪ ಆಧರಿಸಿ ಭಿನ್ನ ದರದ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಮುಂದೆ ಪ್ರತಿ ಸ್ವರೂಪದ ಮದ್ಯದಲ್ಲಿರುವ ಆಲ್ಕೊಹಾಲ್ ಪ್ರಮಾಣ ಆಧರಿಸಿ ಅಬಕಾರಿ ಸುಂಕ ವಿಧಿಸಲಾಗುತ್ತದೆ. 2026-27ನೇ ಸಾಲಿನಲ್ಲಿ ಅಬಕಾರಿ ಸುಂಕ ಮೂಲದ ₹45,000 ಕೋಟಿ ಆದಾಯ ಗುರಿ ಹಾಕಿಕೊಳ್ಳಲಾಗಿದೆ. ಮದ್ಯದ ಬೆಲೆ ಏರಿಕೆಯಾಗಲಿದೆ ಎಂಬುದನ್ನೇ ಇದೂ ಸೂಚಿಸುತ್ತದೆ.

ವಿಶೇಷ ಪುಟಗಳು 11, 14, 15 16, 17 | ಸಂಪಾದಕೀಯ 10

Publication Date 07/03/2026

## ❖ ರಷ್ಯಾ ತೈಲ ಖರೀದಿಗೆ ಒಪ್ಪಿಗೆ

**ಸಂದರ್ಭ: ರಷ್ಯಾದಿಂದ ತೈಲ ಖರೀದಿಸಲು ಅಮೆರಿಕವು ಭಾರತದ ಮೇಲೆ ಹೇರಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದು, ಖರೀದಿಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡಿದೆ.**

- 'ಪಶ್ಚಿಮ ಏಷ್ಯಾ ಯುದ್ಧ ಮುಂದು ವರಿದಿರುವುದರಿಂದ ಮಾರುಕಟ್ಟೆ-ಯಲ್ಲಿ ತೈಲದ ಕೊರತೆ ಉಂಟಾಗದಂತೆ ನೋಡಿಕೊಳ್ಳಲು ಈ ಕ್ರಮ ವಹಿಸಲಾಗಿದೆ. ಭಾರತದ ತೈಲ ಸಂಸ್ಕರಣ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನ ಗಳನ್ನು ಮಾ.5ರಿಂದ ಅನ್ವಯ ವಾಗುವಂತೆ ಮುಂದಿನ ಒಂದು ತಿಂಗಳು ಖರೀದಿಸಬಹುದು' ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.


- 'ಈ ವಿನಾಯಿತಿಯು 'ಉದ್ದೇಶ ಪೂರ್ವಕ ಅಲ್ಪಾವಧಿ ಕ್ರಮ' ಮಾತ್ರ. ಇದರಿಂದ ರಷ್ಯಾ ಸರ್ಕಾರಕ್ಕೆ ಹೆಚ್ಚಿನ ಹಣಕಾಸಿನ ಪ್ರಯೋಜನ ಆಗದು. ಯುದ್ಧದಿಂದಾಗಿ ಸಮುದ್ರದಲ್ಲಿ ಸಿಲುಕಿಕೊಂಡಿರುವ ತೈಲ ನೌಕೆಗಳ ಸಾಗಾಟವನ್ನು ಇದು ಸುಗಮಗೊಳಿಸುತ್ತದೆ. ಮಾರುಕಟ್ಟೆಯಲ್ಲಿ ತೈಲದ ಲಭ್ಯತೆ ಹೆಚ್ಚುತ್ತದೆ' ಎಂದು ಅವರು ಹೇಳಿದ್ದಾರೆ.

## ದಂಡನಾತ್ಮಕ ಸುಂಕ ರದ್ದುಗೊಳಿಸಿದ್ದ ಟ್ರಂಪ್

ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ಒತ್ತಡ ಹೇರಿ ಅಮೆರಿಕವು ಭಾರತದ ಮೇಲೆ ಶೇ 25ರಷ್ಟು ದಂಡನಾತ್ಮಕ ಸುಂಕ ವಿಧಿಸಿತ್ತು. ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಭಾರತ ತೈಲ ಖರೀದಿಸಿ, ಹಣಕಾಸಿನ ನೆರವು ಒದಗಿಸುತ್ತಿದೆ ಎಂದು ಆರೋಪಿಸಿತ್ತು.

ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಶೇ 25ರಷ್ಟು ದಂಡನಾತ್ಮಕ ಸುಂಕವನ್ನು ಟ್ರಂಪ್ ರದ್ದುಗೊಳಿಸಿದ್ದರು. ಇದರ ಬೆನ್ನಲ್ಲೇ, ರಷ್ಯಾದಿಂದ ಇಂಧನ ಆಮದು ನಿಲ್ಲಿಸುವಂತೆ ಹಾಗೂ ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುವಂತೆ ಒತ್ತಡ ಹೇರಿದ್ದರು.

- ಯುದ್ಧದ ಕಾರಣದಿಂದ, ಕಚ್ಚಾತೈಲ ಪೂರೈಕೆಯಲ್ಲಿ ವ್ಯತ್ಯಯ ಆಗಿದ್ದು, ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಮತ್ತು ಅನಿಲದ ಬೆಲೆಯಲ್ಲಿ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿತ್ತು. ತೈಲ ಕೊರತೆ ಮತ್ತು ಬೆಲೆ ಏರಿಕೆ ವಿರುದ್ಧ ಜಗತ್ತಿನ ಹಲವು ದೇಶಗಳು ಅಮೆರಿಕ ವಿರುದ್ಧಧ್ವನಿ ಎತ್ತಿದ್ದವು.
- 'ಭಾರತವು ಅಮೆರಿಕಕ್ಕೆ ಮಹತ್ವದ ಪಾಲುದಾರ ದೇಶ. ಅಮೆರಿಕದಿಂದ ಖರೀದಿಸುವ ತೈಲದ ಪ್ರಮಾಣವನ್ನು ಭಾರತ ಹೆಚ್ಚಿಸುತ್ತದೆ ಎಂಬ ಸಂಪೂರ್ಣ ಭರವಸೆ ನಮಗಿದೆ. ಜಾಗತಿಕ ತೈಲ ಮಾರುಕಟ್ಟೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಇರಾನ್‌ನ ಒತ್ತಡವನ್ನು ಈ ತಾತ್ಕಾಲಿಕ ವಿನಾಯತಿಯು ತಗ್ಗಿಸುತ್ತದೆ' ಎಂದು ಬೆಸೆಂಟ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



## ಶರಾವತಿ ಯೋಜನೆ: ಅನುಮತಿ ಪ್ರಶ್ನಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ

# ಕೇಂದ್ರ, ರಾಜ್ಯ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ₹10 ಸಾವಿರ ಕೋಟಿ ವೆಚ್ಚದ, 'ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆ'ಗೆ, ರಾಜ್ಯ ವನ್ಯಜೀವಿ ಮಂಡಳಿ ನೀಡಿರುವ ಅನುಮೋದನೆ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನೀಡಿರುವ ತಾತ್ವಿಕ ಅನುಮೋದನೆಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.




ಈ ಸಂಬಂಧ ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರ ನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ.ಮನೋಹರ ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ' ವಕೀಲೆ ಬಿ.ವಿ.ವಿದ್ಯುಲ್ಲತಾ ಅವರ ವಾದ ಆಲಿಸಿದ ನ್ಯಾಯಪೀಠವು, ಪ್ರತಿವಾದಿಗಳಾದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

### ಅರ್ಜಿಯಲ್ಲಿ ಏನಿದೆ?

'ಉದ್ದೇಶಿತ ಯೋಜನೆಯು ವನ್ಯಜೀವಿಗಳಿಗೆ ಸಂಪೂರ್ಣ ಹಾನಿ ಉಂಟು ಮಾಡಲಿದೆ. ಈ ಯೋಜನೆಗೆ ಒಟ್ಟು 142.763 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಅದರಲ್ಲಿ 102 ಹೆಕ್ಟೇರ್ ಪ್ರದೇಶವು ಭೌಗೋಳಿಕವಾಗಿ ಅಭಯಾರಣ್ಯದೊಳಗೆ ಮತ್ತು 39.715 ಹೆಕ್ಟೇರ್ ಪರಿಸರ ಸೂಕ್ಷ್ಮ ವಲಯದಲ್ಲಿ ಇದೆ. ಇಂತಹ ಬೃಹತ್ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ವಲಯದೊಳಗೆ ಜಲವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮೋದನೆ ನೀಡುವುದರಿಂದ ಬೃಹತ್ ಕಂಬಗಳನ್ನು ನೆಡುವುದು, ಕಂಬಗಳ ನಡುವೆ ಹೆಚ್ಚಿನ ವೋಲ್ಟೇಜ್ ತಂತಿಗಳನ್ನು ಎಳೆಯುವುದೂ ಸೇರಿದಂತೆ ಉತ್ಪಾದಿಸುವ ಜಲವಿದ್ಯುತ್ ರವಾನಿಸಲು ಪ್ರಸರಣ ಮಾರ್ಗಗಳ ನಿರ್ಮಾಣದಿಂದ ಅಮೂಲ್ಯ ವೃಕ್ಷ ಸಂಪತ್ತು ನಾಶವಾಗಲಿದೆ. ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ. ಈ ನಿಟ್ಟಿನಲ್ಲಿ, ವನ್ಯಜೀವಿ ರಕ್ಷಣಾ ಕಾಯ್ದೆ–1972ರ ಕಲಂ 29ರ ಅಡಿಯಲ್ಲಿ ವಿಧಿಸಲಾದ ನಿರ್ಬಂಧವನ್ನು ಗಮನದಲ್ಲಿ ಇರಿಸಿಕೊಂಡು ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಅನುಮೋದನೆ ನೀಡಬಾರದು' ಎಂದು ಕೋರಲಾಗಿದೆ.



ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಗೂಗಲ್ ನಕ್ಷೆ

Publication Date
07/03/2026

Presented by ಪ್ರಜಾವಾಣಿ

Dr. Rajkumar

# ಯಾವ ಜಿಲ್ಲೆಗೆ ಏನು ಕೊಡುಗೆ?

**1. ಬೀದರ್**
- ಬಸವಕಲ್ಯಾಣದಲ್ಲಿ ವಚನ ವಿವಿ ಸ್ಥಾಪನೆಗೆ 25 ಎಕರೆ ಜಮೀನು
- ಬೀದರ್ ಮಹಾನಗರ ಪಾಲಿಕೆಗೆ ₹200 ಕೋಟಿ
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ಸ್ಥಾಪನೆ
- ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ್ ಕೆರೆ ಅಭಿವೃದ್ಧಿ

**2. ಕಲಬುರಗಿ**
- 135 ಕಿ.ಮೀ. ಉದ್ದದ ವಾಗ್ದರಿ-ರಿಬ್ಬನ್‌ಪಲ್ಲಿ ರಸ್ತೆ ವಿಸ್ತರಣೆ
- ಪಿ.ಎಂ.ಮಿತ್ರ ಮೆಗಾ ಜವಳಿ ಪಾರ್ಕ್‌ಗೆ ₹75 ಕೋಟಿ ಅನುದಾನ
- ₹16 ಕೋಟಿ ವೆಚ್ಚದಲ್ಲಿ ಷ್ನೈಡರ್ ಎಲೆಕ್ಟ್ರಿಕ್ ಯೂತ್ ಇಂಪ್ಯಾಕ್ಟ್ ಕೇಂದ್ರ ಸ್ಥಾಪನೆ
- ₹18 ಕೋಟಿ ವೆಚ್ಚದಲ್ಲಿ ನಿಂಬರ್ಗಾದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಸಿಲ್ಕ್ ಪಾರ್ಕ್ ಸ್ಥಾಪನೆಗೆ ಕ್ರಮ

**3. ವಿಜಯಪುರ**
- ಬಬಲೇಶ್ವರ ತಾಲ್ಲೂಕಿನ ಬಾಬಾ ನಗರದಲ್ಲಿ 0.67ಟಿಎಂಸಿ ಅಡಿ ಸಾಮರ್ಥ್ಯದ ಜಲ ಸಂಗ್ರಹಾಗಾರ ಸ್ಥಾಪನೆ
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಡಿಪಿಆರ್; ವಿಜಯಪುರ, ಚಡಚಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಮುದ್ದೇಬಿಹಾಳದಲ್ಲಿ ತಾಲ್ಲೂಕು ಕ್ರೀಡಾಂಗಣಕ್ಕೆ ₹2 ಕೋಟಿ
- ತೊರವಿಯಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ
- ಚಡಚಣ-ಝಳಕಿ-ಇಂಡಿ-ಅಫಜಲಪುರ-ಗಾಣಗಾಪುರ ಸಂಪರ್ಕ ರಸ್ತೆ (117ಕಿ.ಮೀ) ನಿರ್ಮಾಣ
- ಮುದ್ದೇಬಿಹಾಳ, ಬಸವನ ಬಾಗೇವಾಡಿ, ಬಬಲೇಶ್ವರ, ಇಂಡಿ, ಸಿಂದಗಿಯಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣ, ವಿಜಯಪುರದಲ್ಲಿ ಕ್ರೈಸ್ ವಸತಿ ಶಾಲೆ ಪ್ರಾರಂಭ
- ಪಿಪಿಪಿ ಮಾದರಿಯಲ್ಲಿ ವಿಮಾನ ತರಬೇತಿ ಶಾಲೆ ಆರಂಭ

**4. ಯಾದಗಿರಿ**
- ಯಾದಗಿರಿಯಲ್ಲಿ ₹100 ಕೋಟಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಸುರಪುರ ತಾಲ್ಲೂಕಿನ ಕಕ್ಕೇರಾದಲ್ಲಿ ₹18 ಕೋಟಿ ವೆಚ್ಚದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು, ಹೊಸ ಪೊಲೀಸ್ ಠಾಣೆ
- ಶಹಾಪುರ ಮತ್ತು ಗುರುಮಠಕಲ್‌ನಲ್ಲಿ ಶ್ರಮಿಕ ವಸತಿ ಶಾಲೆಗಳು
- ಯಾದಗಿರಿ ಜಿಲ್ಲೆಯಲ್ಲಿ ಕರ್ನಾಳ್ ಏತ ನೀರಾವರಿ ಯೋಜನೆ

**5. ಬೆಳಗಾವಿ**
- ಏಳು ಏತ ನೀರಾವರಿ ಯೋಜನೆಗಳಿಗೆ ಅನುಮೋದನೆ
- ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಶ್ರಮಿಕ ವಸತಿ ಶಾಲೆ
- ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ, 2 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್, 2 ವಿದ್ಯಾರ್ಥಿಗಳ ಹಾಸ್ಟೆಲ್
- ಸುವರ್ಣ ವಿಧಾನಸೌಧ ಬಳಿ ಭದ್ರತಾ ಸಿಬ್ಬಂದಿಗೆ ₹20 ಕೋಟಿ ವೆಚ್ಚದಲ್ಲಿ ವಸತಿ ಬ್ಯಾರಕ್, ಬೈಲಹೊಂಗಲದಲ್ಲಿ 'ಪ್ರಜಾಸೌಧ', ಯರಗಟ್ಟಿಯಲ್ಲಿ ಪೊಲೀಸ್ ಠಾಣೆ, ಬೆಳಗುಂದಿಯಲ್ಲಿ ಕುಸ್ತಿ ಅಖಾಡ ನಿರ್ಮಾಣ
- ಮಲಪ್ರಭಾ ನದಿಗೆ ಅಕ್ವಾಡಕ್ಟ್ ನಿರ್ಮಾಣ, ಗೂಣ್ಣಾಗರ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ತಡೆಗೋಡೆ ನಿರ್ಮಾಣ

**6. ಬಾಗಲಕೋಟೆ**
- ಬಾಗಲಕೋಟೆ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಕ್ರಮ
- ಬಾಗಲಕೋಟೆಯಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ ಸ್ಥಾಪನೆ
- ಗುಳೇದಗುಡ್ಡ ತಾಲ್ಲೂಕು ಕ್ರೀಡಾಂಗಣಕ್ಕೆ ₹2 ಕೋಟಿ
- ಬಾಗಲಕೋಟೆ, ಬಾದಾಮಿ, ಹುನಗುಂದ, ಮುಧೋಳದಲ್ಲಿ ಶ್ರಮಿಕ ವಸತಿ ಶಾಲೆ

**7. ರಾಯಚೂರು**
- ₹10 ಕೋಟಿ ವೆಚ್ಚದಲ್ಲಿ ತುರ್ತು ಚಿಕಿತ್ಸಾ ಕೇಂದ್ರ ಮಂಜೂರು
- ರಾಯಚೂರು ಐಐಐಟಿಯಲ್ಲಿ ₹5 ಕೋಟಿ ವೆಚ್ಚದಲ್ಲಿ ಎಐ ಶ್ರೇಷ್ಠತಾ ಕೇಂದ್ರ ಸ್ಥಾಪನೆ
- ಮಸ್ಕಿಯಲ್ಲಿ ₹2 ಕೋಟಿ ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ
- ಸಿಂಧನೂರಿನ ಅಂಬಾಮಠದಲ್ಲಿ ₹18 ಕೋಟಿ ವೆಚ್ಚದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ರಾಯಚೂರು ಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ ₹200 ಕೋಟಿ

**8. ಧಾರವಾಡ**
- ಹುಬ್ಬಳ್ಳಿ-ಧಾರವಾಡದಲ್ಲಿ ಕೌಶಲ ತರಬೇತಿ ಅಕಾಡೆಮಿ ಸ್ಥಾಪನೆಗೆ ₹ 200 ಕೋಟಿ
- ಧಾರವಾಡದಲ್ಲಿ ₹ 10 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ, ಅಧ್ಯಯನ ಕೇಂದ್ರ
- ಧಾರವಾಡದಲ್ಲಿ ನಾಲ್ಕು 'ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್'
- ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ₹ 2 ಕೋಟಿ
- ಧಾರವಾಡದ ಐಐಟಿ ಸಹಯೋಗದಲ್ಲಿ ₹ 5 ಕೋಟಿ ವೆಚ್ಚದಲ್ಲಿ 8–12ನೇ ತರಗತಿ ವಿದ್ಯಾರ್ಥಿಗಳಿಗಾಗಿ ಎಐ ಡಿಜಿಟಲ್ ಟ್ಯೂಟರ್ ಸೌಲಭ್ಯ
- ಹುಬ್ಬಳ್ಳಿಯಲ್ಲಿ ಹಜ್ ಭವನ ನಿರ್ಮಾಣ
- ಧಾರವಾಡದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಬಿಸಿಎಂ ಹಾಸ್ಟೆಲ್ ಸ್ಥಾಪನೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹುಬ್ಬಳ್ಳಿ-ಧಾರವಾಡದಲ್ಲಿ ವಸತಿನಿಲಯ
- ಕಾರ್ಮಿಕ ಇಲಾಖೆಯಿಂದ ಕಲಘಟಗಿ, ನವಲಗುಂದ, ಧಾರವಾಡ, ಕುಂದಗೋಳದಲ್ಲಿ ಶ್ರಮಿಕ ವಸತಿ ಶಾಲೆ
- ಹುಬ್ಬಳ್ಳಿಯಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ

**9. ಗದಗ**
- ಮುಂಡರಗಿ ತಾಲ್ಲೂಕಿನ ಡಂಬಳದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆಗೆ ಪ್ರಥಮ ಹಂತದ ಮೂಲಸೌಕರ್ಯ
- ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕಿಟ್ ಅಭಿವೃದ್ಧಿ
- ಗದಗದಲ್ಲಿ ಹೊಸ ಬಸ್ ನಿಲ್ದಾಣ
- ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೆರೆಗಳನ್ನು ತುಂಬುವ ಕಾಮಗಾರಿ

**10. ಕೊಪ್ಪಳ**
- ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ
- ಕೊಪ್ಪಳದ ಜಿಟಿಟಿಸಿ–ಎಂಎಸ್‌ಡಿಸಿಯಲ್ಲಿ ₹20 ಕೋಟಿ ವೆಚ್ಚದಲ್ಲಿ ತಂತ್ರಜ್ಞಾನ ಕೇಂದ್ರ ಸ್ಥಾಪನೆ
- ಕಾರ್ಮಿಕರ ಮಕ್ಕಳಿಗೆ ಎರಡು ಹಂತಗಳಲ್ಲಿ ಯಲಬುರ್ಗಾ, ಕಾರಟಗಿ ಹಾಗೂ ಕೊಪ್ಪಳದಲ್ಲಿ ಶ್ರಮಿಕ ವಸತಿ ಶಾಲೆ
- ಯಲಬುರ್ಗಾ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ವಸತಿಸಹಿತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ₹18 ಕೋಟಿ
- ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು ಕೊಪ್ಪಳದಲ್ಲಿ ₹4 ಕೋಟಿ ವೆಚ್ಚದಲ್ಲಿ ತಾರಾಲಯ

**11. ಉತ್ತರ ಕನ್ನಡ**
- ಕಾರವಾರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಕ್ರಿಮ್ಸ್) ಸೂಪರ್ ಸ್ಪೆಷಾಲಿಟಿ ಸೌಲಭ್ಯ ಕಲ್ಪಿಸಲು ₹100 ಕೋಟಿ
- ಎಲೆಚುಕ್ಕಿ ರೋಗದ ಸಂಶೋಧನೆಗೆ ₹10 ಕೋಟಿ
- ತದಡಿ ಬಂದರಿನಲ್ಲಿ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಪ್ರವಾಸಿ ಮಾಹಿತಿ ಕೇಂದ್ರ ಸೇರಿದಂತೆ ಪರಿಸರಸ್ನೇಹಿ ಕಾರಿಡಾರ್ ಸ್ಥಾಪನೆ

**12. ಹಾವೇರಿ**
- ಹಾವೇರಿಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ
- ಸಂತ ಶಿಶುನಾಳ ಷರೀಫರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪನೆ
- ಗಾಂಧೀಜಿ ಭೇಟಿ ನೀಡಿದ ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಾಣ; ಗಾಂಧಿ ಭವನ ಪುನಶ್ಚೇತನ
- ಹಾವೇರಿ, ರಾಣೆಬೆನ್ನೂರು, ಶಿಗ್ಗಾವಿ, ಹಾನಗಲ್, ಹಿರೇಕೆರೂರಿನಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣ
- ಹಾನಗಲ್ ತಾಲ್ಲೂಕಿನ ತಿಳವಳ್ಳಿ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪನೆ
- ಮದಗ–ಮಾಸೂರು ಕೆರೆಗೆ ನೀರು ತುಂಬಿಸುವ ಯೋಜನೆ
- ಹಾನಗಲ್ ಭಾಗದ 111 ಕೆರೆಗಳಿಗೆ ವರದಾ ನದಿಯಿಂದ ಏತ ನೀರಾವರಿ; ರಟ್ಟೀಹಳ್ಳಿ ತಾಲ್ಲೂಕಿನಲ್ಲಿ ಚೆಕ್ ಡ್ಯಾಂ ಹಾಗೂ ತಡೆಗೋಡೆ ನಿರ್ಮಾಣ; ಶಿಗ್ಗಾವಿ ತಾಲ್ಲೂಕಿನಲ್ಲಿ ಸೇತುವೆ ಸಹಿತ ಚೆಕ್ ಡ್ಯಾಂ ನಿರ್ಮಾಣ

**13. ವಿಜಯನಗರ**
- ತುಂಗಭದ್ರಾ ಅಣೆಕಟ್ಟೆಯ ಎಲ್ಲಾ 33 ಕ್ರೆಸ್ಟ್‌ಗೇಟ್ ಅಳವಡಿಕೆ ಕಾಮಗಾರಿ ಮುಂಗಾರಿಗೂ ಮೊದಲು ಪೂರ್ಣ
- ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣ ಕೆಕೆಆರ್‌ಡಿಬಿ ಮತ್ತು ಕೆಎಂಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೆ
- ಕೆಕೆಆರ್‌ಡಿಬಿ ಮೈಕ್ರೊ ಅನುದಾನದೊಂದಿಗೆ ಹರಪನಹಳ್ಳಿಯಲ್ಲಿ ಒಳಚರಂಡಿ ಕಾಮಗಾರಿ
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ನಿರ್ಮಾಣ
- ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಮುನಿರಾಬಾದ್‌ನ ಟಿ.ಬಿ.ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ

**14. ಬಳ್ಳಾರಿ**
- 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ಥಾಪನೆ
- ಕಂಪ್ಲಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ
- ₹4 ಕೋಟಿ ವೆಚ್ಚದಲ್ಲಿ ಬಳ್ಳಾರಿಯಲ್ಲಿ ತಾರಾಲಯ
- ಸಿರುಗುಪ್ಪದಲ್ಲಿ ಪ್ರಜಾಸೌಧ ನಿರ್ಮಾಣ
- ಬಳ್ಳಾರಿ, ಸಂಡೂರು, ಕುರುಗೋಡುಗಳಲ್ಲಿ ಶ್ರಮಿಕ ವಸತಿ ಶಾಲೆ

**15. ಶಿವಮೊಗ್ಗ**
- ಕುವೆಂಪು ವಿವಿಯಲ್ಲಿ ಯು.ಆರ್.ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆ
- ಶಿವಮೊಗ್ಗ ವಿಮಾನ ನಿಲ್ದಾಣದ ಆವರಣದಲ್ಲಿ ವಿಮಾನ ತರಬೇತಿ ಶಾಲೆ ಸ್ಥಾಪನೆ. ಪಿಪಿಪಿ ಮಾದರಿಯಲ್ಲಿ ವಿಮಾನಗಳ ತಯಾರಿಕೆ/ಜೋಡಣಾ ಘಟಕ

**16. ದಾವಣಗೆರೆ**
- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯ ಹೆಚ್ಚಾಗಿ ವಾಸಿಸುತ್ತಿರುವ ವಿವಿಧ ಭಾಗಗಳ ಅಭಿವೃದ್ಧಿಗೆ ₹ 100 ಕೋಟಿ
- ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆಗಾಗಿ ದಾವಣಗೆರೆಯಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ
- 150 ಸಂಖ್ಯಾಬಲದ ಬಿಸಿಎಂ ವಿದ್ಯಾರ್ಥಿ ನಿಲಯ
- ಹೊನ್ನಾಳಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಡಿಪೋ ನಿರ್ಮಾಣ




**17. ಚಿತ್ರದುರ್ಗ**
- ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆ ತ್ವರಿತ ಕಾಮಗಾರಿ; 157 ಕೆರೆ ತುಂಬಿಸುವುದು
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ಸ್ಥಾಪನೆ
- ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಆರಂಭ
- ಹಿರಿಯೂರಿನಲ್ಲಿ ಸಂಚಾರ ಪೊಲೀಸ್ ಠಾಣೆ ಸ್ಥಾಪನೆ
- ಹೊಸದುರ್ಗ, ಚಳ್ಳಕೆರೆಯಲ್ಲಿ ಶ್ರಮಿಕ ವಸತಿ ಶಾಲೆ ಆರಂಭ

**18. ಉಡುಪಿ**
- ಕೊಲ್ಲೂರು ಮೂಕಾಂಬಿಕಾ ದೇವಾಲಯದ ಸಮಗ್ರ ಪ್ರಗತಿಗಾಗಿ ಅಭಿವೃದ್ಧಿ ಪ್ರಾಧಿಕಾರ
- ಮೀನು ಮಾರುಕಟ್ಟೆ ನಿರ್ಮಾಣ
- ಗ್ರಾಮೀಣ ಪ್ರದೇಶಗಳಲ್ಲಿ ಕಾಲುಸಂಕ ನಿರ್ಮಾಣ
- ಪಂಜರ ಮೀನು ಕೃಷಿಗೆ ಉತ್ತೇಜನ

**19. ಚಿಕ್ಕಮಗಳೂರು**
- ಮುಳ್ಳಯ್ಯನಗಿರಿ-ಸೀತಾಳಯ್ಯನಗಿರಿಯಿಂದ ಕೈಮರದ ತನಕ ಪಿಪಿಪಿ ಮಾದರಿಯಲ್ಲಿ ರೋಪ್-ವೇ ನಿರ್ಮಾಣ
- ಚಿಕ್ಕಮಗಳೂರಿನಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣಕ್ಕೆ ₹12 ಕೋಟಿ
- ಕಡೂರು ತಾಲ್ಲೂಕಿನಲ್ಲಿ 25 ಕೆರೆಗಳಿಗೆ ನೀರು ತುಂಬಿಸುವ ಹಾಗೂ ಕಾಲುವೆ ಆಧುನೀಕರಣ ಯೋಜನೆ
- ಅಜ್ಜಂಪುರ ತಾಲ್ಲೂಕಿನ 19 ಕೆರೆಗಳಿಗೆ ನೀರು ತುಂಬಿಸಲು ಏತ ನೀರಾವರಿ ಯೋಜನೆ
- ಕಡೂರಿನಲ್ಲಿ ಶ್ರಮಿಕ ವಸತಿ ಶಾಲೆ
- ತರೀಕೆರೆಯಲ್ಲಿ ಬಸ್ ಡಿಪೊ

**20. ತುಮಕೂರು**
- ಕೊರಟಗೆರೆ ತಾಲ್ಲೂಕು ವಡೆಯರಪುರ ಬಳಿ 1.7 ಟಿಎಂಸಿ ಸಾಮರ್ಥ್ಯದ ಸಮತೋಲನ ಜಲಾಶಯ ನಿರ್ಮಾಣ
- ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಗೆ ₹3 ಕೋಟಿ
- ತುಮಕೂರಿನಲ್ಲಿ ₹5 ಕೋಟಿ ವೆಚ್ಚದಲ್ಲಿ ಸೀಜಿಂಗ್ ಯಾರ್ಡ್ ನಿರ್ಮಾಣ
- ಜಿಲ್ಲೆಯ ನಾಲ್ಕು ಕಡೆ (ಕುಣಿಗಲ್, ತಿಪಟೂರು, ಮಧುಗಿರಿ, ಶಿರಾ) ಶ್ರಮಿಕ ವಸತಿ ಶಾಲೆ ಆರಂಭ

**21. ಬೆಂಗಳೂರು ಗ್ರಾಮಾಂತರ**
- ದೇವನಹಳ್ಳಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಚೆಕ್ ಡ್ಯಾಂ ನಿರ್ಮಾಣ, ಕಾರಹಳ್ಳಿ ಕೆರೆ ಅಭಿವೃದ್ಧಿ
- ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 119 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಗೆ ₹650 ಕೋಟಿ
- ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್.ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಗೆ ₹140 ಕೋಟಿ
- ದೊಡ್ಡಬಳ್ಳಾಪುರದಲ್ಲಿ ಪ್ಯಾರಾಮೆಡಿಕಲ್ ಕೋರ್ಸ್ ಪ್ರಾರಂಭ

**22. ಚಿಕ್ಕಬಳ್ಳಾಪುರ**
- ಹೆಬ್ಬಾಳ-ನಾಗವಾರ ಕಣಿವೆಯ ಮೂರನೇ ಹಂತದಲ್ಲಿ ಶಿಡ್ಲಘಟ್ಟದ ಅಮಾನಿ ಕೆರೆಯಿಂದ ತಾಲ್ಲೂಕಿನ 45 ಕೆರೆಗಳು ಮತ್ತು ಚಿಂತಾಮಣಿ ತಾಲ್ಲೂಕಿನ 119 ಕೆರೆಗಳು ಸೇರಿ ಒಟ್ಟಾರೆ 164 ಕೆರೆಗಳಿಗೆ ನೀರು ತುಂಬಿಸುವ ₹237 ಕೋಟಿಯ ಯೋಜನೆ
- ಜೀವಿತಾವಧಿ ಮುಗಿದ ವಾಹನಗಳನ್ನು ಸುರಕ್ಷಿತ ರೀತಿಯಲ್ಲಿ ವಿಲೇವಾರಿ ಮಾಡಲು ಕೆಐಎಡಿಬಿ ಮೂಲಕ ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ ವಾಹನ ಸ್ಕ್ರ್ಯಾಪಿಂಗ್ ಘಟಕ ಸ್ಥಾಪನೆ
- ಶಿಡ್ಲಘಟ್ಟದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಗೆ ಕ್ರಮ
- ಡ್ರೋನ್ ಪರೀಕ್ಷಾ ಸೌಲಭ್ಯ ಕೇಂದ್ರ ಸ್ಥಾಪನೆ

**23. ದಕ್ಷಿಣ ಕನ್ನಡ**
- ಮಂಗಳೂರು ಮೀನುಗಾರಿಕಾ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ
- ಮಂಗಳೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ 50 ಸಂಖ್ಯಾಬಲದ ವಸತಿ ನಿಲಯ
- ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಮೂಲ ಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಧಿಕಾರ ರಚನೆ
- ಮಂಗಳೂರಿನಲ್ಲಿ 150 ಸಂಖ್ಯಾಬಲದ ಮೆಟ್ರಿಕ್ ನಂತರದ ಬಿಸಿಎಂ ವಿದ್ಯಾರ್ಥಿನಿಲಯ ಸ್ಥಾಪನೆ

**24. ಹಾಸನ**
- ಹಾಸನ ಮಹಾನಗರ ಪಾಲಿಕೆಗೆ ಮಹಾತ್ಮಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ ₹ 200 ಕೋಟಿ
- ಸಾಲಗಾಮೆ, ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ ನಿರ್ಮಾಣ
- ಐಗೂರು ಕೆರೆ, ಬಾಗೂರು ಕೆರೆ ಅಭಿವೃದ್ಧಿ

**25. ಮಂಡ್ಯ**
- ಪಾಂಡವಪುರವನ್ನು ಸಂಪೂರ್ಣ ಸಾವಯವ ತಾಲ್ಲೂಕನ್ನಾಗಿ ಪರಿವರ್ತಿಸಲು ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆ ಜಾರಿ
- ಮಂಡ್ಯದಲ್ಲಿ ₹500 ಕೋಟಿಯಲ್ಲಿ ಅತ್ಯಾಧುನಿಕ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪನೆಗೆ ಸರ್ಕಾರದಿಂದ 100 ಎಕರೆ ಜಮೀನು
- ಕಾರ್ಮಿಕ ಇಲಾಖೆಯಿಂದ ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಶ್ರಮಿಕ ವಸತಿ ಶಾಲೆಗಳ ಸ್ಥಾಪನೆ

**26. ಬೆಂಗಳೂರು ದಕ್ಷಿಣ**
- ಮೇಕೆದಾಟು ಅಣೆಕಟ್ಟೆ ಯೋಜನೆಗೆ ಹೊಸ ಡಿಪಿಆರ್
- ರಾಮನಗರದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ
- ರಾಮನಗರದಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ
- ಕನಕಪುರದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ₹2 ಕೋಟಿ
- ಬೆಂಗಳೂರು ನಗರ ಸಂಚಾರ ದಟ್ಟಣೆ ತಗ್ಗಿಸಲು ನೆಲಮಂಗಲ-ತಾವರೆಕೆರೆ-ಬಿಡದಿ ಮಧ್ಯಂತರ ವರ್ತುಲ ರಸ್ತೆಯನ್ನು ಬಿಎಂಆರ್‌ಡಿಎ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಆರ್ಥಿಕ ಸಂಪನ್ಮೂಲಗಳಿಂದ ನಿರ್ಮಿಸುವುದು

**27. ಬೆಂಗಳೂರು ನಗರ**
- ಬೆಂಗಳೂರಿನ ಬೃಹತ್ ಮೂಲಸೌಕರ್ಯ ಯೋಜನೆಗಳಿಗೆ ₹7,000 ಕೋಟಿ ಅನುದಾನ
- ₹6,939 ಕೋಟಿ ವೆಚ್ಚದಲ್ಲಿ ಕಾವೇರಿ 6ನೇ ಹಂತದ ಯೋಜನೆಯಡಿ ಹೆಚ್ಚುವರಿಯಾಗಿ ಆರು ಟಿ.ಎಂ.ಸಿ. ಅಡಿ ನೀರು ಪೂರೈಕೆ
- ಮುಂದಿನ ಮೂರು ವರ್ಷದಲ್ಲಿ ₹3,000 ಕೋಟಿ ವೆಚ್ಚದಲ್ಲಿ 450 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್
- ಬಿಡಿಎ ವತಿಯಿಂದ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ₹2,250 ಕೋಟಿ ವೆಚ್ಚದಲ್ಲಿ ಸುರಂಗ ರಸ್ತೆ

**28. ಕೋಲಾರ**
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಡಿಪಿಆರ್
- ಪ್ರತಿ ತಾಲ್ಲೂಕಿನಲ್ಲಿ ರೈತ ಮಾಲ್ ಸ್ಥಾಪನೆ
- ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ನೂತನ ಪೊಲೀಸ್ ಠಾಣೆ
- ಬಂಗಾರಪೇಟೆ, ಮಾಲೂರು, ಕೆಜಿಎಫ್‌ನಲ್ಲಿ ಶ್ರಮಿಕ ವಸತಿ ಶಾಲೆ
- ಬಂಗಾರಪೇಟೆ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ₹ 2 ಕೋಟಿ
- ಕೋಲಾರದ ತೇರಹಳ್ಳಿ ಬೆಟ್ಟದ ಶಿವಗಂಗೆಯಲ್ಲಿರುವ 'ಆದಿಮ ಸಾಂಸ್ಕೃತಿಕ ಕೇಂದ್ರ'ಕ್ಕೆ ಅನುದಾನ
- ಡಾ.ಬಿ.ಆರ್.ಅಂಬೇಡ್ಕರ್ ಭೇಟಿ ನೀಡಿದ ನೆನಪಿಗೆ ಅವರ ಹೆಸರಿನಲ್ಲಿ ಕ್ರೈಸ್ ವಸತಿ ಶಾಲೆ ಪ್ರಾರಂಭ

**29. ಕೊಡಗು**
- ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ನೈಜ ದುರ್ಬಲ ಬುಡಕಟ್ಟು ಸಮುದಾಯ (ಪಿವಿಟಿಜಿ)ಗಳಿಗಾಗಿ 'ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ'ದ ಸ್ಥಾಪನೆ
- ವಿರಾಜಪೇಟೆ, ಸೋಮವಾರಪೇಟೆಯಲ್ಲಿ ಶ್ರಮಿಕ ವಸತಿ ಶಾಲೆ
- ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಸೇತುವೆ ನಿರ್ಮಾಣ
- ಮಡಿಕೇರಿ–ಕುಶಾಲನಗರ, ಪೊನ್ನಂಪೇಟೆ, ಸೋಮವಾರಪೇಟೆ ಮುಂತಾದೆಡೆ ಚೆಕ್ ಡ್ಯಾಂ, ನಾಲೆ, ತಡೆಗೋಡೆ ನಿರ್ಮಾಣ

**30. ಮೈಸೂರು**
- ನಂಜನಗೂಡು ತಾಲ್ಲೂಕಿನ ತಾಂಡವಪುರದಲ್ಲಿ 'ಸಿಲ್ಕ್ ಪಾರ್ಕ್' ಸ್ಥಾಪನೆ
- 'ಬೋಯರ್' ಮೇಕೆ, ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರದ ಅಭಿವೃದ್ಧಿ
- ಮೈಸೂರಿನ ಬಂಬೂಬಜಾರ್‌ನಲ್ಲಿರುವ ರಾಜ್ಯ ಉಗ್ರಾಣ ನಿಗಮದ ಕೇಂದ್ರದಲ್ಲಿ ಸಾರ್ವಜನಿಕ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ತಲಾ 50 ಸಂಖ್ಯಾಬಲದ ವಸತಿನಿಲಯ
- ಮೈಸೂರಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ
- ಮೈಸೂರಿನಲ್ಲಿ ₹ 75 ಲಕ್ಷ ವೆಚ್ಚದಲ್ಲಿ ಆಧುನಿಕ ಲ್ಯಾಂಡ್ರಿ ಸ್ಥಾಪನೆ
- ಮೈಸೂರನ್ನು ರಾಜ್ಯದ 2ನೇ ಐಟಿ ಸಿಟಿ ಆಗಿ ಅಭಿವೃದ್ಧಿಪಡಿಸುವ ಘೋಷಣೆ
- ಮೈಸೂರು ವಿಮಾನ ನಿಲ್ದಾಣದ ಸಮೀಪದಲ್ಲಿ ಕೆಐಎಡಿಬಿಯಿಂದ 'ಏರೋಸ್ಪೇಸ್ ಪಾರ್ಕ್'
- ಮೈಸೂರಿನ ದಟ್ಟಗಳ್ಳಿಯಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರಮ್
- ಮೈಸೂರಿನಲ್ಲಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ ₹ 10 ಕೋಟಿ.
- ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪಿಪಿಪಿ ಮಾದರಿಯಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ
- ಮೈಸೂರು ಫಿಲಂ ಸಿಟಿಯಲ್ಲಿ ಥೀಮ್ ಪಾರ್ಕ್, ಸ್ಟಾರ್ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳನ್ನು ಒಳಗೊಂಡು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ವ್ಯವಹಾರ ವಹಿವಾಟುದಾರರ ನೇಮಕ
- ಮೈಸೂರು ನಗರದಲ್ಲಿರುವ 'ಲಿಂಗಾಂಬುಧಿ ಸಸ್ಯತೋಟ'ದ ಸಮಗ್ರ ಅಭಿವೃದ್ಧಿ
- ಮೈಸೂರು ನಗರದಲ್ಲಿ ಪ್ರಾಯೋಗಿಕವಾಗಿ 'ಇ-ಕೋರ್ಟ್' ಸ್ಥಾಪನೆ

**31. ಚಾಮರಾಜನಗರ**
- ಹನೂರು ತಾಲ್ಲೂಕಿನಲ್ಲಿ ಅಂತರ್ಜಲ ಹೆಚ್ಚಿಸಲು ಕುಡಿಯುವ ನೀರಿನ ಸಮಸ್ಯೆ ನೀಗಲು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆ ಅನುಷ್ಠಾನಕ್ಕೆ ₹490 ಕೋಟಿ

Publication Date
07/03/2026

Presented by

Dr. Rajkumar IAS

# ಸಾವಿರ ಕೋಟಿಯಿಂದ ಲಕ್ಷ ಕೋಟಿಯವರೆಗೆ...

ಸಿದ್ದರಾಮಯ್ಯ ಅವರು ಎಚ್.ಡಿ.ದೇವೇಗೌಡ ಅವರ ಸರ್ಕಾರದಲ್ಲಿ 1995–96ರಲ್ಲಿ ಹಣಕಾಸು ಸಚಿವರಾಗಿ ತಮ್ಮ ಮೊದಲ ಬಜೆಟ್ ಮಂಡಿಸಿದ್ದರು. ಆಗ ಬಜೆಟ್‌ನ ಗಾತ್ರ ₹10,859 ಕೋಟಿಯಷ್ಟಿತ್ತು. ಈಗ ಅವರು ಮಂಡಿಸಿರುವ ಬಜೆಟ್‌ನ ಗಾತ್ರ ₹4.48 ಲಕ್ಷ ಕೋಟಿಯಷ್ಟಿದೆ. ಈವರೆಗೆ ಅವರು 17 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ

| | |
|---|---|
| 1995-96 | ₹10,859 ಕೋಟಿ (ವಾಸ್ತವ ವೆಚ್ಚ) |
| 1996-97 | ₹12,339 ಕೋಟಿ |
| 1997-98 | ₹13,644 ಕೋಟಿ |
| 1998-99 | ₹15,519 ಕೋಟಿ |
| 1999-2000 | ₹17,332 ಕೋಟಿ |
| 2004-05 | ₹31,591 ಕೋಟಿ |
| 2005-06 | ₹34,615 ಕೋಟಿ |
| 2013-14 | ₹1.22 ಲಕ್ಷ ಕೋಟಿ |
| 2014-15 | ₹1.38 ಲಕ್ಷ ಕೋಟಿ |
| 2015-16 | ₹1.43 ಲಕ್ಷ ಕೋಟಿ |
| 2016-17 | ₹1.63 ಲಕ್ಷ ಕೋಟಿ |
| 2017-18 | ₹1.86 ಲಕ್ಷ ಕೋಟಿ |
| 2018-19 | ₹2.09 ಲಕ್ಷ ಕೋಟಿ |
| 2023-24 | ₹3.28 ಲಕ್ಷ ಕೋಟಿ |
| 2024-25 | ₹3.71 ಲಕ್ಷ ಕೋಟಿ |
| 2025-26 | ₹4.09 ಲಕ್ಷ ಕೋಟಿ |
| 2026-27 | ₹4.48 ಲಕ್ಷಕೋಟಿ |



2004–05ರ ಸಾಲಿನ ಬಜೆಟ್ ಅನ್ನು ಸಿದ್ದರಾಮಯ್ಯ ಅವರು ಮಂಡಿಸಿದ ಸಂದರ್ಭದ ಚಿತ್ರ

2013-14ರವರೆಗೆ ಏಳು ಬಾರಿ ಅವರು ಹಣಕಾಸು ಸಚಿವರಾಗಿ ಬಜೆಟ್ ಮಂಡಿಸಿದ್ದಾರೆ. ನಂತರ ಬಜೆಟ್ ಮಂಡಿಸಿದ್ದೆಲ್ಲಾ ಮುಖ್ಯಮಂತ್ರಿಯಾಗಿ.

Publication Date
07/03/2026

Presented by

# ರಾಜ್ಯದ ಆರ್ಥಿಕ ಸ್ಥಿತಿ ಆಶಾದಾಯಕ: ಸಮೀಕ್ಷೆ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಆರ್ಥಿಕ ಸ್ಥಿತಿ, ಒಟ್ಟು ಆಂತರಿಕ ಉತ್ಪಾದನೆ (ಜಿಎಸ್‌ಡಿಪಿ) ಹಾಗೂ ತಲಾವಾರು ಆದಾಯದ ವಿಚಾರವಾಗಿ ಬಹಳ ಆಶಾದಾಯಕವಾದ ಚಿತ್ರಣವೊಂದನ್ನು 'ಕರ್ನಾಟಕ ಆರ್ಥಿಕ ಸಮೀಕ್ಷೆ 2025-26' ವರದಿಯು ನೀಡಿದೆ.

ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ಆರ್ಥಿಕ ಬೆಳವಣಿಗೆ ದರವು ಶೇಕಡ 8.1ರಷ್ಟು ಇರಲಿದೆ ಎಂದು ವರದಿಯು ಹೇಳಿದೆ. ಇದು ದೇಶದ ಆರ್ಥಿಕ ಬೆಳವಣಿಗೆಯ ಅಂದಾಜು ಆಗಿರುವ ಶೇ7.4ಕ್ಕಿಂತ ಹೆಚ್ಚು.


ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಶುಕ್ರವಾರ ಮಂಡಿಸಲಾಗಿದೆ. ತಲಾವಾರು ಆದಾಯದ ವಿಚಾರದಲ್ಲಿಯೂ ಕರ್ನಾಟಕವು ರಾಷ್ಟ್ರೀಯ ಸರಾಸರಿಗಿಂತ ಮುಂದೆ ಇದೆ. ದೇಶದ ಇತರ ಹಲವು ರಾಜ್ಯಗಳಿಗಿಂತಲೂ ಮುಂದೆ ಇದೆ ಎಂದು ವರದಿ ಉಲ್ಲೇಖಿಸಿದೆ.

ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇದ್ದರೆ ರಾಜ್ಯದ ತಲಾ ಆದಾಯವು ಹಾಲಿ ಆರ್ಥಿಕ ವರ್ಷದಲ್ಲಿ ₹4.33 ಲಕ್ಷ ಆಗುತ್ತದೆ. ಇದು ರಾಷ್ಟ್ರ ಮಟ್ಟದಲ್ಲಿ ₹2.19 ಲಕ್ಷ ಆಗಿದೆ.




ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಂಡಾಗ ರಾಜ್ಯದ ತಲಾ ಆದಾಯವು ₹2.23 ಲಕ್ಷ ಆಗುತ್ತದೆ.

ಜಿಎಸ್‌ಡಿಪಿಯಲ್ಲಿ ಸೇವಾ ವಲಯದ ಸಿಂಹಪಾಲು ಮುಂದುವರಿದಿರುವುದನ್ನು ಆರ್ಥಿಕ ಸಮೀಕ್ಷೆಯು ದಾಖಲಿಸಿದೆ. ಈ ವಲಯವು ಜಿಎಸ್‌ಡಿಪಿಯಲ್ಲಿ ಶೇ 69.8ರಷ್ಟು ಪಾಲು ಹೊಂದಿದೆ. ನಂತರದ ಸ್ಥಾನಗಳಲ್ಲಿ ಕೈಗಾರಿಕಾ ವಲಯ (ಶೇ 19.4) ಹಾಗೂ ಕೃಷಿ ವಲಯ (ಶೇ 10.8ರಷ್ಟು ಪಾಲು) ಇವೆ.



ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೃಷಿ ವಲಯದ ಬೆಳವಣಿಗೆ ಪ್ರಮಾಣವು, ಹಣದುಬ್ಬರದ ಪರಿಣಾಮವನ್ನು ಗಣನೆಗೆ ತೆಗೆದುಕೊಂಡ ನಂತರದಲ್ಲಿಯೂ ಶೇ 9.1ರಷ್ಟು ಇರಬಹುದು ಎಂದು ವರದಿಯು ಅಂದಾಜು ಮಾಡಿದೆ. ಅಲ್ಲದೆ, ಕೈಗಾರಿಕಾ ವಲಯದ ಬೆಳವಣಿಗೆಯು ಶೇ 6.7ರಷ್ಟು ಹಾಗೂ ಸೇವಾ ವಲಯವು ಶೇ 8.1ರಷ್ಟು ಬೆಳವಣಿಗೆ ಕಾಣಬಹುದು ಎಂದು ಅಂದಾಜು ಮಾಡಲಾಗಿದೆ.

ಜಿಎಸ್‌ಡಿಪಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಪಾಲು ಶೇ 40.4ರಷ್ಟಿದೆ. ಜಿಲ್ಲಾವಾರು ಜಿಎಸ್‌ಡಿಪಿ ಪಟ್ಟಿಯಲ್ಲಿ ಬೆಂಗಳೂರು ನಗರವು ಮೊದಲ ಸ್ಥಾನದಲ್ಲಿದೆ. ಎರಡನೆಯ ಹಾಗೂ ಮೂರನೆಯ ಸ್ಥಾನಗಳಲ್ಲಿ ಕ್ರಮವಾಗಿ ದಕ್ಷಿಣ ಕನ್ನಡ (ಶೇ 5.3ರಷ್ಟು) ಹಾಗೂ ಬೆಳಗಾವಿ (ಶೇ 3.9ರಷ್ಟು) ಇವೆ. ಮೊದಲ ಹಾಗೂ ಎರಡನೆಯ ಸ್ಥಾನಗಳಲ್ಲಿ ಇರುವ ಜಿಲ್ಲೆಗಳ ನಡುವಿನ ಅಂತರವು ಆರ್ಥಿಕ ಚಟುವಟಿಕೆಗಳು ಬೆಂಗಳೂರು ನಗರ ಜಿಲ್ಲೆಯಲ್ಲಿ ಭಾರಿ ಪ್ರಮಾಣದಲ್ಲಿ ಕೇಂದ್ರೀಕೃತವಾಗಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಿವೆ.

## ರಫ್ತು ಹೆಚ್ಚಳ

ರಾಜ್ಯದ ಒಟ್ಟು ರಫ್ತುಗಳ ಪ್ರಮಾಣವನ್ನು 2024-25ಕ್ಕೆ ಹೋಲಿಸಿದಾಗ 2025-26ರಲ್ಲಿ ಶೇ 13.78ರಷ್ಟು ಹೆಚ್ಚಾಗಿದೆ.

ಕೃಷಿ ಉತ್ಪನ್ನಗಳ ರಫ್ತುಗಳು 2023-24ರಲ್ಲಿ ₹18,765 ಕೋಟಿ ಇದ್ದದ್ದು, 2024-25ರಲ್ಲಿ ₹22,568 ಕೋಟಿಗೆ ಹೆಚ್ಚಳವಾಗಿ ಸುಮಾರು ಶೇ 20ರಷ್ಟು ಏರಿಕೆ ದಾಖಲಿಸಿದೆ.

Publication Date
07/03/2026

Presented by ಪ್ರಜಾವಾಣಿ

# ಆಂಧ್ರಪ್ರದೇಶ: 13 ವರ್ಷದೊಳಗಿನ ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧ

**ಅಮರಾವತಿ (ಪಿಟಿಐ):** ಆಂಧ್ರಪ್ರದೇಶದಲ್ಲಿ 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡದಂತೆ ನಿಷೇಧ ಹೇರುವುದಾಗಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಗುರುವಾರ ಘೋಷಿಸಿದ್ದಾರೆ. ಮುಂದಿನ 90 ದಿನಗಳ ಒಳಗೆ ಈ ನಿಯಮವನ್ನು ಜಾರಿಗೊಳಿಸುವುದಾಗಿಯೂ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ಮಕ್ಕಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿಷೇಧ ಹೇರುವುದಾಗಿ ಕರ್ನಾಟಕ ಸರ್ಕಾರ ಘೋಷಿಸಿರುವಂತೆಯೇ ಆಂಧ್ರ ಸರ್ಕಾರದ ಈ ಕ್ರಮ ಗಮನಸೆಳೆದಿದೆ.

ವಿಧಾನಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, 'ಈ ನಿರ್ಬಂಧವನ್ನು 13 ವಯಸ್ಸಿನಿಂದ 16ನೇ ವಯಸ್ಸಿನವರೆಗೆ ವಿಸ್ತರಿಸಬಹುದೇ ಎಂಬುದರ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಶೀಘ್ರವೇ ಈ ಸಂಬಂಧಿಸಿದ ನಿರ್ಧಾರವನ್ನೂ ಕೈಗೊಳ್ಳಲಾಗುವುದು' ಎಂದಿದ್ದಾರೆ.

## ಇಂಡೊನೇಷ್ಯಾ: ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ

**ಜಕಾರ್ತ (ಎಎಫ್‌ಪಿ):** ಇಂಡೊನೇಷ್ಯಾದಲ್ಲಿ 16 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸುವುದಾಗಿ ಅಲ್ಲಿನ ಸರ್ಕಾರ ಶುಕ್ರವಾರ ಹೇಳಿದೆ.



'ಆನ್‌ಲೈನ್‌ನಲ್ಲಿ ಅಶ್ಲೀಲ ದೃಶ್ಯಗಳ ವೀಕ್ಷಣೆ, ಸೈಬರ್ ಬೆದರಿಕೆ, ಆನ್‌ಲೈನ್ ವಂಚನೆ ಮತ್ತು ಇಂಟರ್‌ನೆಟ್ ಗೀಳನ್ನು ಕಡಿಮೆ ಮಾಡುವ ಸಲುವಾಗಿ 16 ವರ್ಷದೊಳಗಿನ ಮಕ್ಕಳ ಸಾಮಾಜಿಕ ಜಾಲತಾಣ ಖಾತೆಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಇದು ಮಾರ್ಚ್ 28ರಿಂದ ಅನುಷ್ಠಾನಗೊಳ್ಳಲಿದೆ' ಎಂದು ಇಂಡೊನೇಷ್ಯಾದ ಸಂವಹನ ಸಚಿವರು ತಿಳಿಸಿದ್ದಾರೆ.

'ಆರಂಭದಲ್ಲಿ ಯೂಟ್ಯೂಬ್, ಟಿಕ್‌ಟಾಕ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಥ್ರೆಡ್ಸ್, ಎಕ್ಸ್, ಬಿಗೊ ಲೈವ್ ಮತ್ತು ರೊಬ್ಲಾಕ್ಸ್ ಬಳಕೆಯನ್ನು ನಿಯಂತ್ರಿಸಲಾಗುತ್ತದೆ. ಎಲ್ಲ ಸಾಮಾಜಿಕ ಜಾಲತಾಣಗಳು ಮಾರ್ಗಸೂಚಿಗಳನ್ನು ಪಾಲಿಸುವವರೆಗೆ ಹಂತ ಹಂತವಾಗಿ ನಿರ್ಬಂಧವನ್ನು ಹೇರಲಾಗುತ್ತದೆ' ಎಂದು ಹೇಳಿದ್ದಾರೆ.

16 ವರ್ಷದ ಒಳಗಿನ ಮಕ್ಕಳು ಕೆಲವು ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ಆಸ್ಟ್ರೇಲಿಯಾದಲ್ಲಿ ಈಗಾಗಲೇ ನಿರ್ಬಂಧಿಸಲಾಗಿದೆ. ಅಲ್ಲಿನ ಸರ್ಕಾರ ಈ ಸಂಬಂಧ 2025ರ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿದೆ. ಫ್ರಾನ್ಸ್, ಡೆನ್ಮಾರ್ಕ್, ಗ್ರೀಸ್ ಮತ್ತು ಸ್ಪೇನ್ ದೇಶಗಳು ಕೂಡಾ ಇದೇ ರೀತಿಯ ನಿಯಮ ಜಾರಿಗೊಳಿಸುವ ಚಿಂತನೆ ನಡೆಸಿವೆ.

**₹19,843 ಕೋಟಿ** ಕಂದಾಯ ಇಲಾಖೆಗೆ ಹಂಚಿಕೆ ಮಾಡಲಾದ ಅನುದಾನ

**₹29,947 ಕೋಟಿ** ಇಂಧನ ಇಲಾಖೆಗೆ ಅನುದಾನ

**₹23,100 ಕೋಟಿ** ಒಳಾಡಳಿತ ಮತ್ತು ಸಾರಿಗೆ ಕ್ಷೇತ್ರಕ್ಕೆ ಮೀಸಲಿಟ್ಟ ಮೊತ್ತ

ಪ್ರಜಾವಾಣಿ 2026-27 ರಾಜ್ಯ ಬಜೆಟ್

## ಸೂರ್ಯ ಕ್ರೀಡಾ ಗ್ರಾಮ

- 'ಕೆ.ಎಚ್.ಬಿ. ಸೂರ್ಯ ಕ್ರೀಡಾ ಗ್ರಾಮ' ಎಂಬ ಹೆಸರಿನಲ್ಲಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ 80 ಸಾವಿರ ಆಸನ ಸಾಮರ್ಥ್ಯದ ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ
- ಕೆ.ಎಚ್.ಬಿ ವತಿಯಿಂದ 'ನಮ್ಮ ಮನೆ ಯೋಜನೆ'ಯಡಿ ಮುಂದಿನ ಎರಡು ವರ್ಷಗಳಲ್ಲಿ 50 ಸಾವಿರ ನಿವೇಶನ ರಿಯಾಯಿತಿ ದರದಲ್ಲಿ ವಿತರಣೆ
- ಮುಖ್ಯಮಂತ್ರಿ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4ರಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ₹500 ಕೋಟಿ ಅನುದಾನ ಮಂಜೂರು
- ಹಾಸನ, ರಾಯಚೂರು, ಬೀದರ್ ಮಹಾನಗರ ಪಾಲಿಕೆಗಳಿಗೆ ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0 ಅಡಿ ₹200 ಕೋಟಿ ಅನುದಾನ
- ನಗರ ಪ್ರದೇಶಗಳ ಆಯ್ದ ಜಾಗಗಳಲ್ಲಿ ಸ್ಥಳೀಯ ಸಸ್ಯಗಳನ್ನು ನೆಟ್ಟು ನೈಸರ್ಗಿಕ ಹಸಿರು ಪ್ರದೇಶಗಳನ್ನಾಗಿಸಲು 100 ಮಿಯಾವಾಕಿ ಪಾರ್ಕ್ ನಿರ್ಮಾಣ
- ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಾರ್ವಜನಿಕರ ಮತ್ತು ಶಾಲಾ ವಿದ್ಯಾರ್ಥಿಗಳ ಸುರಕ್ಷತೆಗಾಗಿ 300 ಕಾಲು ಸಂಕ ನಿರ್ಮಾಣ
- ಬಂದರುಗಳು ಮತ್ತು ಸರಕು ಸಾಗಾಣಿಕೆ ವಲಯದ ಅಭಿವೃದ್ಧಿಗಾಗಿ ಸಮಗ್ರ ಮಲ್ಟಿಮೋಡಲ್ ಲಾಜಿಸ್ಟಿಕ್ಸ್ ನೀತಿ ರೂಪಿಸಲಾಗುವುದು
- ತದಡಿ ಪ್ರದೇಶದಲ್ಲಿ ಪರಿಸರಸ್ನೇಹಿ ವಸತಿ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರಗಳು, ಪರಿಸರ ಸ್ನೇಹಿ ವಾಕಿಂಗ್ ಕಾರಿಡಾರ್ ಮತ್ತು ಮೂಲಸೌಕರ್ಯಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ

## ಯಾವ ಇಲಾಖೆಗೆ ಎಷ್ಟು ಹಂಚಿಕೆ? (ಕೋಟಿಗಳಲ್ಲಿ)

| ಇಲಾಖೆ | 2025-26 | 2026-27 |
|---|---|---|
| ನಗರಾಭಿವೃದ್ಧಿ ಮತ್ತು ವಸತಿ | ₹21,405 | ₹22,203 |
| ಲೋಕೋಪಯೋಗಿ ಇಲಾಖೆ | ₹11,841 | ₹11,424 |

**₹500 ಕೋಟಿ** ಮಂಡ್ಯ ಜಿಲ್ಲೆಯಲ್ಲಿ ಅತ್ಯಾಧುನಿಕ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪನೆಗೆ ಅನುದಾನ

**₹30 ಕೋಟಿ** ಕೆಐಎಡಿಬಿ ಏರೊಸ್ಪೇಸ್ ಪಾರ್ಕ್‌ನಲ್ಲಿ ಏರೊಸ್ಪೇಸ್ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪನೆಗೆ ಅನುದಾನ

**₹2,000 ಕೋಟಿ** ಸೇತುವೆ ನಿರ್ಮಾಣ, ದುರಸ್ತಿ, ಕಾಲುಸಂಕಗಳ ನಿರ್ಮಾಣಕ್ಕೆ ಅನುದಾನ

## ಸಾವಿರ ಎಕರೆಯಲ್ಲಿ ಕೈಗಾರಿಕಾ ಪಾರ್ಕ್

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ 'ವಾಹನ ಸ್ಕ್ರ್ಯಾಪಿಂಗ್ ಸೌಲಭ್ಯ ಘಟಕ' ಸ್ಥಾಪನೆ
- ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 1,000 ಎಕರೆ ಪ್ರದೇಶದಲ್ಲಿ 'ಕೈಗಾರಿಕಾ ಪಾರ್ಕ್ ಅಭಿವೃದ್ಧಿ'
- ಬೆಂಗಳೂರಿನ ಮಲ್ಲೇಶ್ವರದ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ನ ಆವರಣದಲ್ಲಿ ಪಿಪಿಪಿ ಮಾದರಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮಾವೇಶ ಕೇಂದ್ರ ಸಂಕೀರ್ಣ ನಿರ್ಮಾಣ
- ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್‌ಗೆ ₹3ರಂತೆ ವಿದ್ಯುತ್ ಸಹಾಯಧನ
- ಕಲಬುರಗಿ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ಪಿ.ಎಂ ಮಿತ್ರ ಮೆಗಾ ಜವಳಿ ಪಾರ್ಕ್‌ನಲ್ಲಿ ಮೂಲಸೌಕರ್ಯ ಒದಗಿಸಲು ₹390 ಕೋಟಿ ಅನುದಾನ ಮೀಸಲು

### ನೇಕಾರರಿಗೆ ಸಿಕ್ಕಿದ್ದು...

- ನೇಕಾರರ ಸಮ್ಮಾನ್ ಯೋಜನೆಯ ಅಡಿ ಒಟ್ಟು 1.30 ಲಕ್ಷ ನೇಕಾರರಿಗೆ ವಾರ್ಷಿಕ ₹5 ಸಾವಿರ ಆರ್ಥಿಕ ನೆರವು
- ವಿದ್ಯುತ್ ಸಹಾಯಧನ ಯೋಜನೆಯಡಿ 1ರಿಂದ 10 ಎಚ್.ಪಿ.ವರೆಗೆ ಉಚಿತ, 10ರಿಂದ 20 ಎಚ್.ಪಿ.ವರೆಗಿನ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸಲು ನಿರ್ಧಾರ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 20 ಎಚ್.ಪಿ ಯಿಂದ 200 ಎಚ್.ಪಿ ವರೆಗಿನ ವಿದ್ಯುತ್ ಮಗ್ಗ ನೇಕಾರರಿಗೆ ಪ್ರತಿ ಯೂನಿಟ್‌ಗೆ ಶೇ 50ರಷ್ಟು ಸಹಾಯಧನ ನೀಡುವ ಯೋಜನೆ ಜಾರಿ
- ನೇಕಾರರ ಏಳಿಗೆಗೆ ₹225 ಕೋಟಿ ಅನುದಾನ ಮೀಸಲು

# ಕೈಗಾರಿಕಾ ಕ್ಷೇತ್ರ ಪ್ರಗತಿಗೆ ರಹದಾರಿ

## 9 ರೈಲ್ವೆ ಯೋಜನೆಗಳಿಗೆ ₹600 ಕೋಟಿ ಹಂಚಿಕೆ • ಎಡಿಬಿ ನೆರವಿನೊಂದಿಗೆ ₹5,736 ಕೋಟಿ ವೆಚ್ಚದಲ್ಲಿ 875 ಕಿ.ಮೀ. ರಸ್ತೆ ಅಭಿವೃದ್ಧಿ

## ಪ್ರತಿಕ್ರಿಯೆಗಳು



ಅಭಿವೃದ್ಧಿ ವಿರೋಧಿ ಬಜೆಟ್‌ನಲ್ಲಿ, ಯುವ ಜನರತ್ತ ನಿರ್ಲಕ್ಷ್ಯ ತೋರಲಾಗಿದೆ. 'ಯುವ ನಿಧಿ'ಗೆ ಈ ಬಾರಿ ಅನುದಾನ ಮೀಸಲಿಟ್ಟಿಲ್ಲ. ಇದು ಗ್ಯಾರಂಟಿ ಯೋಜನೆ ಕೈ ಬಿಡುವ ಮುನ್ಸೂಚನೆ. ರಾಜ್ಯವನ್ನು ಆರ್ಥಿಕ ಪ್ರಗತಿಯತ್ತ ಒಯ್ಯುವ ಬದಲು ಸಂಕಷ್ಟಕ್ಕೆ ದೂಡಲಾಗಿದೆ

**ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ



ರಾಜ್ಯದ ಒಟ್ಟು ಸಾಲದ ಹೊರೆ ಈಗಾಗಲೇ ₹8.24 ಲಕ್ಷ ಕೋಟಿ ದಾಟಿದ್ದು, ಪ್ರತಿ ಕನ್ನಡಿಗನ ಮೇಲೂ ಸರಾಸರಿ ₹1.25 ಲಕ್ಷ ಸಾಲದ ಭಾರವನ್ನು ರಾಜ್ಯ ಸರ್ಕಾರ ಹೊರಿಸಿದೆ. ಇದು ಖಾಲಿ ಮಾತುಗಳ ಬಜೆಟ್

**ಎನ್.ರವಿಕುಮಾರ್,** ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ



ಬಜೆಟ್‌ನಲ್ಲಿ 'ಗ್ಯಾರಂಟಿ'ಗೆ ನೀಡಿರುವ ಅನುದಾನ ಬಿಟ್ಟರೆ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಹೊಸ ಯೋಜನೆಗಳು ಇಲ್ಲ. ಹಿಂದಿಗಿಂತ ಹೆಚ್ಚು ಸಾಲ ಮಾಡಿರುವುದೇ ಸರ್ಕಾರದ ಸಾಧನೆ

**ಸಿ.ಬಿ.ಸುರೇಶ್ ಬಾಬು,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ಹುಬ್ಬಳ್ಳಿಯಲ್ಲಿ ಹಜ್ ಭವನ, ಸಂತ ಶಿಶುನಾಳ ಶರೀಫ ವಸತಿಶಾಲೆ ನಿರ್ಮಾಣ ಸೇರಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಸುವ ಆಶಯ ಹೊಂದಿದೆ

**ಸಲೀಂ ಅಹ್ಮದ್,** ವಿಧಾನಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ.

• ಎ.ಎಂ. ಸುರೇಶ

ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ಗಮನದಲ್ಲಿ ಇಟ್ಟುಕೊಂಡು ರಸ್ತೆಗಳ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ ಹಾಗೂ ನಾಲ್ಕೂ ಕಂದಾಯ ವಲಯಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

ರಾಜಧಾನಿ ಬೆಂಗಳೂರು ಅಷ್ಟೇ ಅಲ್ಲದೆ, ರಾಜ್ಯದ ಎಲ್ಲ ಭಾಗಗಳು ಪ್ರಗತಿಯಾಗಬೇಕು ಎಂಬ ಉದ್ದೇಶದಿಂದ ಬೆಂಗಳೂರಿನ ಆಚೆಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಆದ್ಯತೆ ನೀಡಲಾಗಿದೆ. ಮೈಸೂರು, ಮಂಡ್ಯ, ಧಾರವಾಡ, ಬೆಳಗಾವಿ, ವಿಜಯಪುರ ಹಾಗೂ ಕಲಬುರಗಿ ಭಾಗದಲ್ಲಿ ಬೃಹತ್ ಕೈಗಾರಿಕಾ ಯೋಜನೆಗಳನ್ನು ಘೋಷಿಸಲಾಗಿದೆ.

ಲೋಕೋಪಯೋಗಿ, ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವರು ಉತ್ತರ ಕರ್ನಾಟಕ ಭಾಗದವರೇ ಆಗಿದ್ದು, ಸಹಜವಾಗಿಯೇ ಆ ಭಾಗಕ್ಕೆ ಹೆಚ್ಚಿನ ಒತ್ತು ನೀಡಿರುವುದು ಎದ್ದು ಕಾಣುತ್ತಿದೆ. ಆದರೆ, ಇದು ಕೇವಲ ಘೋಷಣೆಯಾಗಿ ಉಳಿಯದೆ, ಅನುದಾನ ಬಿಡುಗಡೆ ಮಾಡಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಬದ್ಧತೆಯನ್ನು ಪ್ರದರ್ಶಿಸಬೇಕು.

ಉತ್ತರ ಕರ್ನಾಟಕ ಭಾಗದ ಪ್ರಗತಿಗೆ ಒತ್ತು ನೀಡುವ ಉದ್ದೇಶದಿಂದ ಬೆಳಗಾವಿ ಜಿಲ್ಲೆಯ ಸುಮಾರು ಒಂದು ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತದೆ. ಬೆಂಗಳೂರು-ಮುಂಬೈ ಕೈಗಾರಿಕಾ ಕಾರಿಡಾರ್ ಯೋಜನೆಯಡಿ ₹30 ಸಾವಿರ ಕೋಟಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರೊಂದಿಗೆ 75 ಸಾವಿರ ಉದ್ಯೋಗಾವಕಾಶ ಕಲ್ಪಿಸಲು 'ಧಾರವಾಡ ಕೈಗಾರಿಕಾ ನೋಡ್' ಆರಂಭಿಸಲಾಗುತ್ತದೆ. ಸಾವಿರ ಎಕರೆ ಸ್ವಾಧೀನಕ್ಕೆ ಒಟ್ಟು ₹600 ಕೋಟಿ ಅಗತ್ಯವಿದ್ದು, ಈ ವರ್ಷ ₹200 ಕೋಟಿ ನೀಡಲಾಗಿದೆ.

ಮೈಸೂರಿನಲ್ಲಿ ಏರೊಸ್ಪೇಸ್ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಮೈಸೂರು ವಿಮಾನ ನಿಲ್ದಾಣದ ಹತ್ತಿರ ಕೆಐಎಡಿಬಿ ವತಿಯಿಂದ ಏರೊಸ್ಪೇಸ್ ಪಾರ್ಕ್ ಸ್ಥಾಪಿಸಲಾಗುತ್ತದೆ. ಇದಲ್ಲದೆ,



ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬಜೆಟ್ ಮಂಡನೆ ಮಾಡಿದರು

ಮಂಡ್ಯದಲ್ಲಿ ₹500 ಕೋಟಿ ವೆಚ್ಚದಲ್ಲಿ 100 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕವಾದ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ. ಹಳೆ ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗದ ಬೆಳವಣಿಗೆ ದೃಷ್ಟಿಯಿಂದ ಈ ಹೊಸ ಯೋಜನೆಗಳ ಘೋಷಣೆ ಮಹತ್ವದ ಹೆಜ್ಜೆಯಾಗಿದೆ.

**ಮೂಲಸೌಕರ್ಯ:** ಕೇಂದ್ರ ಮತ್ತು ರಾಜ್ಯ ಸರ್ಕಾರ 50:50 ಅನುಪಾತದಡಿ 9 ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಆ ಯೋಜನೆಗಳಿಗೆ ರಾಜ್ಯ ಸರ್ಕಾರ ಒಟ್ಟಾರೆ ₹9,847 ಕೋಟಿ ಭರಿಸಬೇಕಾಗಿದೆ. ಆದರೆ, ಈ ಸಲ ಕೇವಲ ₹600 ಕೋಟಿ ನೀಡಲಾಗಿದೆ. ಕಳೆದ ಬಾರಿಯೂ ಇಷ್ಟೇ ಹಣ ನೀಡಲಾಗಿತ್ತು.

ರಾಜ್ಯದಲ್ಲಿ ಹಲವು ವರ್ಷಗಳಿಂದ ರೈಲ್ವೆ ಯೋಜನೆಗಳ ಕಾಮಗಾರಿ ಮಂದಗತಿಯಲ್ಲಿ ಸಾಗಿದ್ದು, ಇನ್ನಷ್ಟು ಅನುದಾನ ನೀಡುವ ಮೂಲಕ ಈ ಯೋಜನೆಗಳ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸುವ ಅಗತ್ಯವಿದೆ.

ಗಿಣಿಗೇರಾ-ರಾಯಚೂರು ಹಾಗೂ ತುಮಕೂರು-ರಾಯದುರ್ಗ ರೈಲು ಮಾರ್ಗದ ಕಾಮಗಾರಿಗಳು ಹಾಗೂ ಭೂಸ್ವಾಧೀನ ವೆಚ್ಚವನ್ನು ಕೇಂದ್ರ, ರಾಜ್ಯ ಸರ್ಕಾರ 50:50 ಅನುಪಾತದಡಿ ಭರಿಸಲಿವೆ. ಆದರೆ, ಉಳಿದ ಏಳು ಯೋಜನೆಗಳ ಭೂ ಸ್ವಾಧೀನ ವೆಚ್ಚವನ್ನು ಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಹೀಗಾಗಿ ಈ ಯೋಜನೆಗಳಿಗೆ ದೊಡ್ಡಮಟ್ಟದಲ್ಲಿ ಅನುದಾನದ ಅಗತ್ಯವಿದೆ.

ಚಿಕ್ಕಮಗಳೂರು-ಬೇಲೂರು, ಕುಡಚಿ-ಬಾಗಲಕೋಟೆ, ಗದಗ-ವಾಡಿ, ತುಮಕೂರು-ದಾವಣಗೆರೆ, ಬೇಲೂರು-ಹಾಸನ, ಶಿವಮೊಗ್ಗ- ಶಿಕಾರಿಪುರ- ರಾಣೆಬೆನ್ನೂರು, ಧಾರವಾಡ- ಕಿತ್ತೂರು- ಬೆಳಗಾವಿ ಮಾರ್ಗದ ರೈಲ್ವೆ ಯೋಜನೆಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ರಾಜ್ಯದ ಹಲವು ಪ್ರದೇಶಗಳಿಗೆ ಸುಗಮ ಸಾರಿಗೆ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಈ ಯೋಜನೆಗಳು ಮಹತ್ವದ್ದಾಗಿದ್ದು, ಹೆಚ್ಚಿನ ಅನುದಾನ ನೀಡುವ ಮೂಲಕ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಆದ್ಯತೆ ನೀಡಬೇಕಾಗಿದೆ.

## 2,200 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿ

ಲೋಕೋಪಯೋಗಿ ಇಲಾಖೆಯಲ್ಲಿ 2,200 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಹಾಗೂ 3,500 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳನ್ನು ₹5,776 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಇದಲ್ಲದೆ ಎಡಿಬಿ ನೆರವಿನೊಂದಿಗೆ ಒಟ್ಟು ₹5,736 ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ 875 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಘಟ್ಟ-2 ಅಡಿ 1,846 ಕಿ.ಮೀ. ಉದ್ದದ ರಸ್ತೆಗಳನ್ನು ₹5,000 ಕೋಟಿ ವೆಚ್ಚದಲ್ಲಿ ಹಾಗೂ 135 ಕಿ.ಮೀ. ಉದ್ದದ ವಾಗ್ದಾರಿ-ರಿಬ್ಬನ್‌ಪಲ್ಲಿ ರಸ್ತೆ ವಿಸ್ತರಣೆ, ಅಭಿವೃದ್ಧಿ ಕಾಮಗಾರಿಯನ್ನು ಅಂದಾಜು ₹400 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಆದರೆ, ಕಳೆದ ಬಾರಿಗೆ ಹೋಲಿಸಿದರೆ ಈ ಸಲ ಲೋಕೋಪಯೋಗಿ ಇಲಾಖೆಗೆ ₹417 ಕೋಟಿ ಅನುದಾನ ಕಡಿಮೆಯಾಗಿದೆ. ಹೀಗಾಗಿ ಕಾಮಗಾರಿವಾರು, ಕ್ಷೇತ್ರವಾರು ಅನುದಾನ ಹಂಚಿಕೆ ಮಾಡುವಾಗ ಸ್ವಲ್ಪ ಕಡಿಮೆಯಾಗಲಿದೆ. ಅಲ್ಲದೆ ಹೊಸ ಯೋಜನೆಗಳನ್ನು ಆರಂಭಿಸಲು ಅನುದಾನದ ಕೊರತೆಯಾಗಬಹುದು.

ವಿವಿಧ ಇಲಾಖೆಗಳ ಅಡಿ ನಿರ್ಮಿಸುವ ಕಟ್ಟಡಗಳ ವಿನ್ಯಾಸ ಮತ್ತು ವೆಚ್ಚದಲ್ಲಿ ಏಕರೂಪತೆ ತರುವ ಉದ್ದೇಶದಿಂದ ತಜ್ಞರ ಸಮಿತಿ ರಚಿಸಿ, ಆ ಸಮಿತಿಯ ಶಿಫಾರಸಿನಂತೆ ಕಟ್ಟಡಗಳ ವಿನ್ಯಾಸ, ಅಂದಾಜುಗಳನ್ನು ಅಂತಿಮಗೊಳಿಸಲು ತೀರ್ಮಾನಿಸಲಾಗಿದೆ. ಇದು ಒಳ್ಳೆಯ ಬೆಳವಣಿಗೆ.

Publication Date 07/03/2026

# ಲೋಕಭವನ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣ

- ರಾಜ್ಯಪಾಲರ ಕಚೇರಿ ಆವರಣದಲ್ಲಿ ₹27 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ, ಅಧಿಕಾರಿಗಳ ವಸತಿ ಗೃಹ, ಆಡಳಿತಾತ್ಮಕ ಬ್ಲಾಕ್ ನಿರ್ಮಾಣ
- ರಾಜ್ಯದಲ್ಲಿ ಏಳು ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ₹200 ಕೋಟಿ ಅನುದಾನ
- ವಿಜಯಪುರ, ಶಿವಮೊಗ್ಗ ವಿಮಾನ ನಿಲ್ದಾಣಗಳ ಆವರಣದಲ್ಲಿ ಕ್ರಮವಾಗಿ ವಿಮಾನ ತರಬೇತಿ ಶಾಲೆ ಹಾಗೂ ಅಸೆಂಬ್ಲಿ ಆಫ್ ಏರ್‌ಕ್ರಾಫ್ಟ್ ಚಟುವಟಿಕೆಗಳು ಪಿಪಿಪಿ ಮಾದರಿಯಲ್ಲಿ ಆರಂಭ
- ಮಳವಳ್ಳಿ–ಬಾವಲಿ (ಕೇರಳ ಗಡಿ) (ಬನ್ನೂರು, ಎಚ್.ಡಿ.ಕೋಟೆ)–141 ಕಿ.ಮೀ. ರಸ್ತೆ ಅಭಿವೃದ್ಧಿ



- ಮಡಿಕೇರಿ–ದೋಣಿಗಲ್ (ಎನ್‌ಎಚ್ 75) (ಮಾದಪುರ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮಾರ್ಗ)–95 ಕಿ.ಮೀ. ರಸ್ತೆ ಅಭಿವೃದ್ಧಿ
- ಶ್ರೀರಂಗಪಟ್ಟಣ (ಪಾಂಡವಪುರ ರೈಲು ನಿಲ್ದಾಣ)–ಬಿ.ಎಂ.ರೋಡ್ ಜಂಕ್ಷನ್ ಚನ್ನರಾಯಪಟ್ಟಣ (ಕೆ. ಆರ್.ಪೇಟೆ ಮಾರ್ಗ)–63 ಕಿ.ಮೀ. ರಸ್ತೆ ಅಭಿವೃದ್ಧಿ
- ಸಂಕೇಶ್ವರ–ಲೋಕಾಪುರ (ಕಮತ್‌ನೂರು ಕ್ರಾಸ್–ಹುಕ್ಕೇರಿ–ಘಟಪ್ರಭ–ಅರಭಾವಿಮಠ–ವಡರಟ್ಟಿ–ಮಸಗುಪ್ಪಿ–ತಿಗಡಿ–ಯಾದವಾಡ ಮಾರ್ಗ)–100 ಕಿ.ಮೀ.

Publication Date
07/03/2026

Presented by ಪ್ರಜಾವಾಣಿ

# ಸಿ.ಎಂ ಸೌರ ಕೃಷಿ ಯೋಜನೆ

'ಮುಖ್ಯಮಂತ್ರಿ ಸೌರ ಕೃಷಿ' ಯೋಜನೆಯಡಿ ₹10,500 ಕೋಟಿ ವೆಚ್ಚದಲ್ಲಿ ಮೂರು ಸಾವಿರ ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರಗಳನ್ನು ಆರಂಭಿಸುವುದಾಗಿ ಮುಖ್ಯಮಂತ್ರಿ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಕುಸುಮ್- ಸಿ ಮಾದರಿಯಲ್ಲೇ ಮುಖ್ಯ ಮಂತ್ರಿ ಸೌರ ಕೃಷಿ ಯೋಜನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಉಪ ಕೇಂದ್ರಗಳಲ್ಲಿ ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ಕುಸುಮ್-ಸಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ 2,777 ಮೆಗಾವಾಟ್ ಸಾಮರ್ಥ್ಯದ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಗೃಹಜ್ಯೋತಿ ಯೋಜನೆಯಡಿ 1.74 ಕೋಟಿ ಗ್ರಾಹಕರು ನೋಂದಾಯಿಸಿಕೊಂಡಿದ್ದು, ಅವರಿಗೆ ಉಚಿತವಾಗಿ ವಿದ್ಯುತ್ ನೀಡಲು ₹10,578 ಕೋಟಿ ಅನುದಾನ ನೀಡಲಾಗಿದೆ.

ವಿದ್ಯುತ್ ಪ್ರಸರಣ ಜಾಲವನ್ನು ಬಲ ಪಡಿಸುವ ನಿಟ್ಟಿನಲ್ಲಿ 100 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಇದಲ್ಲದೆ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆಯಡಿ ₹3,400 ಕೋಟಿ ವೆಚ್ಚದಲ್ಲಿ ಹುಲಿಯೂರು, ಪಾವಗಡ, ಕುಷ್ಟಗಿಯಲ್ಲಿ ಉಪ ಕೇಂದ್ರಗಳನ್ನು ನಿರ್ಮಿಸಲಾಗುತ್ತದೆ.

ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸುವ ನಿಟ್ಟಿನಲ್ಲಿ ಎಸ್ಕಾಂಗಳ ಸಹಯೋಗ ದಲ್ಲಿ ₹777 ಕೋಟಿ ವೆಚ್ಚದಲ್ಲಿ 1,250 ಚಾರ್ಜಿಂಗ್ ಕೇಂದ್ರ ಗಳನ್ನು ಪಿಎಂ ಇ-ಡ್ರೈವ್ ಯೋಜನೆಯಡಿ ಸ್ಥಾಪಿಸ ಲಾಗುತ್ತದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದ ನವೋದ್ಯಮಗಳನ್ನು ಉತ್ತೇಜಿಸಲು ಬೆಂಗಳೂರಿನ ಐಐಎಂ, ಐಐಎಸ್‌ಸಿ, ಆಸ್ಟ್ರೇಲಿಯಾದ 'ಯೂನಿವರ್ಸಿಟಿ ಆಫ್ ನ್ಯೂ ಸೌತ್ ವೇಲ್ಸ್' ಸಹಯೋಗದಲ್ಲಿ 'ಇನ್‌ಕ್ಯು ಬೇಷನ್ ಸೆಂಟರ್' ಆರಂಭಿಸ ಲಾಗುತ್ತದೆ. 36 ಲಕ್ಷ ನೀರಾವರಿ ಪಂಪ್‌ಸೆಟ್ ಗಳಿಗೆ ಉಚಿತವಾಗಿ ವಿದ್ಯುತ್ ನೀಡಲು ಈ ವರ್ಷ ₹19,290 ಕೋಟಿ ನೀಡಲಾಗುತ್ತದೆ.

Publication Date
07/03/2026

Presented by ಪ್ರಜಾವಾಣಿ

ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ–ಆಸ್ತಿ ತಂತ್ರಾಂಶ ಸಂಯೋಜನೆ

# ಮೂರು ಲಕ್ಷ ಮನೆ ನಿರ್ಮಾಣ ಗುರಿ

ಪ್ರಸಕ್ತ ಸಾಲಿನಲ್ಲಿ ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಹಿಂದಿನ ಸರ್ಕಾರ ಅನುದಾನ ನೀಡದೇ ಮಂಜೂರಾತಿ ನೀಡಿರುವ 4.90 ಲಕ್ಷ ಮನೆಗಳನ್ನು ಪೂರ್ಣ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಜೆಟ್‌ನಲ್ಲಿ ತಿಳಿಸಿದ್ದಾರೆ.



ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಬಿಎಲ್‌ಸಿ ಆಧಾರಿತ ಒಂದು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಆಯ್ಕೆಯಾಗುವ ಫಲಾನುಭವಿಗಳಿಗೆ ನೀಡುವ ಸಹಾಯಧನ ವನ್ನು ₹1.20 ಲಕ್ಷದಿಂದ ₹2 ಲಕ್ಷಕ್ಕೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ₹2 ಲಕ್ಷದಿಂದ ₹3 ಲಕ್ಷಕ್ಕೆ ಹೆಚ್ಚಿಸಲಾಗುವುದು. ವಸತಿ ಯೋಜನೆಗಳಡಿ ಅರ್ಹ ಫಲಾನುಭವಿಗಳನ್ನು ಇನ್ನು ಮುಂದೆ ಆನ್‌ಲೈನ್ ಲಾಟರಿ ಮೂಲಕ ಗ್ರಾಮಸಭೆಗಳಲ್ಲಿ ಆಯ್ಕೆಗೊಳಿಸಲಾಗುತ್ತದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆ ಯಡಿ (ಎ.ಎಚ್.ಪಿ) 1.20 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿದೆ.

ರಾಜ್ಯದ ನಗರಗಳ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಒಳಚರಂಡಿ ಕಾಮಗಾರಿಗಳನ್ನು ಅಣ್ಣಿಗೇರಿ, ಗುಂಡ್ಲುಪೇಟೆ, ನೆಲಮಂಗಲ, ದೊಡ್ಡ ಬಳ್ಳಾಪುರ, ಭದ್ರಾವತಿ, ದೇವನಹಳ್ಳಿ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಕೈಗೊಳ್ಳಲಾಗುವುದು. ಜತೆಗೆ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯು ಮೈಕ್ರೊ ಅನುದಾನದ ನೆರವಿನೊಂದಿಗೆ ಆಳಂದ, ಅಫ್ಜಲ್‌ಪುರ, ಚಿತ್ತಾಪುರ, ಯಾದಗಿರಿ, ಹರಪನಹಳ್ಳಿ, ಜೇವರ್ಗಿ ಹಾಗೂ ಸುರಪುರ ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ–ಆಸ್ತಿ ತಂತ್ರಾಂಶವನ್ನು ಸಂಯೋಜನೆ ಗೊಳಿಸಲಾಗುವುದು. ತೆರಿಗೆ ಬೇಡಿಕೆ ಮತ್ತು ಬಾಕಿ ವಿವರಗಳನ್ನು ಸ್ವಯಂ ಚಾಲಿತವಾಗಿ ಸೃಜಿಸುವ ಸಮಗ್ರ ಆಸ್ತಿ ತೆರಿಗೆ ವ್ಯವಸ್ಥೆ ಜಾರಿಗೊಳಿಸಲಾಗುವುದು. ಅಲ್ಲದೇ ಉನ್ನತ ವ್ಯಾಸಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗೆ ಧಾರವಾಡದಲ್ಲಿ ನಾಲ್ಕು ಹಾಗೂ ಬೆಂಗಳೂರಿನಲ್ಲಿ ಎರಡು 'ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್' ಪ್ರಾರಂಭಿಸಲಾಗುವುದು.

Publication Date
07/03/2026

Presented by ಪ್ರಜಾವಾಣಿ

# ಈ ಬಾರಿಯೂ 'ಅಹಿಂದ' ಪಥ...

## ಆದಿವಾಸಿ ಅಭಿವೃದ್ಧಿ ನಿಗಮ, ಬೌದ್ಧ ಅಭಿವೃದ್ಧಿ ನಿಗಮ, ಎಸ್‌ಟಿ ಆಯೋಗ, ಅಲ್ಪಸಂಖ್ಯಾತ ಮಹಿಳಾ ಸಹಕಾರ ಸಂಘ ಘೋಷಣೆ

• ರಾಜೇಶ್ ರೈ ಚಟ್ಲ

ಬೆನ್ನಿಗೆ ನಿಂತ ಸಮುದಾಯ 'ಅಹಿಂದ'ವನ್ನು (ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿಯೂ 'ಕೈ'ಬಿಟ್ಟಿಲ್ಲ. ಸಾಕಷ್ಟು ಯೋಜನೆ, ಭರಪೂರ ಕೊಡುಗೆಗಳ ಮೂಲಕ ದಲಿತ, ಶೋಷಿತ ಪರ ಬದ್ಧತೆ ಮುಂದುವರಿಸಿದ್ದಾರೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳುವ ತಂತ್ರಗಾರಿಕೆಯೂ ಈ 'ಹಂಚಿಕೆ' ಸೂತ್ರದಲ್ಲಿ ಇದ್ದಂತಿದೆ.

ಎರಡನೇ ಬಾರಿಗೆ ಆಡಳಿತ ಚುಕ್ಕಾಣಿ ಹಿಡಿದು ಸಾಗಿದ ಮೂರು ವರ್ಷಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಕಲ್ಯಾಣದ ಗುರಿ ನೆಟ್ಟು ಶಿಕ್ಷಣ, ಮಾನವ ಸಂಪನ್ಮೂಲ, ಕೌಶಲ, ಜೀವನೋಪಾಯ, ಮೂಲಸೌಕರ್ಯ ಹೀಗೆ ನಾನಾ ವಲಯಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರು. ಆ ಪಥದಲ್ಲಿಯೇ ಸಾಗಿದ್ದಾರೆ.

ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಅಡಿ 2025-26ನೇ ಸಾಲಿನಲ್ಲಿ ₹ 42,018 ಕೋಟಿ ಮೀಸಲಿಟ್ಟಿದ್ದ ಮುಖ್ಯಮಂತ್ರಿ, ಈ ಬಾರಿ ಮೊತ್ತವನ್ನು ₹ 44,632 ಕೋಟಿಗೆ ಹಿಗ್ಗಿಸಿದ್ದಾರೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2013-14ರಿಂದ 2018-19ರ ಅವಧಿಯಲ್ಲಿ ನೀಡಲಾದ ಸಾಲಗಳ ಮೇಲಿನ ಬಡ್ಡಿ ಮನ್ನಾಗೆ ಒಟಿಸ್ ಯೋಜನೆಗೆ ಸಚಿವ ಸಂಪುಟ ಇತ್ತೀಚೆಗೆ ಅನುಮೋದನೆ ನೀಡಿತ್ತು. ಅಲ್ಪಸಂಖ್ಯಾತರ ಬಡ್ಡಿ ಮನ್ನಾ ಮಾಡಿ ಸರ್ಕಾರ ತುಷ್ಟೀಕರಣದ ರಾಜಕಾರಣ ನಡೆಸುತ್ತಿದೆ ಎಂದು ವಿರೋಧ ಪಕ್ಷಗಳು ಕಿಡಿಕಾರಿದ್ದವು. ಈ ಆರೋಪಕ್ಕೆ ಉತ್ತರ ನೀಡಿರುವ ಸಿದ್ದರಾಮಯ್ಯ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಡಿ ಇರುವ ನಿಗಮಗಳಿಂದ 2021ರ ಮಾರ್ಚ್ 31ರವರೆಗೆ ಪಡೆದ ಸಾಲದ ಅಸಲು ಪಾವತಿ ಮಾಡುವವರಿಗೆ ಬಡ್ಡಿ ಮನ್ನಾ ಮಾಡಿ ಒಟಿಎಸ್ ಜಾರಿಗೆ ತರುವುದಾಗಿ ಪ್ರಕಟಿಸಿದ್ದಾರೆ. ಈ ನಿಗಮಗಳಲ್ಲಿ ಮೈಕ್ರೊ ಕ್ರೆಡಿಟ್ ಪ್ರೇರಣಾ ಯೋಜನೆಯಡಿ ಸಾಲ ಮತ್ತು ಸಹಾಯಧನ ಪಡೆದ ಮಹಿಳಾ ಸ್ವ-ಸಹಾಯ ಸಂಘಗಳು ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದ ಸಂಘಗಳಿಗೆ ಎರಡನೇ ಬಾರಿಗೆ ಸಾಲ ಮತ್ತು ಸಹಾಯಧನ ಮಂಜೂರು ಮಾಡುವುದಾಗಿ ಹೇಳಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಹಂಚಿಕೆಯಲ್ಲಿ ಅಲೆಮಾರಿಗಳು, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಜಾತಿಗಳಿಗೆ ಅನ್ಯಾಯವಾಗಿದೆ ಎಂಬ ಕೂಗಿಗೆ ಸ್ಪಂದಿಸಿರುವ ಸಿದ್ದರಾಮಯ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ₹ 100 ಕೋಟಿ ನೀಡುವುದಾಗಿ ಹೇಳಿದ್ದಾರೆ. ಈ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ



ಅಭಿವೃದ್ಧಿಗಾಗಿ ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ನಾಲ್ಕು ವಿಶೇಷ ವಸತಿ ಶಾಲೆ ಆರಂಭಿಸಲಾಗುವುದು ಎಂದಿದ್ದಾರೆ.

'ಅಹಿಂದ' ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಆಯಾ ಇಲಾಖೆಗಳಡಿ ಹಲವು ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ವಸತಿ ಶಾಲೆಗಳಿಲ್ಲದ ಹೋಬಳಿಗಳಲ್ಲಿ ಹೊಸ ವಸತಿ ಶಾಲೆ, ಕ್ರೈಸ್ ವಸತಿ ಶಾಲೆಗಳಿಗೆ ಮೂಲಸೌಕರ್ಯ, ಸ್ವಂತ ಕಟ್ಟಡ, ವಿದ್ಯಾರ್ಥಿನಿಲಯಗಳ ನಿರ್ವಹಣಾ ವೆಚ್ಚದ ದರ ಪರಿಷ್ಕರಣೆಗೆ ಹೆಚ್ಚುವರಿಯಾಗಿ ಹಣ, ಆರ್‌ಟಿಇ ಅಡಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶ ಪಡೆದ ಶಾಲೆಗಳಲ್ಲಿಯೇ 9 ಮತ್ತು 10ನೇ ತರಗತಿಗಳಲ್ಲಿ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸಲು ಅನುದಾನ ಒದಗಿಸುವುದಾಗಿ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಗಳ ಅಡಿಯಲ್ಲಿ ಬರುವ ನಿಗಮಗಳು ಗಂಗಾ ಕಲ್ಯಾಣ ಯೋಜನೆಯಡಿ ಪ್ರತಿ ಕೊಳವೆ ಬಾವಿಗಳ ವಿದ್ಯುದೀಕರಣಕ್ಕಾಗಿ ಪಾವತಿಸುವ ಮೊತ್ತವನ್ನು ₹75 ಸಾವಿರದಿಂದ 1.50 ಲಕ್ಷಕ್ಕೆ ಹೆಚ್ಚಿಸುವುದು, ಕೆ-ಸೆಟ್, ಜೆಇಇ, ನೀಟ್ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಲು ನಾಲ್ಕು ಕ್ರೈಸ್ ವಸತಿ ಶಾಲೆಗಳನ್ನು ಸೆಂಟರ್ ಫಾರ್ ಎಕ್ಸಲೆನ್ಸ್‌ಗಳಾಗಿ ಉನ್ನತೀಕರಿಸುವುದು, ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆಗೆ ಮೆಸ್ ಸಮಿತಿ ರಚನೆ, ಜೊತೆಗೆ, ನಿರ್ವಹಣೆಯಲ್ಲಿ ಸುಧಾರಣೆ ತರಲು ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದೂ ಪ್ರಕಟಿಸಿದ್ದಾರೆ.

ಅರಣ್ಯದಂಚಿನಲ್ಲಿರುವ ಇರುಳ, ಸೋಲಿಗ, ಜೇನುಕುರುಬ, ಕಾಡುಕುರುಬ, ಕುಡಿಯ, ಸಿದ್ದಿ ಮತ್ತು ಇತರೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದವರಿಗಾಗಿ (ಪಿವಿಟಿಜಿ) ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ, ಬೌದ್ಧ ಸಮುದಾಯಕ್ಕೆ 'ಬೌದ್ಧ ಅಭಿವೃದ್ಧಿ ನಿಗಮ', ಪರಿಶಿಷ್ಟ ಪಂಗಡದವರ ಹಕ್ಕುಗಳನ್ನು ಸಂರಕ್ಷಿಸಲು 'ಪರಿಶಿಷ್ಟ ಪಂಗಡಗಳ ಆಯೋಗ', ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಪ್ರೋತ್ಸಾಹಿಸಲು ಅಲ್ಪಸಂಖ್ಯಾತರ ಮಹಿಳಾ ಕೋ-ಆಪರೇಟಿವ್ ಸೊಸೈಟಿ ಘೋಷಿಸಲಾಗಿದೆ. ಹಿಂದುಳಿದ ವರ್ಗಗಳ ಕಾರ್ಯಕ್ರಮಗಳ ಅನುಷ್ಠಾನ, ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕುರಿತಂತೆ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದೂ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಬೆಂಗಳೂರಿನಲ್ಲಿ 100 ಸಂಖ್ಯಾಬಲದ ನಾಲ್ಕು ವಸತಿ ನಿಲಯಗಳು, ಈ ಸಮುದಾಯದ ನಿರ್ಗತಿಕ ಜನರಿಗೆ 100 ಸಂಖ್ಯಾಬಲದ ಎರಡು ಮಹಿಳಾ ವೃದ್ಧಾಶ್ರಮ, ಹಜ್ ಯಾತ್ರಿಕರು ಹಾಗೂ ಅವರ ಸಂಬಂಧಿಕರಿಗೆ ಅಗತ್ಯ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸಲು ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿ ಹಜ್ ಭವನ ನಿರ್ಮಾಣ, ಬೆಂಗಳೂರಿನ ಕೆಂಗೇರಿಯಲ್ಲಿ ಆಸಿರ್ವನಂ ಬೆನಿಡಿಕ್ಟಿನ್ ಮೊನಾಸ್ಟರಿಯ ಎರಡು ಎಕರೆ ಜಾಗದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಇತರ ಸಮಾಜ ಸುಧಾರಕರ ಪುಸ್ತಕಗಳನ್ನು ಉರ್ದು ಭಾಷೆಗೆ ಅನುವಾದ, ವಕ್ಫ್ ಸಂಸ್ಥೆಗಳಲ್ಲಿನ 31 ಮಹಿಳಾ ಪಿಯು ಕಾಲೇಜುಗಳನ್ನು ಪದವಿ ಕಾಲೇಜುಗಳಾಗಿ ಉನ್ನತೀಕರಣ ಮಾಡಲಾಗುವುದು. ವಾಣಿಜ್ಯ ಉದ್ದೇಶಕ್ಕೆ ಅತಿ ಹೆಚ್ಚು ಬೇಡಿಕೆಯಿರುವ ಪ್ರದೇಶಗಳಲ್ಲಿ ವಕ್ಫ್ ಆಸ್ತಿಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದೂ ಘೋಷಿಸಿದ್ದಾರೆ.

- ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ **35** ಹೊಸ ವಸತಿ ಶಾಲೆ (**10** ಸಿಬಿಎಸ್‌ಇ ಪಠ್ಯಕ್ರಮ, **25** ರಾಜ್ಯ ಪಠ್ಯಕ್ರಮ)
- **100** ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಉರ್ದು ಶಾಲೆಗಳನ್ನು ಕೆಪಿಎಸ್ ಮಾದರಿಯಲ್ಲಿ ₹**400** ಕೋಟಿ ವೆಚ್ಚದಲ್ಲಿ ಉನ್ನತೀಕರಣ
- ಬೌದ್ಧ ಧರ್ಮದ ಧಮ್ಮಾಚಾರಿಗಳಿಗೆ ₹**6** ಸಾವಿರ ಮಾಸಿಕ ಗೌರವಧನ
- ಅಲ್ಪಸಂಖ್ಯಾತರ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಶಿಕ್ಷಣ ಪ್ರೋತ್ಸಾಹಿಸಲು **5** ಸಾವಿರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ₹**50** ಸಾವಿರ
- ಕ್ರೈಸ್ ವಸತಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ₹ **50** ಕೋಟಿ
- **30** ಕ್ರೈಸ್ ವಸತಿ ಶಾಲೆಗಳಿಗೆ ₹ **660** ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡಗಳ ನಿರ್ಮಾಣ
- ಸಲೂನ್‌ಗಳನ್ನು ತೆರೆಯಲು ಸವಿತಾ ಸಮಾಜದವರಿಗೆ ಶೇ **4** ರಷ್ಟು ಬಡ್ಡಿದರದಲ್ಲಿ ₹**10** ಲಕ್ಷವರೆಗೆ ಸಾಲ ಮತ್ತು ಸಹಾಯಧನ

Publication Date
07/03/2026

Presented by

# ಕುಕ್ಕೆ, ಕೊಲ್ಲೂರು ಕ್ಷೇತ್ರ ಅಭಿವೃದ್ಧಿಗೆ 'ಪ್ರಾಧಿಕಾರ'

**ಕುಕ್ಕೆ** ಸುಬ್ರಹ್ಮಣ್ಯ ದೇವಾಲಯ, ಕೊಲ್ಲೂರು ಮೂಕಾಂಬಿಕಾ ದೇವಾಲಯಗಳಲ್ಲಿ ಮೂಲಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ 'ಅಭಿವೃದ್ಧಿ ಪ್ರಾಧಿಕಾರ' ರಚಿಸುವುದಾಗಿ ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ₹5 ಸಾವಿರ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ.

ಮೂರು ವರ್ಷಗಳಲ್ಲಿ 259 ಕಲ್ಯಾಣಿ ಪುನರುಜ್ಜೀವನಗೊಳಿಸಲು 'ಜಲನಿಧಿ ಕಲ್ಯಾಣಿಗಳ ಪುನಃಶ್ಚೇತನ ಯೋಜನೆ' ಜಾರಿ ಮಾಡಲು ಉದ್ದೇಶಿಸಲಾಗಿದ್ದು, ₹5 ಕೋಟಿ ಒದಗಿಸಲು ತೀರ್ಮಾನ.

**ರಾಜ್ಯದ ಛತ್ರಗಳ ನಿರ್ಮಾಣ, ಅಭಿವೃದ್ಧಿಗೆ ಕ್ರಮ**

- ವಾರಣಾಸಿಯಲ್ಲಿ ಹೊಸ ಛತ್ರ ನಿರ್ಮಾಣಕ್ಕೆ ಕ್ರಮ
- ಮಂತ್ರಾಲಯದಲ್ಲಿ ಛತ್ರದ ನವೀಕರಣ
- ಶ್ರೀಶೈಲ ಕ್ಷೇತ್ರದಲ್ಲಿ ಯಾತ್ರಿ ನಿವಾಸ ನಿರ್ಮಾಣ
- ತುಳಜಾಪುರದಲ್ಲಿ ಹೊಸ ಛತ್ರ ನಿರ್ಮಾಣ
- ಬೆಂಗಳೂರಿನ ಬಂಡಿಶೇಷಮ್ಮ ಛತ್ರದ ಜಾಗದಲ್ಲಿ ವಿದ್ಯಾರ್ಥಿನಿಲಯ ಹಾಗೂ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ನಿರ್ಮಾಣ

Publication Date
07/03/2026

Presented by ಪ್ರಜಾವಾಣಿ

# ಕಿತ್ತೂರು ಕರ್ನಾಟಕ ಅಭಿವೃದ್ಧಿಗೆ ಒತ್ತು



2026-27ನೇ ಸಾಲಿನ ರಾಜ್ಯ ಬಜೆಟ್ ಪ್ರಾದೇಶಿಕ ಸಮತೋಲನ ಮತ್ತು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಕಿತ್ತೂರು ಕರ್ನಾಟಕ ಭಾಗದ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ಘೋಷಿಸಲಾಗಿದೆ.

ವಿಜಯಪುರ ಜಿಲ್ಲೆಯ ತೊರವಿಯಲ್ಲಿ ಶೀತಲಗೃಹ ನಿರ್ಮಾಣ, ಹಾವೇರಿಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ ಮತ್ತು ಬೆಳಗಾವಿಯಲ್ಲಿ ಕುರಿ-ಮೇಕೆ ಸಾಕಣೆ ಮತ್ತು ಹೈನುಗಾರಿಕೆಗೆ ಸಹಾಯಧನ ನೀಡುವ ಯೋಜನೆಗಳು ಉಪಯುಕ್ತ ಆಗಿವೆ.

ಆಲಮಟ್ಟಿ ಅಣೆಕಟ್ಟು ಎತ್ತರಿಸುವುದು ಮತ್ತು ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಗಳು ಈ ಭಾಗದ ಕೃಷಿ ಸಾಮರ್ಥ್ಯವನ್ನು ವಿಸ್ತರಿಸಲಿವೆ. ಬೆಳಗಾವಿಯಲ್ಲಿ ಕೈಗಾರಿಕಾ ಪಾರ್ಕ್ ಸ್ಥಾಪನೆ ಮತ್ತು ಧಾರವಾಡ ಕೈಗಾರಿಕಾ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿರೀಕ್ಷೆ ಮೂಡಿಸಿವೆ.

ಧಾರವಾಡದಲ್ಲಿ ಡಿಜಿಟಲ್ ಗ್ರಂಥಾಲಯ ಮತ್ತು ಅಧ್ಯಯನ ಕೇಂದ್ರಗಳ ಸ್ಥಾಪನೆ ಹಾಗೂ ಐಐಟಿ ಧಾರವಾಡ ಸಹಯೋಗದ ಎಐ ಆಧಾರಿತ ಕಲಿಕಾ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣಾವಕಾಶ ಒದಗಿಸಲಿವೆ. ಆರೋಗ್ಯ ಕ್ಷೇತ್ರದಲ್ಲಿ ಕಾರವಾರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹುಬ್ಬಳ್ಳಿಯ ಜಯದೇವ ಹೃದ್ರೋಗ ಕೇಂದ್ರ ಜನರಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸಲಿವೆ. ಪ್ರಮುಖ ಪ್ರವಾಸಿ ತಾಣವಾದ ಗದಗ-ಕಪ್ಪತ್ತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕಿಟ್ ಅಭಿವೃದ್ಧಿಪಡಿಸುವುದು ಉತ್ತಮ ಯೋಜನೆಯಾಗಿದೆ.

ಈ ಎಲ್ಲಾ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾದಲ್ಲಿ, ಕಿತ್ತೂರು ಕರ್ನಾಟಕದ ಅಭಿವೃದ್ಧಿಗೆ ಹೊಸ ಚೈತನ್ಯ ಸಿಗಲಿದೆ.

**ಪ್ರೊ. ಸುರೇಶ ವಿ. ನಾಡಗೌಡರ**

ಲೇಖಕ: ಗದಗದ ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯ ಪ್ರಭಾರ ಕುಲಪತಿ

Publication Date
07/03/2026

Presented by ಪ್ರಜಾವಾಣಿ

## ಜಿಎಸ್‌ಟಿ ಹೊಸ ನೀತಿಯಿಂದ ₹15ಸಾವಿರ ಕೋಟಿ ನಷ್ಟ: ಸಿದ್ದರಾಮಯ್ಯ

# ‘ಕೇಂದ್ರದ ಅಸಹಕಾರವೇ ದೊಡ್ಡ ತೊಡಕು’

‘ಕೇಂದ್ರದ ಅಸಹಕಾರ, ಮಲತಾಯಿ ಧೋರಣೆ ನಡುವೆಯೂ ಬಜೆಟ್‌ನಲ್ಲಿ ವಿತ್ತೀಯ ಶಿಸ್ತು ಪಾಲಿಸಿ, ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಿಎಸ್‌ಟಿ ಜಾರಿಗೆ ಬಂದು 8 ವರ್ಷದ ನಂತರ ಪರಿಷ್ಕರಿಸಿದರು. ಶೇ 10 ರಷ್ಟಿದ್ದ ರಾಜ್ಯದ ತೆರಿಗೆ ಸಂಗ್ರಹಣೆ ಶೇ 4ಕ್ಕೆ ಇಳಿದಿದೆ. ಕೇಂದ್ರದ ಹೊಸ ನೀತಿಯಿಂದ ಕರ್ನಾಟಕಕ್ಕೆ ಸುಮಾರು ₹10 ಸಾವಿರ ಕೋಟಿ ನಷ್ಟವಾಗಿದೆ. ಮುಂದಿನ ವರ್ಷ ₹15 ಸಾವಿರ ಕೋಟಿ ನಷ್ಟವಾಗಲಿದೆ ಎಂದರು.

‘ಕೇಂದ್ರ ಮತ್ತು ರಾಜ್ಯದ ಪಾಲಿನ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಸಂಪೂರ್ಣ ಪಾಲು ನೀಡಿದರೂ




ಕೇಂದ್ರದ ಪಾಲು ಸರಿಯಾಗಿ ಸಿಗುತ್ತಿಲ್ಲ. ಉದಾಹರಣೆಗೆ ಜಲಜೀವನ್ ಮಿಷನ್‌ನ ಯೋಜನಾ ವೆಚ್ಚ ₹69,488 ಕೋಟಿ. ಕೇಂದ್ರದ ಪಾಲು ₹30,880 ಕೋಟಿ. ಈವರೆಗೆ ದೊರೆತಿರುವುದು ₹11,786 ಕೋಟಿ ಮಾತ್ರ. ರಾಜ್ಯ ಸರ್ಕಾರ ₹38,600 ಕೋಟಿ ವೆಚ್ಚ ಮಾಡಿದೆ. ₹15,500 ಕೋಟಿ ಹೆಚ್ಚುವರಿಯಾಗಿ ವೆಚ್ಚ ಮಾಡಿದ್ದೇವೆ. ಪ್ರತಿ ಯೋಜನೆಯಲ್ಲೂ ಕೇಂದ್ರ ಸರ್ಕಾರ ಇದೇ ರೀತಿ ನಡೆದುಕೊಳ್ಳುತ್ತಿದೆ. ಇದರಿಂದ ರಾಜ್ಯ ಬಜೆಟ್ ಮೇಲೆ ಪರಿಣಾಮ ಬೀರಿದೆ’ ಎಂದು ದೂರಿದರು.

‘ಕೇಂದ್ರಕ್ಕಿಂತ ರಾಜ್ಯದ ಆರ್ಥಿಕ ಬೆಳವಣಿಗೆ ಉತ್ತಮವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ₹52 ಸಾವಿರ ಕೋಟಿ ಕೊಟ್ಟಿದ್ದೇವೆ. ಇಲ್ಲಿಯವರೆಗೆ ₹1.21 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲಾಗಿದೆ. 2023-24ರಿಂದ ಮೂರು ವರ್ಷವೂ ಆರ್ಥಿಕ ಶಿಸ್ತು ಕಾಯ್ದೆಯ ಮಾನದಂಡಗಳ ಪಾಲನೆ ಮಾಡಲಾಗಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ದೇಶದ ಸಾಲ ₹165 ಲಕ್ಷ ಕೋಟಿಯಾಗಿದೆ. ಒಟ್ಟು ಸಾಲ ₹218 ಲಕ್ಷ ಕೋಟಿ ಇದೆ. ಕೇಂದ್ರವನ್ನು ಪ್ರಶ್ನಿಸದ ಬಿಜೆಪಿ ನಾಯಕರಿಗೆ ರಾಜ್ಯದ ಬಗ್ಗೆ ಟೀಕೆ ಮಾಡಲು ಯಾವ ನೈತಿಕತೆ ಇದೆ. ಸಾಲ ಮಾಡದೆ ಯಾವ ದೇಶ, ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಆದರೆ, ಸಾಲ ಮಾನದಂಡಗಳ ಮಿತಿಯಲ್ಲಿರಬೇಕು. ಅದನ್ನು ಪ್ರತಿ ಬಜೆಟ್‌ನಲ್ಲೂ ಪಾಲಿಸಲಾಗಿದೆ’ ಎಂದು ಸಮರ್ಥಿಸಿಕೊಂಡರು.

‘ವಿಬಿ ಜಿ ರಾಮ್ ಜಿ ಕಾಯ್ದೆ ರದ್ದು ಮಾಡಿ ನರೇಗಾ ಜಾರಿ ಮಾಡಿದರೆ ರಾಜ್ಯಕ್ಕೆ ₹3 ಸಾವಿರ ಕೋಟಿ ಹೊರೆ ಬೀಳಲಿದೆ. ಪೂರಕ ಬಜೆಟ್‌ನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಹೆಚ್ಚುವರಿ ಹಣವನ್ನು ಒದಗಿಸಲಾಗುವುದು’ ಎಂದರು.

Publication Date
07/03/2026

Presented by ಪ್ರಜಾವಾಣಿ

## ❖ ಭಾರತ-ಇ.ಯು ಒಪ್ಪಂದ ಪರಿಶೀಲನೆ ಜುಲೈಗೆ ಪೂರ್ಣ

**ಸಂದರ್ಭ: ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಕಾನೂನು ಪರಿಶೀಲನೆ ಜುಲೈ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

- ಈ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ ಮುಂದಿನ ವರ್ಷದಿಂದ ಒಪ್ಪಂದ ಜಾರಿಗೆ ಬರುವ ನಿರೀಕ್ಷೆ ಇದೆ.
- ಈ ವರ್ಷದ ಜನವರಿ 27ರಂದು ಭಾರತ ಮತ್ತು ಐರೋಪ್ಯ ಒಕ್ಕೂಟವು (ಇ.ಯು) ಮುಕ್ತ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ಪೂರ್ಣಗೊಂಡಿರುವುದಾಗಿ ಘೋಷಿಸಿವೆ. ಈ ಒಪ್ಪಂದವನ್ನು ಅತಿದೊಡ್ಡ, ಮುಕ ವಾಪಾರ ಒಪಂದ ಎಂದು ಬಣ್ಣಿಸಲಾಗಿದೆ.
- ಈ ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಭಾರತದಿಂದ ಇ.ಯು ದೇಶಗಳಿಗೆ ರಫ್ತಾಗುವ ಶೇ 93ರಷ್ಟು ಉತ್ಪನ್ನಗಳು ಸುಂಕ ರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ. ಅಲ್ಲದೆ, ಇ.ಯು. ದೇಶಗಳ ಐಷಾರಾಮಿ ಕಾರುಗಳು ಹಾಗೂ ವೈನ್‌ಗಳ ಬೆಲೆಯು ಭಾರತದಲ್ಲಿ ಕಡಿಮೆ ಆಗಲಿದೆ.
- ಈ ಎಫ್‌ಟಿಎ ಅಂದಾಜು 200 ಕೋಟಿ ಜನರ ಬೃಹತ್ ಮಾರುಕಟ್ಟೆಯನ್ನು ಸೃಷ್ಟಿಸಲಿದೆ.

## ❖ ರಷ್ಯಾ ತೈಲ ಖರೀದಿಗೆ ಉಮೇದು

**ಸಂದರ್ಭ: ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲವನ್ನು ಮತ್ತೆ ಬಹಳ ಉಮೇದಿನಿಂದ ಖರೀದಿಸಲು ಆರಂಭಿಸಿವೆ.**

- ಸಮುದ್ರದಲ್ಲಿ ಇರುವ ಹಡಗುಗಳ ಲ್ಲಿನ ರಷ್ಯಾ ತೈಲವನ್ನು ಖರೀದಿಸಲು ಅಮೆರಿಕವು ಮೂವತ್ತು ದಿನಗಳ ಅನುಮತಿಯನ್ನು ನೀಡಿರುವುದು ಇದಕ್ಕೆ ಕಾರಣ. ಆದರೆ, ಅಮೆರಿಕದಿಂದ ನಿರ್ಬಂಧಕ್ಕೆ ಗುರಿಯಾಗಿರುವ ಕಂಪನಿಗಳಿಂದಲೂ ತೈಲವನ್ನು ಖರೀದಿಸಬಹುದೇ ಎಂಬ ವಿಚಾರವಾಗಿ ಭಾರತದ ಕಂಪನಿಗಳು ಕಾನೂನು ಸ್ಪಷ್ಟನೆ ಕೋರಿವೆ.

- ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಪೂರೈಕೆಗೆ ಅಡಚಣೆ ಆಗದಿರಲಿ ಎಂಬ ಕಾರಣಕ್ಕೆ, ಸಮುದ್ರ ಮಾರ್ಗದಲ್ಲಿ ಈಗಾಗಲೇ ಇರುವ ರಷ್ಯಾದ ಕಚ್ಚಾ ತೈಲವನ್ನು ಖರೀದಿಸಲು ಅಮೆರಿಕವು ಮೂವತ್ತು ದಿನಗಳ ಅನುಮತಿ ನೀಡಿದೆ.
- ಭಾರತದ ತೈಲ ಸಂಸ್ಕರಣಾ ಕಂಪನಿಗಳು ಅಂದಾಜು 2 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ರಷ್ಯಾದ ಕಂಪನಿಗಳಿಂದ ಖರೀದಿಸಿವೆ, ನಿರ್ಬಂಧಕ್ಕೆ ಗುರಿಯಾಗದ ಕಂಪನಿಗಳಿಂದಲೇ ಅವು ಹೆಚ್ಚಿನ ಪ್ರಮಾಣದ ತೈಲ ಖರೀದಿಸಿವೆ ಎಂದು ಮೂಲಗಳು ಹೇಳಿವೆ.
- ಡಿಸೆಂಬರ್ ನಂತರದಲ್ಲಿ ರಷ್ಯಾದಿಂದ ತೈಲ ಖರೀದಿ ಮಾಡದೆ ಇದ್ದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಈಗ ಮತ್ತೆ ರಷ್ಯಾದಿಂದ ಖರೀದಿ ಆರಂಭಿಸಿವೆ ಎಂದು ಗೊತ್ತಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಕೂಡ ರಷ್ಯಾದಿಂದ ತೈಲ ಖರೀದಿಸಲು ಮುಂದಾಗಿದೆ.
- 'ಭಾರತಕ್ಕೆ ಅಗತ್ಯವಿರುವ ಕಚ್ಚಾ ತೈಲದಲ್ಲಿ ಶೇ 50ರಷ್ಟು ಪಾಲು ಹೊರ್ಮುಜ್ ಜಲಸಂಧಿಯ ಮೂಲಕ ಬರುತ್ತದೆ. ಹೀಗಾಗಿ, ಅಲ್ಲಿನ ಅಡಚಣೆಯು ಭಾರತದ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತದೆ' ಎಂದು ಕೆಪ್ಲರ್ ಸಂಸ್ಥೆಯ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.
- ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ದಿನವೊಂದಕ್ಕೆ ಅಂದಾಜು 10 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದವು. ಹೀಗಾಗಿ ಈಗ ಅಮೆರಿಕ ನೀಡಿರುವ ವಿನಾಯಿತಿಯಿಂದಾಗಿ, ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಲು ಹಸಿರು ನಿಶಾನೆ ಸಿಕ್ಕಂತಾಗಿದೆ ಎಂದು ಅವರು ವಿವರಿಸಿದ್ದಾರೆ.
- ಅಮೆರಿಕದ ಕ್ರಮದ ಪರಿಣಾಮವಾಗಿ ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ದಿನವೊಂದಕ್ಕೆ 20 ಲಕ್ಷ ಬ್ಯಾರೆಲ್‌ವರೆಗೆ ಕಚ್ಚಾ ತೈಲ ಖರೀದಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

## ❖ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ ಪ್ರಕಟ: ಕಲ್ಲೂರಾಯ, ದಾಸ್‌ಗೆ 'ಗೌರವ ಪ್ರಶಸ್ತಿ'

**ಸಂದರ್ಭ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2025-26ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗಳನ್ನು ಪ್ರಕಟಿಸಿದ್ದು, 'ಗೌರವ ಪ್ರಶಸ್ತಿ'ಗೆ ಗಮಕಿ ಮಧೂರು ಮೋಹನ ಕಲ್ಲೂರಾಯ (ದಕ್ಷಿಣ ಕನ್ನಡ) ಹಾಗೂ ಕಥಾ ಕೀರ್ತನ ಕಲಾವಿದ ಲೋಕೇಶ್ ದಾಸ್ (ಹಾಸನ) ಆಯ್ಕೆಯಾಗಿದ್ದಾರೆ.**

- ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ಹಾಗೂ ರಿಜಿಸ್ಟ್ರಾರ್ ಎನ್. ನರೇಂದ್ರಬಾಬು ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ವಿವಿಧ ವಿಭಾಗಗಳಿಂದ 15 ಕಲಾವಿದರು ಹಾಗೂ ಒಂದು ಸಂಸ್ಥೆಯನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿಯು ತಲಾ ₹50 ಸಾವಿರ ಹಾಗೂ ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ.
- ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ. ವೆಂಕಟರಾಯ್ (ಡೋಲ್), ಕೋಲಾರದ ಎ.ವಿ.ವಿಶ್ವನಾಥ (ಹಾರ್ಮೋನಿಯಂ), ಮೈಸೂರಿನ ಹಂಸಿನಿ ನಾಗೇಂದ್ರ (ಗಾಯನ), ದಕ್ಷಿಣ ಕನ್ನಡದ ನಾಗೇಶ್ ಎ. ಬಪ್ಪನಾಡು (ನಾದಸ್ವರ), ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಧಾರವಾಡದ ಮೃತ್ಯುಂಜಯ ಶೆಟ್ಟರ್ (ಗಾಯನ), ಬಾಗಲಕೋಟೆಯ ರವೀಂದ್ರ ಸೊರಗಾವಿ (ಗಾಯನ), ಗದಗದ ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನೀಯಂ) ಹಾಗೂ ಬೀದರ್‌ನ ವಿಠಲ್ ಸಿದ್ದಪ್ಪ ಪೂಜಾರಿ (ತಬಲಾ) ಅವರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

Dr. Rajkumar IAS/KAS Academy

- ನೃತ್ಯ ವಿಭಾಗದಲ್ಲಿ ಬಳ್ಳಾರಿಯ ಜಿಲಾನಿ ಭಾಷಾ (ಕೂಚಿಪುಡಿ), ಚಿತ್ರದುರ್ಗದ ಶಿವಪ್ರಕಾಶ (ಭರತನಾಟ್ಯ), ಧಾರವಾಡದ ನಾಗರತ್ನ ಹಡಗಲಿ (ಭರತನಾಟ್ಯ), ಸುಗಮ ಸಂಗೀತ ವಿಭಾಗದಲ್ಲಿ ಕೋಲಾರದ ಶ್ರೀಧರ್ ಅಯ್ಯರ್ ಕಥಾಕೀರ್ತನ ವಿಭಾಗದಲ್ಲಿ ಬೆಂಗಳೂರಿನ ಪಿ. ರಾಮಯ್ಯ (ತಬಲಾ), ಗಮಕ ವಿಭಾಗದಲ್ಲಿ ಧಾರವಾಡದ ವಿಶ್ವನಾಥ ಕುಲಕರ್ಣಿ (ವಾಚನ), ವಾದ್ಯ ತಯಾರಿಕೆಯಲ್ಲಿ ಬೆಂಗಳೂರಿನ ಕೃಷ್ಣಮೂರ್ತಿ ಅವರನ್ನು ಹಾಗೂ ಸಂಘ ಸಂಸ್ಥೆ ವಿಭಾಗದಲ್ಲಿ ಕೊಪ್ಪಳದ ಗಂಗಾವತಿಯ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯವನ್ನು ಆಯ್ಕೆ ಮಾಡಲಾಗಿದೆ.
- 'ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ತಿಳಿಸಿದ್ದಾರೆ.

**-------------------------------------------ಶುಭವಂದನೆಗಳು-------------------------------------------**

Dr. Rajkumar IAS/KAS Academy